
ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ
ಕನ್ನಡ ವಾರಪತ್ರಿಕೆ
ಸಂಪುಟ 10 ಸಂಚಿಕೆ 41 ಅಕ್ಟೋಬರ್ 09, 2016 ಪುಟ 16 ರೂ.10/-
Web : www.janashakthi.co.in e-mail : js_weekly@yahoo.com



ಟ್ರಂಪ್ ಗೆದ್ದರೆ ?







ಕಾವೇರಿ : ಕೇಂದ್ರ ಮಧ್ಯಸ್ತಿಕೆಯ ಪ್ರಹಸನ



ಸರ್ಜಿಕಲ್ ದಾಳಿ : ಉರಿ, ಪಠಾಣಕೋಟ್ ತಡೆಯುವುದೇ ?

ಖೈರ್ಲಾಂಜಿ 10:



ಇನ್ನೆಂದೂ ಬೇಡ

ಕಾಂಗ್ರೆಸ್–ಜೆಡಿ(ಎಸ್) ಮತ್ತೆ ದೋಸ್ತಿ

ಫ್ಯಾಸಿಸ್ಟ್ ಅಥವಾ ಸರ್ವಾಧಿಕಾರಶಾಹಿ? :ಕಾರಟ್

ಭೂಮಿ ಚಳುವಳಿ : ನವೆಂಬರ್ 18 ಜೈಲ್ ಭರೋ

ದೋಷಪೂರ್ಣ ಪ್ಯಾರಿಸ್ ಒಪ್ಪಂದಕ್ಕೆ ಅನುಮೋದನೆಯ ಪ್ರಕಟಣೆ

ಸಂಸತ್ತಿಗೆ ನೀಡಿದ ಭರವಸೆಯ ಉಲ್ಲಂಘನೆ-ಸಿಪಿಐ(ಎಂ) ಪೊಲಿಟ್‌ಬ್ಯುರೊ

ಪ್ರಧಾನ ಮಂತ್ರಿಗಳು ಹವಾಮಾನ ಬದಲಾವಣೆ ಕುರಿತು ಇತ್ತೀಚೆಗೆ ಪ್ಯಾರಿಸ್‌ನಲ್ಲಿ ಆದ ಒಪ್ಪಂದವನ್ನು ಭಾರತ ಅಕ್ಟೋಬರ್ 2ರಂದು ಗಾಂಧಿ ಜಯಂತಿಯ ದಿನ ಅನುಮೋದಿಸುವುದಾಗಿ ಸೆಪ್ಟಂಬರ್ 25ರಂದು ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿಯ ಸಭೆಯಲ್ಲಿ ಪ್ರಕಟಿಸಿದ್ದಾರೆ. ಇದು ಆಶ್ಚರ್ಯಕರ ಸಂಗತಿ ಮತ್ತು ಈ ಬಿಜೆಪಿ ಸರಕಾರ ಭಾರತದ ಸಂಸತ್ತಿಗೆ ನೀಡಿದ ಭರವಸೆಯ ಉಲ್ಲಂಘನೆಯೂ ಆಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ. ಇದು ಭಾರತದ ಹಿತದಲ್ಲಿಲ್ಲ, ಮತ್ತು ದೇಶದ ಬಹುಪಾಲು ಜನಗಳ ಒಂದು ಉತ್ತಮ ಬದುಕಿಗೆ ಅಗತ್ಯವಾದ ಇಂಧನ ಒದಗಿಸಲು ಅಡ್ಡಿಯಾಗುತ್ತದೆ ಎಂದು ಅದು ಹೇಳಿದೆ. ವಾಸ್ತವವಾಗಿ ಸರಕಾರ ಈ ವಿಷಯದಲ್ಲಿ ಅಮೆರಿಕಾದ ಒತ್ತಡಗಳಿಗೆ ಶರಣಾಗಿ ತಿಪ್ಪರಲಾಗ ಹಾಕಿದೆ ಎಂದು ಸಿಪಿಐ(ಎಂ) ಹೇಳಿದೆ.

ಪ್ಯಾರಿಸ್ ಶೃಂಗ ಸಭೆ ಮುಗಿದ ಕೂಡಲೇ ಸಂಸತ್ತಿನಲ್ಲಿ ಈ ಬಗ್ಗೆ ಪ್ರಶ್ನೆ ಬಂದಾಗ, ಭಾರತ ಪರಿಸರ, ಅರಣ್ಯಗಳು ಮತ್ತು ಇಂಧನ ಕುರಿತ ರಾಷ್ಟ್ರೀಯ ಕಾನೂನುಗಳನ್ನು ಪರೀಕ್ಷಿಸಿ ಈ ಒಪ್ಪಂದದ ವಿವಿಧ ಅಂಶಗಳನ್ನು ಎಷ್ಟರ ಮಟ್ಟಿಗೆ ಅನುಷ್ಠಾನಗೊಳಿಸಲು ಸಾಧ್ಯ ಎಂದು ನಿರ್ಧರಿಸುವ ವರೆಗೆ ಅನುಮೋದನೆ ಕೊಡುವುದಿಲ್ಲ, ಹವಾಮಾನ ಬದಲಾವಣೆ ಕುರಿತ ಕೊಪನ್‌ಹೆಗನ್ ಶೃಂಗ ಸಭೆಯ ನಂತರ ಭಾರತದ ಸಂಸತ್ತು ಈ ಬಗ್ಗೆ ದೀರ್ಘವಾಗಿ ಚರ್ಚಿಸಿದ ಸಂದರ್ಭದಲ್ಲಿ ಹಾಕಿದ್ದ 'ಕೆಂಪು ಗೆರೆ'ಗಳನ್ನು ಈ ಬಿಜೆಪಿ ಸರಕಾರ ದಾಟುವುದಿಲ್ಲ ಎಂದು ಭರವಸೆ ನೀಡಲಾಗಿತ್ತು.

ಅಲ್ಲದೆ ಭಾರತ ಈ ಪ್ಯಾರಿಸ್ ಒಪ್ಪಂದವನ್ನು ಅನುಮೋದಿಸಬೇಕು ಎಂಬ ಸೂಚನೆಯನ್ನು ಇತ್ತೀಚೆಗೆ ನಡೆದ ಜಿ-20 ಶೃಂಗ ಸಭೆಯ ಸಂದರ್ಭದಲ್ಲೂ ತಳ್ಳಿ ಹಾಕಲಾಗಿತ್ತು. ಭಾರತಕ್ಕಿಂತ ಬಹಳ ಹೆಚ್ಚು ಇಂಗಾಲ ಉತ್ಸರ್ಜನೆ ಮಾಡುವ ಯುರೋಪಿಯನ್ ಒಕ್ಕೂಟ ಮತ್ತು ಇತರ ಅಭಿವೃದ್ಧಿ ಹೊಂದಿರುವ ದೇಶಗಳೇ ಇದುವರೆಗೆ ಈ ಒಪ್ಪಂದವನ್ನು ಅನುಮೋದಿಸಿಲ್ಲ ಮತ್ತು ಸ್ಯೋಲ್‌ನಲ್ಲಿ ನಡೆದ ಎನ್‌ಎಸ್‌ಜಿ(ಪರಮಾಣು ಪೂರೈಕೆದಾರರ ಗುಂಪು)ಯ ಸಭೆಯಲ್ಲೂ ಈ ಒಪ್ಪಂದವನ್ನು ಅನುಮೋದಿಸುವುದನ್ನು ತನಗೆ ಎನ್‌ಎಸ್‌ಜಿ ಸದಸ್ಯತ್ವ ಕೊಡುವ ಪ್ರಶ್ನೆಯೊಂದಿಗೆ ತಳಕು ಹಾಕಿತ್ತು ಎಂಬ ಸಂಗತಿಗಳತ್ತ ಸಿಪಿಐ(ಎಂ) ಗಮನ ಸೆಳೆದಿದೆ. ಜೂನ್‌ನಲ್ಲಿ ಒಬಾಮ-ಮೋದಿ ಭೇಟಿಯ ನಂತರ ಭಾರತದ ವಿದೇಶಾಂಗ ಕಾರ್ಯದರ್ಶಿ, ಭಾರತದ ರಾಷ್ಟ್ರೀಯ ಕಾನೂನುಗಳನ್ನು ಪರೀಕ್ಷಿಸುವ ಪ್ರಕ್ರಿಯೆ ನಡೆಯುತ್ತಿದೆ, ಮತ್ತು ಅದು ಪೂರ್ಣಗೊಳ್ಳುವ ವರೆಗೆ ಒಪ್ಪಂದವನ್ನು ಅನುಮೋದಿಸುವ ಪ್ರಶ್ನೆಯೇ ಇಲ್ಲ ಎಂದು ಮಾಧ್ಯಮಗಳಿಗೆ ತಿಳಿಸಿದ್ದರು. ಅದೇ ರೀತಿ ನೀತಿ ಆಯೋಗದ ಮುಖ್ಯಸ್ಥರು ಭಾರತ ಇನ್ನೂ ಆಂತರಿಕ ಕ್ರಿಯೆಗಳ ದೃಷ್ಟಿಯಿಂದ ಸಿದ್ಧವಾಗಿಲ್ಲ, ಆದ್ದರಿಂದ ತಕ್ಷಣವೇ ಈ ಒಪ್ಪಂದವನ್ನು ಅನುಮೋದಿಸಲು ಸಾಧ್ಯವಿಲ್ಲ ಎಂದಿದ್ದರು.

ಈ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿಗಳ ಪ್ರಕಟಣೆ ಭಾರತವು ಅಮೆರಿಕಾದ ಜಾಗತಿಕ ವ್ಯೂಹದಲ್ಲಿ ಒಂದು ದೈನೇಸಿಯಾಗಿ ಮಾಡುತ್ತಿದೆ, ಅಮೆರಿಕಾದ ಒತ್ತಡಗಳಿಗೆ ತಲೆಬಾಗಿ ಭಾರತದ ಬಹು ಆವಶ್ಯಕ ಇಂಧನ ಆವಶ್ಯಕತೆಗಳನ್ನು ಚೌಕಾಸಿ ಮಾಡಿ ಸರಕಾರ ಈ ತಿಪ್ಪರಲಾಗವನ್ನು ಹಾಕಿದೆ ಎನ್ನುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಪ್ರಧಾನ ಮಂತ್ರಿಗಳ ಈ ಪ್ರಕಟಣೆಯನ್ನು ಬಲವಾಗಿ ಖಂಡಿಸಿದೆ, ಇದು ಭಾರತದ ಹಿತದಲ್ಲಿ ಇಲ್ಲ, ಬಡತನ ನಿರ್ಮೂಲನೆ ಮಾಡಲು ಮತ್ತು ನಮ್ಮ ಬಹುಪಾಲು ಜನಗಳ ಜೀವನಾಧಾರವನ್ನು ಉತ್ತಮಗೊಳಿಸಲು ಅಗತ್ಯವಾದ ಇಂಧನಗಳನ್ನು ಒದಗಿಸಲು ಸರಕಾರ ಬದ್ಧವಾಗಿರಬೇಕು, ಆದರೆ ಇದು ಅದಕ್ಕೆ ಅನುಗುಣವಾಗಿಲ್ಲ ಎಂದು ಬಲವಾಗಿ ಖಂಡಿಸಿದೆ. ಈ ಮೊದಲು ಸಂಸತ್ತಿಗೆ ಭರವಸೆ ನೀಡಿರುವುದರಿಂದ ಪ್ಯಾರಿಸ್ ಒಪ್ಪಂದವನ್ನು ಅನುಮೋದಿಸುವ ಈ ನಿರ್ಧಾರವನ್ನು ಸಂಸತ್ತಿನ ಚರ್ಚೆಗೆ ಮತ್ತು ಅನುಮೋದನೆಗೆ ಒಳಪಡಿಸಬೇಕು ಎಂದು ಅದು ಆಗ್ರಹಿಸಿದೆ.

ಅಮೆರಿಕಾದ ಒತ್ತಡದಿಂದ ತಿಪ್ಪರಲಾಗ-ಯೆಚೂರಿ

ಮೋದಿ ಸರಕಾರ ಹೀಗೇಕೆ ತನ್ನ ನಿಲುವುಗಳಲ್ಲಿ ತಿಪ್ಪರಲಾಗ ಹಾಕುತ್ತಿದೆ? ಇದು ಮತ್ತೊಮ್ಮೆ ಅದು ಅಮೆರಿಕಾದ ಎದುರು ಶರಣಾಗಿರುವುದನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಟ್ವೀಟ್ ಮಾಡಿದ್ದಾರೆ.

ಹವಾಮಾನ ಬದಲಾವಣೆ ಇಡೀ ಮಾನವಕುಲವನ್ನು ಬಾಧಿಸುತ್ತಿರುವ ಗಂಭೀರ ಸಮಸ್ಯೆ, ಅದನ್ನು ಎದುರಿಸಲು ಒಂದು ಅಂತರ್ರಾಷ್ಟ್ರೀಯ ಒಪ್ಪಂದ ಅಗತ್ಯವೆನ್ನುವುದರಲ್ಲಿ ಸಂದೇಹವಿಲ್ಲ. ಆದರೆ, ಈಗಾಗಲೇ ಸಿಪಿಐ(ಎಂ) ಹೇಳಿರುವಂತೆ, ಪ್ಯಾರಿಸ್ ಒಪ್ಪಂದ ದೂಷಣೆಯ ಪ್ರಮಾಣವನ್ನು ಸುರಕ್ಷಿತ ಮಟ್ಟಕ್ಕೆ ಇಳಿಸುವಲ್ಲಿಯಾಗಲೀ, ಅಥವ ಅಂತರ್ರಾಷ್ಟ್ರೀಯ ವಾಯುದೂಷಣೆ ಹತೋಟಿ ವ್ಯವಸ್ಥೆಯನ್ನು ತರುವಲ್ಲಾಗಲೀ ಅತ್ಯಂತ ದೋಷಪೂರ್ಣವಾದ ಒಪ್ಪಂದ.

ತಮ್ಮ ಅಭಿವೃದ್ಧಿಗಾಗಿ ವಾತಾವರಣಕ್ಕೆ ಇಂಗಾಲವನ್ನು ದೀರ್ಘಕಾಲದಿಂದ ಹರಿಯ ಬಿಡುತ್ತ ಬಂದಿರುವ ಅಭಿವೃದ್ಧಿ ಹೊಂದಿದ ದೇಶಗಳದ್ದೇ ಈ ದೂಷಣೆ ಹೆಚ್ಚಿಸುವಲ್ಲಿ ಸಿಂಹಪಾಲು-ಸುಮಾರು 75ಶೇ.. ಆದ್ದರಿಂದ ದೂಷಣೆಯ ಪ್ರಮಾಣವನ್ನು ಇಳಿಸುವಲ್ಲಿ ಅಭಿವೃದ್ಧಿ ಹೊಂದಿರುವ ದೇಶಗಳು ಮತ್ತು ಈಗ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಸಮಾನ ಹೊಣೆ ವಹಿಸಬೇಕು ಎಂದು ಹೇಳುವುದು ಸರಿಯಲ್ಲ, ಏಕೆಂದರೆ ಈಗಷ್ಟೇ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಪ್ರಸ್ತುತ ಸಹಜವಾಗಿಯೇ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗಿಂತ ಹೆಚ್ಚಿನ ಇಂಗಾಲ ಉತ್ಸರ್ಜನೆ ಮಾಡುತ್ತವೆ, ಅವು ಅಭಿವೃದ್ಧಿ ಹೊಂದಿರುವ ದೇಶಗಳಷ್ಟೇ ಹೊಣೆ ನಿರ್ವಹಿಸಬೇಕೆನ್ನುವುದು ಅವು ಅಭಿವೃದ್ಧಿ ಹೊಂದುವುದು ಬೇಡ ಎಂದಂತೆಯೇ ಸರಿ, ಆದ್ದರಿಂದ 'ಸಮಾನ, ಆದರೆ ಭಿನ್ನೀಕರಿಸಿದ

ಪುಟ 7 ನೋಡಿ

ಪಠಾಣಕೋಟ್ ಮತ್ತು ಉರಿಯಂತಹ ಘಟನೆಗಳು ಇನ್ನೂ ನಡೆಯುವದಿಲ್ಲ ಎಂಬುದು ನಮ್ಮ ನಿರೀಕ್ಷೆ -ಸಿಪಿಐ(ಎಂ) ಪೊಲಿಟ್‌ಬ್ಯುರೊ

ಸೆಪ್ಟಂಬರ್ 28-29ರ ನಡುರಾತ್ರಿಯಿಂದ ಮುಂಜಾವಿನ ವರೆಗೆ ಭಾರತೀಯ ಸೇನೆಯ ಕಮಾಂಡೋಗಳು ಕ್ಷಿಪ್ರ ಮತ್ತು ಸೀಮಿತ ಕಾರ್ಯಾಚರಣೆ ನಡೆಸಿ ಹತೋಟಿ ರೇಖೆಯ ಬಳಿ ಭಾರತದೊಳಕ್ಕೆ ಪ್ರವೇಶಿಸಲು ಜಮಾವಣೆಗೊಂಡಿದ್ದ ಭಯೋತ್ಪಾದಕರ ಕ್ಯಾಂಪುಗಳ ಮೇಲೆ ದಾಳಿ ಮಾಡಿ ಅವರ ಪ್ರಯತ್ನಗಳನ್ನು ವಿಫಲ ಗೊಳಿಸಲಾಗಿದೆ, ಇದರಲ್ಲಿ ಭಯೋತ್ಪಾದಕರಿಗೆ ಮತ್ತು ಅವರಿಗೆ ರಕ್ಷಣೆ ನೀಡು ತ್ತಿರುವವರಿಗೆ ಸಾವು-ನೋವುಗಳು ಉಂಟಾಗಿವೆ, ಈ ಕಾರ್ಯಾಚರಣೆ ಕೊನೆಗೊಂಡಿದೆ ಎಂದು ಸೇನಾಧಿಕಾರಿಗಳು ಮತ್ತು ವಿದೇಶಾಂಗ ಮಂತ್ರಾಲಯದ ಅಧಿಕಾರಿಗಳು ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದ್ದಾರೆ.

ನಂತರ ಭಾರತ ಸರಕಾರ ರಾಜಕೀಯ ಪಕ್ಷಗಳ ಮುಖಂಡರನ್ನು ಕರೆದು ಈ ಬಗ್ಗೆ ಮಾಹಿತಿ ನೀಡಿದೆ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಈ ಸಭೆಯಲ್ಲಿ ಹಾಜರಿದ್ದರು.

ಕುಪ್ವಾರ ಮತ್ತು ಪೂಂಚ್ ಗಡಿಯಾಚೆ ಎರಡು ಕಡೆಗಳಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದೆ, ಈ ಕಾರ್ಯಾಚರಣೆ ಸೆಪ್ಟಂಬರ್ 29ರ ಬೆಳಗ್ಗೆ ಮುಕ್ತಾಯಗೊಂಡಿದೆ ಎಂದು ಸರಕಾರ ಹೇಳಿರುವುದಾಗಿ ಈ ಕುರಿತು ನೀಡಿರುವ ಹೇಳಿಕೆಯಲ್ಲಿ ತಿಳಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಕದನ ಮತ್ತಷ್ಟು ಮುಂದುವರೆಯುವುದಿಲ್ಲ ಎಂದು ಆಶಿಸಿದೆ.

ಇನ್ನು ಪಠಾಣಕೋಟ್ ಮತ್ತು ಉರಿಯಂತಹ ಘಟನೆಗಳು ಇನ್ನೂ ನಡೆಯುವದಿಲ್ಲ ಎಂಬ ನಿರೀಕ್ಷೆಯನ್ನು ಸಿಪಿಐ(ಎಂ) ವ್ಯಕ್ತಪಡಿಸಿದೆ. ಗಡಿಯಾಚೆಯ ಭಯೋತ್ಪಾದನೆಯಿಂದ ಜನರಿಗೆ ಭದ್ರತೆ ಮತ್ತು ರಕ್ಷಣೆ ಒದಗಿಸಬೇಕು ಎಂದು ತಾವು ಸದಾ ಹೇಳುತ್ತಾ ಬಂದಿರುವುದನ್ನು ನೆನಪಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಪರಿಸ್ಥಿತಿಯನ್ನು ತಿಳಿಗೊಳಿಸಲು ರಾಜತಾಂತ್ರಿಕ ಮತ್ತು ರಾಜಕೀಯ ನಡೆಗಳನ್ನು ಮುಂದುವರೆಸಬೇಕು ಎಂದು ಸರಕಾರವನ್ನು ಆಗ್ರಹಿಸಿದೆ.

ಮಾತೆಂದರೆ ಇದು

ಪ್ರಗತಿಯ ಪರವಾಗಿರುವ ಪ್ರತಿಯೊಬ್ಬರೂ ಹಳೆಯ ನಂಬಿಕೆಗಳನ್ನು ಎಳೆ-ಎಳೆಯಾಗಿ ಪ್ರಶ್ನಿಸಬೇಕು, ಒಂದೊಂದಾಗಿ ಅವುಗಳ ಸಾರ್ಥಕತೆಗೆ ಸವಾಲು ಹಾಕಬೇಕು, ಅವುಗಳ ಪ್ರತಿಯೊಂದು ಅಂಶವನ್ನು ವಿವರವಾಗಿ ವಿಶ್ಲೇಷಿಸಬೇಕು, ಅರ್ಥ ಮಾಡಿಕೊಳ್ಳಬೇಕು. ತದನಂತರ ಯಾವುದೇ ತತ್ವದಲ್ಲಿ ನಂಬಿಕೆ ಬಂದಲ್ಲಿ ಅದು ಶ್ಲಾಘನೀಯ. ಆ ನಂಬಿಕೆ ತಪ್ಪೇ ಆಗಿರಬಹುದು. ಆದರೆ ಅದು ತರ್ಕದಿಂದ ಹುಟ್ಟಿರುವುದರಿಂದ ಅದನ್ನು (ತನಗೆ ತಪ್ಪೆನಿಸಿದಾಗ) ಸರಿಪಡಿಸಿಕೊಳ್ಳಬಹುದಾದ ಎಲ್ಲ ಸಾಧ್ಯತೆಗಳೂ ಇರುತ್ತವೆ.

-ಸರ್ದಾರ್ ಭಗತ್‌ಸಿಂಗ್

ಕೃಷಿ,ರೈತಾಪಿಗಳು ಮತ್ತು ದೇಶವನ್ನು ಉಳಿಸಲು 'ದಿಲ್ಲಿ ಚಲೋ': ಕಿಸಾನ್ ಸಂಘರ್ಷ ರ‍್ಯಾಲಿ

ಕೃಷಿಯನ್ನು ಉಳಿಸಲು, ರೈತಾಪಿ ಜನಗಳನ್ನು ಉಳಿಸಲು, ದೇಶವನ್ನು ಉಳಿಸಲು ನವಂಬರ್2ರಿಂದ 24ರ ವರೆಗೆ 'ಕಿಸಾನ್ ಸಂಘರ್ಷ ಜಾತಾ' ನಡೆಸಲು, ಈ ಜಾತಾದ ಕೊನೆಯಲ್ಲಿ ದಿಲ್ಲಿಯನ್ನು ತಲುಪಿ ನವಂಬರ್24ರಂದು ಕಿಸಾನ್ ಸಂಘರ್ಷ ರ‍್ಯಾಲಿ ನಡೆಸಲು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಕರೆ ನೀಡಿದೆ.

'ಆತ್ಮಹತ್ಯೆಗಳು ಬೇಡ:
ನವ-ಉದಾರವಾದಿ ಧೋರಣೆಗಳು ಮತ್ತು
ಕೋಮುವಾದಿ ಶಕ್ತಿಗಳ ವಿರುದ್ಧ
ಹೋರಾಟದಲ್ಲಿ ಒಗ್ಗೂಡಿ!" ಮತ್ತು
'ಕೃಷಿಯ ಕಂಪನೀಕರಣ ಬೇಡ:
ಕೃಷಿ ಸಹಕಾರಿಗಳು ಬರಲಿ!'


ಎಂಬ ಘೋಷಣೆಗಳೊಂದಿಗೆ ಕೇರಳ, ತಮಿಳುನಾಡು, ಜಮ್ಮು ಮತ್ತು ಕಾಶ್ಮೀರ ಹಾಗೂ ಬಂಗಾಲದಿಂದ ಜಾತಾಗಳು ಹೊರಡುತ್ತಿವೆ.

ಮೊದಲ ಜಾತಾ ತಮಿಳುನಾಡಿನ ವಿರುಧುನಗರದಿಂದ ನವಂಬರ್ 2ರಂದು ಆರಂಭವಾಗಲಿದೆ, ಎರಡು ಜಾತಾಗಳು ಜಮ್ಮು ಮತ್ತು ಕೊಲ್ಕತಾದಿಂದ ನವಂಬರ್ 8ರಂದು ಆರಂಭವಾಗಲಿವೆ. ನಾಲ್ಕನೇ ಜಾತಾ ಕನ್ಯಾಕುಮಾರಿಯಿಂದ ನವಂಬರ್ 10ರಂದು ಹೊರಡಲಿದೆ. ರಾಜ್ಯಗಳಲ್ಲಿ ಉಪಜಾತಾಗಳು ಸಂಚರಿಸುತ್ತವೆ. ಅಸ್ಸಾಂನ ಗುವಾಹಾಟಿಯಿಂದ ಮತ್ತು ಒಡಿಶಾದ ಭುವನೇಶ್ವರದಿಂದ ಹೊರಡುವ ಎರಡು ಉಪಜಾತಾಗಳು ಕೊಲ್ಕತ ಜಾತಾವನ್ನು ಸೇರಿಕೊಳ್ಳುತ್ತವೆ ಎಂದು ಎಐಕೆಎಸ್ ಹೇಳಿದೆ.

ರೈತ ಮುಖಂಡರು, ಕಾರ್ಮಿಕ ಮುಖಂಡರು, ವಿದ್ಯಾರ್ಥಿ, ಯುವಜನ, ದಲಿತರು ಮತ್ತು ಆದಿವಾಸಿಗಳ ಸಂಘಟನೆಗಳ ಮುಖಂಡರು, ಜತೆಗೆ ವಿಭಿನ್ನ ಜನತಾ ಆಂದೋಲನಗಳು ಮತ್ತು ಭೂಮಿ ಅಧಿಕಾರ್ ಆಂದೋಲನ ಈ ಜಾತಾದಲ್ಲಿ ಭಾಗವಹಿಸಲಿದ್ದಾರೆ. ಇದು ದೇಶದ ಉದ್ದಗಲವನ್ನೂ ವ್ಯಾಪಿಸಿ ನವಂಬರ್ 24ರಂದು ದಿಲ್ಲಿಯಲ್ಲಿ ಬೃಹತ್ 'ಕಿಸಾನ್ ಸಂಘರ್ಷ ರ‍್ಯಾಲಿ' ನಡೆಯಲಿದೆ.

ಈ ಸಂಘರ್ಷ ಜಾತಾದ ಬೇಡಿಕೆಗಳು ಹೀಗಿವೆ:

- ❑ ಭೂಹೀನರಿಗೆ ಭೂಮಿ
- ❑ ರೈತರಿಗೆ ಫಲದಾಯಕ ಬೆಲೆಗಳು
- ❑ ಸಣ್ಣ ಮತ್ತು ಮಧ್ಯಮ ರೈತರ ಸಾಲಮನ್ನಾ
- ❑ ಬಡ ಮತ್ತು ಮಧ್ಯಮ ರೈತರಿಗೆ ಬಡ್ಡಿರಹಿತ ಸಾಲ ಮತ್ತು ಕೃಷಿ ಸಾಲ 4ಶೇ. ಬಡ್ಡಿದರದಲ್ಲಿ
- ❑ ಎಲ್ಲ ಗದ್ದೆಗಳಿಗೆ ಅಗ್ಗದರಗಳಲ್ಲಿ ಲಾಗುವಾಡುಗಳು ಮತ್ತು ನೀರು
- ❑ ಮನರೇಗದಲ್ಲಿ 200 ದಿನಗಳ ಕೆಲಸ, 300ರೂ. ಕನಿಷ್ಟ ಕೂಲಿ
- ❑ ಆತ್ಮಹತ್ಯೆ ಮಾಡಿಕೊಂಡವರ ಕುಟುಂಬಗಳಿಗೆ 10ಲಕ್ಷ ರೂ. ಪರಿಹಾರ
- ❑ ಎಲ್ಲರಿಗೂ ಬೆಳೆ ವಿಮೆ
- ❑ ಸಣ್ಣ ಮತ್ತು ಮಧ್ಯಮ ರೈತರು ಹಾಗೂ ಗ್ರಾಮೀಣ ಬಡವರಿಗೆ 3000ರೂ. ಪಿಂಚಣಿ
- ❑ ಭೂಕಬಳಿಕೆ ನಿಲ್ಲಬೇಕು
- ❑ ಕಾರ್ಪೊರೇಟ್ ಇ-ಮಾರ್ಕೆಟಿಂಗ್ ಮತ್ತು ಕೃಷಿಯಲ್ಲಿ ಎಫ್‌ಡಿಐ ನಿಲ್ಲಬೇಕು
- ❑ ರೈತರು ಜಾನುವಾರುಗಳನ್ನು ಮಾರಲು ಇರುವ ನಿಷೇಧವನ್ನು ತೆಗೆಯಬೇಕು.
- ❑ ಮಹಿಳೆಯರು, ದಲಿತರು, ಬುಡಕಟ್ಟು ಜನಗಳು ಮತ್ತು ಮುಸ್ಲಿಮರ ಮೇಲಿನ ಅತ್ಯಾಚಾರಗಳು ನಿಲ್ಲಬೇಕು.



ಕೇಂದ್ರದ ಮಧ್ಯಸ್ತಿಕೆ ಎಂಬ ಪ್ರಹಸನ

ಸಂಪಾದಕೀಯ

ಕಾವೇರಿ ವಿವಾದವನ್ನು ಇನ್ನಷ್ಟು ಕಗ್ಗಂಟಾಗಿಸಲು ಎಲ್ಲಾ ಅಂಗಗಳು ಪೈಪೋಟಿಗೆ ಬಿದ್ದಂತಿದೆ. ಈ ವಾರ ಕೇಂದ್ರ ಸರಕಾರದ ಅರೆಮನಸ್ಸಿನ ಮಧ್ಯಸ್ತಿಕೆಯ ನಾಟಕ ಮತ್ತು ಸೆ.30ರ ಸುಪ್ರೀಂ ಕೋರ್ಟಿನ ತೀರ್ಪು, ವಿವಾದವನ್ನು ಬಗೆಹರಿಸದೆ ತೀವ್ರ ಸಂವಿಧಾನಿಕ ಬಿಕ್ಕಟ್ಟಿನತ್ತ ತಳ್ಳುವ ಎಲ್ಲಾ ಸೂಚನೆಗಳಿವೆ.

ತಮಿಳುನಾಡಿಗೆ ಆರು ದಿನಗಳ ಕಾಲ ದಿನಕ್ಕೆ 6 ಸಾವಿರ ಕ್ಯೂಸೆಕ್ ನೀರು ಬಿಡುವಂತೆ ಸೆಪ್ಟೆಂಬರ್ 20ರ ಆದೇಶದಲ್ಲಿ ಸುಪ್ರೀಂ ಕೋರ್ಟ್ ಕರ್ನಾಟಕಕ್ಕೆ ಸೂಚಿಸಿತ್ತು. ಆದರೆ, ನೀರಿನ ಲಭ್ಯತೆ ಇಲ್ಲದ್ದರಿಂದ ಸೆಪ್ಟೆಂಬರ್ 23ರಂದು ವಿಧಾನಮಂಡಲದ ವಿಶೇಷ ಅಧಿವೇಶನ ನಡೆಸಿ ಹಾಲಿ ಸಂಗ್ರಹವಾದ ನೀರನ್ನು ಕುಡಿಯುವ ಉದ್ದೇಶಕ್ಕೆ ಮಾತ್ರ ಕೊಡಲಾಗುವುದು. ಬೇರಾವ ಉದ್ದೇಶಕ್ಕೂ ಬಿಡುಗಡೆ ಮಾಡಲು ಸಾಧ್ಯವಿಲ್ಲವೆಂಬ ನಿರ್ಣಯ ತೆಗೆದುಕೊಂಡಿತ್ತು.

ಸದನದ ನಿರ್ಣಯದ ಪ್ರತಿಯನ್ನು ನ್ಯಾಯಪೀಠಕ್ಕೂ ಕಳುಹಿಸಿ ಆದೇಶ ಮಾರ್ಪಾಡಿಗೆ ಕೋರಿಕೊಳ್ಳಲಾಯಿತು. ಸೆಪ್ಟೆಂಬರ್ 27ರಂದು ಪುನಃ ವಿಚಾರಣೆ ನಡೆಸಿದ ಕೋರ್ಟ್, ಮೂರು ದಿನಗಳ ಕಾಲ ನಿತ್ಯ 6 ಸಾವಿರ ಕ್ಯೂಸೆಕ್‌ನಂತೆ ಒಟ್ಟು 18 ಸಾವಿರ ಕ್ಯೂಸೆಕ್ ಬಿಡುಗಡೆ ಮಾಡುವಂತೆ ಸೂಚಿಸಿತು. ಆದರೆ, ಸದನದ ನಿರ್ಣಯಕ್ಕೆ ಬದ್ಧವಾಗುಳಿದ ಸರಕಾರ ನೀರು ಬಿಡುವುದನ್ನು ಮುಂದೂಡಿತು. ಈ ತೀರ್ಮಾನಕ್ಕೆ ಮುನ್ನ ಸರ್ವಪಕ್ಷ ಮತ್ತು ಮಂತ್ರಿ ಪರಿಷತ್ ಸಭೆ ಕರೆದು ವಿಶ್ವಾಸಕ್ಕೆ ತೆಗೆದುಕೊಳ್ಳಲಾಯಿತು. ಸೆಪ್ಟೆಂಬರ್ 27ರ ಸುಪ್ರೀಂ ಕೋರ್ಟ್ ತೀರ್ಪು ಕೇಂದ್ರ ಸರಕಾರ ಎರಡು ರಾಜ್ಯಗಳ ಸಭೆ ಕರೆದು ಸಮಸ್ಯೆ ಪರಿಹರಿಸಲು ಪ್ರಯತ್ನಿಸಬೇಕೆಂದು ಸಹ ನಿರ್ದೇಶಿಸಿತ್ತು. ಇದು ಈ ಪತ್ರಿಕೆ ಮತ್ತು ಎಡ ಪಕ್ಷಗಳು ಪ್ರತಿಪಾದಿಸುತ್ತಾ ಬಂದಿದ್ದ ನಿಲುವನ್ನು ಪುಷ್ಟೀಕರಿಸುವ ಸ್ವಾಗತಾರ್ಹ ನಡೆಯಾಗಿತ್ತು.

ಸೆ. 29ರಂದು ಕೇಂದ್ರ ನೀರಾವರಿ ಸಚಿವೆ ಉಮಾ ಭಾರತಿ ಎರಡು ರಾಜ್ಯಗಳ ಪ್ರತಿನಿಧಿಗಳ ಸಭೆ ಕರೆದಿದ್ದರು. ಕರ್ನಾಟಕ ಮುಖ್ಯಮಂತ್ರಿ ಮತ್ತು ತಮಿಳುನಾಡಿನ ನೀರಾವರಿ ಮಂತ್ರಿಗಳ ನೇತೃತ್ವದಲ್ಲಿ ಎರಡೂ ರಾಜ್ಯದ ನಿಯೋಗಗಳು ಸಭೆಯಲ್ಲಿ ಭಾಗವಹಿಸಿದ್ದವು. ನೀರು ಲಭ್ಯತೆಯ ಬಗ್ಗೆ ವಾಸ್ತವಾಂಶ ಅರಿಯಲು ಎರಡೂ ರಾಜ್ಯಗಳಿಗೆ ತಜ್ಞರ ತಂಡ ಕಳಿಸಬೇಕೆಂದು ಕರ್ನಾಟಕ ಒತ್ತಾಯಿಸಿತು. ಆದರೆ ತಮಿಳುನಾಡು ನಿಯೋಗ ಅದನ್ನು ವಿರೋಧಿಸಿತು. ಉಮಾ ಭಾರತಿ ಕೇಂದ್ರದ ಪರವಾಗಿ ವಿವಾದ ಬಗೆಹರಿಸಲು ಯಾವುದೇ ಪ್ರಸ್ತಾವಗಳನ್ನು ಇಡಲಿಲ್ಲ. ಎರಡೂ ರಾಜ್ಯಗಳನ್ನು ಸಾಮಾನ್ಯ ಸೂತ್ರವೊಂದಕ್ಕೆ ಒಪ್ಪಿಸುವ ಯಾವುದೇ ಪ್ರಯತ್ನವನ್ನು ಮಾಡಿಲ್ಲ. ಎರಡೂ ರಾಜ್ಯಗಳು ನೇರವಾಗಿ ಮಾತುಕತೆ ನಡೆಸಿ ಪರಿಹರಿಸಿಕೊಳ್ಳಬೇಕೆಂದು ಕೈ ತೊಳೆದುಕೊಂಡರು. ಮಾಧ್ಯಮಗಳ ಎದುರು ಫೋ-ಟೊಗೆ ಎರಡು ರಾಜ್ಯಗಳ ತಂಡದ ನಾಯಕರ ಕೈಕುಲುಕಿಸುವ ಪ್ರಹಸನ ಮಾತ್ರ ಮಾಡಿದ್ದರು. ಇಂತಹ ಗಂಭೀರ ವಿವಾದವನ್ನು ಬಗೆಹರಿಸುವ ಕೇಂದ್ರದ ಸಾಂವಿಧಾನಿಕ ಜವಾಬ್ದಾರಿಯಿಂದ ಮೋದಿ ಸರಕಾರ ನುಣುಚಿಕೊಂಡಿದೆ. ಬಿಜೆಪಿ ಪಕ್ಷ ಮತ್ತು ಅದರ ಸರಕಾರ ರಾಜ್ಯಸಭೆಯಲ್ಲಿ ಸರಕಾರಕ್ಕೆ ಅಗತ್ಯವಾದ ಎಐಡಿಎಂಕೆ ಯ ರಾಜಕೀಯ ಬೆಂಬಲ ಪಡೆಯುವ, ಮತ್ತು ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರವನ್ನು ಉರುಳಿಸುವ ಕ್ಷುಲ್ಲಕ ರಾಜಕೀಯದಲ್ಲಿ ತೊಡಗಿದೆ. ಇದನ್ನು ಕರ್ನಾಟಕದ ಜನತೆ ಮನಗಂಡು ಒಕ್ಕೊರಲಿಂದ ಖಂಡಿಸಬೇಕಾಗಿದೆ.

ಮೂರು ದಿನಗಳೊಳಗೆ ಕಾವೇರಿ ನಿರ್ವಹಣಾ ಮಂಡಳಿಯನ್ನು ರಚಿಸಬೇಕೆಂದು ಕೇಂದ್ರ ಸರಕಾರಕ್ಕೂ, ತಮಿಳುನಾಡಿಗೆ ಅ.1ರಿಂದ ಅ.6ರವರೆಗೆ ಪ್ರತಿದಿನ 6 ಸಾವಿರ ಕ್ಯೂಸೆಕ್ ನೀರು ಬಿಡಿ ಎಂದು ಕರ್ನಾಟಕ ಸರಕಾರಕ್ಕೂ ಸುಪ್ರೀಂ ಕೋರ್ಟು ಸೆ.30 ರಂದು ಕೊಟ್ಟ ತೀರ್ಪಿನಲ್ಲಿ ಸೂಚನೆ ನೀಡಿದೆ. ಮುಂದಿನ ವಿಚಾರಣೆಯನ್ನು ಅ.6ರ ಗುರುವಾರಕ್ಕೆ ನಿಗದಿಪಡಿಸಿದೆ. ನ್ಯಾಯಾಲಯದ ತೀರ್ಪು ಪಾಲಿಸದಿರುವ ಮೂಲಕ ಕರ್ನಾಟಕವು ನ್ಯಾಯಾಲಯದ ಘನತೆಗೆ ಧಕ್ಕೆ ತಂದಿದೆ ಎಂದೂ ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಕರ್ನಾಟಕವು ಸದ್ಯಕ್ಕೆ ನ್ಯಾಯಾಂಗ ನಿಂದನೆ ತೂಗುಗತ್ತಿಯಿಂದ ಪಾರಾಗಿದ್ದರೂ, ಈ ತೀರ್ಪು ಕರ್ನಾಟಕದ ಜನತೆಯ ಹಿತಾಸಕ್ತಿಗೆ ಮತ್ತಷ್ಟು ಹಾನಿ ಉಂಟು ಮಾಡಿದೆ.

ಕೇಂದ್ರೀಯ ಕಾವೇರಿ ನಿರ್ವಹಣಾ ಮಂಡಳಿಯ ರಚನೆಯನ್ನು, ಕರ್ನಾಟಕವು ಹಿಂದಿನಿಂದಲೂ ವಿರೋಧಿಸುತ್ತಲೇ ಬಂದಿತ್ತು. ಈಗ ಸುಪ್ರೀಂ ಕೋರ್ಟ್ ಸೂಚನೆಯಂತೆ ಕಾವೇರಿ ನಿರ್ವಹಣಾ ಮಂಡಳಿ ರಚನೆಯಾದಲ್ಲಿ, ಕೆಆರ್‌ಎಸ್, ಹಾರಂಗಿ, ಕಬಿನಿ, ಹೇಮಾವತಿ ಮತ್ತು ಜಲಾಶಯಗಳ ಮೇಲೆ ಇನ್ನು ಮುಂದೆ ಕೇಂದ್ರೀಯ ಮಂಡಳಿಯ ಹಿಡಿತವಿರುವ ಸಾಧ್ಯತೆಯಿದೆ.

ಕಾವೇರಿ ನಿರ್ವಹಣಾ ಮಂಡಳಿಯ ರಚನೆ ರಾಜ್ಯದ ಜನತೆಯ ಹಕ್ಕನ್ನು ಮೊಟಕುಗೊಳಿಸುವ ಕ್ರಮ. ಇದು ರಾಜ್ಯಗಳ ಸ್ವಾಯತ್ತತೆ ಹಾಗೂ ಸಂವಿಧಾನದತ್ತ ಅಧಿಕಾರವನ್ನು ಕಿತ್ತುಕೊಳ್ಳುವ, ಹಾಗೂ "ಪ್ರಬಲ ಕೇಂದ್ರ" ಹಾಗೂ "ಪ್ರಬಲ ರಾಜ್ಯಗಳ" ಮೇಲೆ ಆಧಾರಿತವಾದ ನಮ್ಮ ಒಕ್ಕೂಟ ವ್ಯವಸ್ಥೆಯನ್ನು ಹಾಳುಗೆಡಹುವ ಕ್ರಮ. ಇದನ್ನು ಬಲವಾಗಿ ವಿರೋಧಿಸಬೇಕಾಗಿದೆ.

ಕೇಂದ್ರ ಸರಕಾರ ಮಧ್ಯಸ್ತಿಕೆ ವಹಿಸಿ ಎರಡೂ ರಾಜ್ಯಗಳು ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸುವುದು ಈಗಲೂ ಇರುವ ಒಂದೇ ದಾರಿ.

ಸಂಪುಟದ ವಿಸ್ತರಣೆ: ಬದಲಾಗದ ಸಮೀಕರಣ

ಎಸ್.ವೈ.ಗುರುಶಾಂತ್

ಈ ಸಂಪುಟದ ವಿಸ್ತರಣೆ ಭಾರೀ ಸಂಭ್ರಮದಲ್ಲೇನೂ ನಡೆಯಲಿಲ್ಲ. ಪ್ರತಿಜ್ಞಾವಿಧಿಯೆಂಬುದು ಶಿಷ್ಟಾಚಾರದ ಒಂದು ವಿಧಾನವಾಗಿತ್ತು. ಮಗನ ಅಕಾಲಿಕ ಅಗಲಿಕೆಯ ಅಘಾತದಿಂದ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಇನ್ನೂ ಚೇತರಿಸಿಕೊಂಡಿಲ್ಲ. ರಾಜ್ಯದಲ್ಲಿ ಕಾವೇರಿ ನದಿ ನೀರಿನ ಹಂಚಿಕೆಯ ವಿವಾದದಲ್ಲಿ ಉದ್ವಿಗ್ನತೆಯ ಸನ್ನಿವೇಶ ಆವರಿಸುತ್ತಲೇ ಇರುವಾಗ, ಮತ್ತೊಂದೆಡೆ ಹೆಚ್ಚುತ್ತಿರುವ ಬರ. ಇಂತಹುದರ ನಡುವೆ ಸಂಪುಟಕ್ಕೆ ಇಬ್ಬರ ಸೇರ್ಪಡೆಯು ಬಹುದೊಡ್ಡ ವಿದ್ಯಾಮಾನದಂತೆ ಬಿಂಬಿತಗೊಳ್ಳಲಿಲ್ಲ. ನಿಜ, ಸಚಿವರಾಗುವುದು ಸಂಭ್ರಮಿಸಬೇಕಾದ ಸಂಗತಿ ಅಲ್ಲ. ಆದರೆ ಅದನ್ನು ಒಂದು ಮುಖ್ಯ ಜವಾಬ್ದಾರಿಯೆಂದು ಭಾವಿಸುವ ಸ್ಥಿತಿಯೇ ಇಲ್ಲವಾದ ಮೇಲೆ ಜನಪ್ರತಿನಿಧಿಯೊಬ್ಬ ಮಾಡಬೇಕಾದ ಕರ್ತವ್ಯವೂ ಉಪಕಾರದ ಸೇವೆಯಂತೆ ಕಾಣುತ್ತದೆ ಅಲ್ಲವೇ?

34 ಸಚಿವರುಳ್ಳ ಸಂಪುಟದಲ್ಲಿ 2ಸ್ಥಾನಗಳು ಖಾಲಿಯಿದ್ದವು. 2016 ಸೆಪ್ಟಂಬರ್ 5ರಂದು ಶಾಸಕರಾದ ಎಂ.ಕೃಷ್ಣಪ್ಪನವರನ್ನೂ, ನಂತರ ಸೆಪ್ಟಂಬರ್ 26ರಂದು ಕೆ.ಜೆ.ಜಾರ್ಜ್‌ರವರನ್ನು ಸೇರ್ಪಡೆ ಮಾಡಿಕೊಳ್ಳಲಾಯಿತು. ಸರಳ ಸಮಾರಂಭಗಳಲ್ಲಿ ಅವರಿಗೆ ರಾಜ್ಯಪಾಲರು ಪ್ರಮಾಣ ವಚನ ಭೋಧಿಸಿದ್ದಾರೆ.

ರಾಜ್ಯದ ಕಾಂಗ್ರೆಸ್ ಪಕ್ಷದ ಸರಕಾರಕ್ಕೆ ಮೂರು ವರುಷಗಳು ತುಂಬಿದ ನಂತರ ಸಂಪುಟಕ್ಕೆ ಬಹು ವಿಳಂಬಿತವಾದ ‘ಮೇಜರ್ ಸರ್ಜರಿ’ಯನ್ನೂ ಮುಖ್ಯಮಂತ್ರಿಗಳು ಮಾಡಿದ್ದರು. 2016ರ ಜೂನ್ 19ರಂದು ಸಂಪುಟದಲ್ಲಿದ್ದ 14 ಜನರನ್ನೂ ಕೈಬಿಟ್ಟು 13 ಹೊಸ ಸೇರ್ಪಡೆಯನ್ನೂ ಮಾಡಿದ್ದು ಕಾಂಗ್ರೆಸ್ ಒಳಗೆ-ಹೊರಗೆ ಭಾರೀ ಗೊಂದಲ, ಭಿನ್ನಮತಗಳ ಸ್ಫೋಟಕ್ಕೆ ಕಾರಣವಾಗಿತ್ತು. ವಸತಿ ಸಚಿವರಾಗಿದ್ದ ನಟ ಅಂಬರೀಶ್‌ರವರು ತಮ್ಮನ್ನೂ ಕೈಬಿಟ್ಟಿದ್ದನ್ನೇ ಬೀದಿ ರಂಪಾಟವಾಗಿಸಿ ಸಾರ್ವಜನಿಕವಾಗಿ ಕಾಣೆ-ಯಾಗಿದ್ದರು. ಹೊಸ ಸೇರ್ಪಡೆಯ ವಿವಾದದ ಕಾವು ತೀವ್ರವಿದ್ದರಿಂದ ಆ ಸ್ಥಾನ ಖಾಲಿಯಾಗಿತ್ತು. ಮುಂದೆ ಮಂಗಳೂರಿನ ಡಿವೈಎಸ್‌ಪಿ ಎಂ.ಕೆ. ಗಣಪತಿಯವರ ಆತ್ಮಹತ್ಯೆ ಪ್ರಕರಣದಲ್ಲಿ ತಮ್ಮ ಹೆಸರು ಪ್ರಸ್ತಾಪಿತಗೊಂಡು, ನಂತರ ಮಡಿಕೇರಿ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಾದ ಹಿನ್ನೆಲೆಯಲ್ಲಿ ಬೆಂಗಳೂರು ಅಭಿವೃದ್ಧಿ ಖಾತೆ ಸಚಿವರಾಗಿದ್ದ ಕೆ.ಜೆ. ಜಾರ್ಜ್ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗಿ ಬಂದಿದ್ದರಿಂದ ಮತ್ತೊಂದು ಸ್ಥಾನ ಖಾಲಿ ಬಿತ್ತು.

ಜೂನ್‌ನಲ್ಲಾದ ಸಂಭವನೀಯ ಸಂಪುಟ ವಿಸ್ತರಣೆಯ ಪಟ್ಟಿಯಲ್ಲಿ ಕೃಷ್ಣಪ್ಪನವರ ಹೆಸರು ಸೇರ್ಪಡೆಗೊಂಡು ಕೊನೆಗಳಿಗೆಯಲ್ಲಿ ಅದನ್ನು ಕೈಬಿಟ್ಟಿದ್ದರಿಂದ ಬಹಿರಂಗವಾಗಿ ಗಲಾಟೆ ಮಾಡಿ ಆಕ್ರೋಶವನ್ನೂ ಹೊರ ಹಾಕಿದ್ದರು. ಅಂಬರೀಶ್, ಕಿಮ್ಮನೆ ರತ್ನಾಕರರವರನ್ನೂ ಕೈಬಿಟ್ಟಿದ್ದರಿಂದ ಸಂಪುಟದಲ್ಲಿ ಒಕ್ಕಲಿಗರ ಪ್ರಾತಿನಿಧ್ಯ ಕಡಿಮೆಯಾಗಿದೆಯೆಂದೂ ಹಲವರು ಕ್ಯಾತೆ ತೆಗೆದಿದ್ದರು. ಇದನ್ನೂ ‘ಸರಿದೂಗಿಸಲು’ ಒಕ್ಕಲಿಗ ಜಾತಿಯಿಂದಲೇ ಸಂಪುಟಕ್ಕೆ ತೆಗೆದುಕೊಳ್ಳಬೇಕೆಂಬ ಒತ್ತಾಯವೂ ಇತ್ತು. ಈ ಸ್ಥಾನಕ್ಕೆ ಸಿ.ಪಿ.ಯೋಗೇಶ್ವರ್, ಕೆ.ಸುಧಾಕರ್, ಎಸ್.ಟಿ.ಸೋಮಶೇಖರ್, ಉಪಸಭಾಪತಿ ಎನ್. ಹೆಚ್.ಶಿವಶಂಕರರೆಡ್ಡಿಯವರೂ ಸ್ಪರ್ಧೆ ನಡೆಸಿದ್ದರೂ ಕೂಡ. ಅಂತಿಮವಾಗಿ ಮುಖ್ಯಮಂತ್ರಿಗಳ ಇಂಗಿ-ತದಂತೆ ಕೃಷ್ಣಪ್ಪ ಸೇರ್ಪಡೆಗೊಂಡರೆಂಬ ವ್ಯಾಖ್ಯಾನಗಳು ಇವೆ. ಇಂತಹ ಜಾತಿ ಸಮೀಕರಣ ಸರಿದೂಗಿಸುವಲ್ಲಿ ರಾಜ್ಯ ಸಚಿವರಾಗಿದ್ದ ಎ.ಮಂಜು, ವಿಜಯ ಕುಲಕರ್ಣಿಯವರಿಗೆ ಸಚಿವ ಸಂಪುಟ ದರ್ಜೆಗೆ ಬಡ್ತಿ ಸಿಕ್ಕಿರುವುದು ಇದೇ ಸಂದರ್ಭದಲ್ಲೇ. ಸಂಪುಟಕ್ಕೆ ರಾಜೀನಾಮೆ ಸಲ್ಲಿಸಬೇಕಾಗಿ ಬಂದ ಕೆ.ಜೆ.ಜಾರ್ಜ್ ಅವರ ಸೇರ್ಪಡೆ ಪ್ರಶ್ನೆ ತುಂಬಾ ಗಂಭೀರ ರಾಜಕೀಯ ಸ್ವರೂಪದ್ದಾಗಿತ್ತು. ಎಂ.ಕೆ. ಗಣಪತಿಯವರ ಆತ್ಮಹತ್ಯೆಯ ಹೇಳಿಕೆಯಲ್ಲಿ ಇವರ ಹೆಸರು ಪ್ರಸ್ತಾಪಗೊಂಡಿದ್ದರಿಂದ (ಹಿರಿಯ ಅಧಿಕಾರಿಗಳಾದ ಎ.ಎಂ.ಪ್ರಸಾದ್, ಪ್ರಣಬ್ ಮೊಹಂತಿಯವರೂ ಸೇರಿ) ಅವರು ಕಳಂಕದ ಆರೋಪ ಮುಕ್ತರಾಗಲೇಬೇಕಿತ್ತು.

ಇದೇ ಸೆಪ್ಟಂಬರ್ 17ರಂದು ರಾಜ್ಯ ಸಿ.ಐ.ಡಿ. ಮಡಿಕೇರಿಯ ನ್ಯಾಯಾಲಯಕ್ಕೆ ಸಲ್ಲಿಸಿದ ವರದಿಯಲ್ಲಿ ಜಾರ್ಜ್‌ರವರ ಪಾತ್ರ ಇಲ್ಲವೆಂದು ಹೇಳಿ ಬಿ ರಿಪೋರ್ಟ್ ಸಲ್ಲಿಸಿದ್ದು ಸೇರ್ಪಡೆಗೆ ಸುಲಭ ದಾರಿ ಮಾಡಿ ಕೊಟ್ಟಿತು. ಹೀಗಾಗಿ ‘ಆರೋಪ ಮುಕ್ತ’ರಾದ ಕೂಡಲೇ ಅವರನ್ನೂ ಸೇರ್ಪಡೆ ಮಾಡಿಕೊಳ್ಳಲಾಯಿತಲ್ಲದೇ ಹಿಂದಿದ್ದ ಖಾತೆಯನ್ನೇ ನೀಡಲಾಗಿದೆ. ಕೃಷ್ಣಪ್ಪನವರಿಗೆ ವಸತಿ ಖಾತೆ ನೀಡಲಾಗಿದೆ. ಲೇಔಟ್ ಕೃಷ್ಣಪ್ಪನೆಂದೇ ಹೆಸರು ಗಳಿಸಿರುವ ಅವರಿಗೆ ವಸತಿ ಸಮಸ್ಯೆ ಅರಿವಿದೆ ಎಂಬುದು ನಿಜವಾದರೂ ಅವರು ಮಾಡಿದ ಲೇಔಟ್‌ಗಳಲ್ಲಿ ಅಗಾಧ ಹಗರಣಗಳ ಅಪಖ್ಯಾತಿಯೂ ಇದೆ. ಈ ರಿಯಲ್ ಎಸ್ಟೇಟ್ ಉದ್ಯಮಿ ರಾಜ್ಯದ ಜನರಿಗೆ ಸೈಟ್, ಮನೆ ಒದಗಿಸುವಲ್ಲಿ ಸರಕಾರ ನೀಡಿದ ಭರವಸೆ ರಿಯಲ್ ಆಗಿಸುತ್ತಾರಾ ಎಂಬ ಪ್ರಶ್ನೆ ಕಾಡುತ್ತಲೇ ಇರುತ್ತದೆ.

ಹಾಗೆ ನೋಡಿದರೆ ಅಲ್ಪ ಸಂಖ್ಯಾತ ಸಮುದಾಯಕ್ಕೆ ಸೇರಿರುವ ಕೆ.ಜೆ.ಜಾರ್ಜ್ ಸಹ ಭೂ ವ್ಯವಹಾರದಲ್ಲಿ ಮುಳುಗಿರುವ ಒಬ್ಬ ರಿಯಲ್ ಎಸ್ಟೇಟ್ ಉದ್ಯಮಿ. ಸಿದ್ಧರಾಮಯ್ಯವರ ಸಂಪುಟದ ಸಂಯೋಜನೆಯನ್ನು ಗಮನಿಸಿದರೆ ಇದೂ ಸಹ ಗಣಿ ಹಾಗೂ ಭೂ ಮಾಫಿಯಾಗಳಿಂದ ಮುಕ್ತವಾಗಲು ಸಾಧ್ಯವಾಗಿಲ್ಲ. ಈ ಅಂಶ ಸಂಪುಟ ವಿಸ್ತರಣೆ-ಯ ಸಂದರ್ಭದಲ್ಲಿ ಮರು ಸಾಬೀತಾಗಿದೆ. ಇಂತಹ ಉದ್ಯಮಿ ಹಿತಾಸಕ್ತಿಗಳೇ ಅಧಿಕಾರದ ಚುಕ್ಕಾಣಿ ಹಿಡಿದು, ಸರಕಾರದ ಎಲ್ಲಾ ನಿರ್ಧಾರಗಳನ್ನೂ ನಿಯಂತ್ರಿಸುವುದಾದರೆ ಜನ ಸಾಮಾನ್ಯರಿಗೆ ಪರಿಹಾರ ಸಿಗುವುದೆಲ್ಲಿ? ಭಿನ್ನ. ಸಮರ್ಥ ಆಡಳಿತವನ್ನು ಎಲ್ಲಿ ಹುಡುಕಬೇಕು?

ಹೀಗಾಗಿ ಕಾಲ ಸಾಗು ಹಾಕುವ ವ್ಯಾಪಾರಿ ಕಸರತ್ತಿನಲ್ಲಿಯೇ ಕಾಂಗ್ರೆಸ್ ಮುಳುಗಿದೆ !

* * * *

ಬಿಬಿಎಂಪಿಯಲ್ಲಿ ಮತ್ತೇ ಕಾಂಗ್ರೆಸ್-ಜೆಡಿ (ಎಸ್)ಮೈತ್ರಿ

ಈ ನಡುವಿನ ಮತ್ತೊಂದು ಮಹತ್ವದ ವಿದ್ಯಾಮಾನವೆಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮೇಯರ್, ಉಪಮೇಯರ್‌ಗಳ ಆಯ್ಕೆ. ಇಲ್ಲಿ ಕಾಂಗ್ರೆಸ್ ಮತ್ತು ಜೆ.ಡಿ.ಎಸ್ ಪಕ್ಷಗಳು ಈ ಸ್ಥಾನಗಳನ್ನು ಪುನಃ ಹಂಚಿಕೊಂಡಿರುವುದು ಬಿಜೆಪಿಗೆ ತೀವ್ರ ನಿರಾಸೆ ತಂದಿದೆ. ಹಿಂದೆ ನಡೆದ ಚುನಾವಣೆಯಲ್ಲಿ

ಪುಟ 11 ಕ್ಕೆ

ನವೆಂಬರ್ 18 : ಭೂಮಿ ಪ್ರಶ್ನೆಗೆ ಜೈಲ್ ಭರೋ

ಭೂಮಿಯ ಪ್ರಶ್ನೆ ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ಜನತೆಯ ಪ್ರಮುಖ ಪ್ರಶ್ನೆಯಾಗಿ ಹೊಮ್ಮುತ್ತಿದೆ. ‘ಕೈಗಾರಿಕಾ ಕಾರಿಡಾರ್’ ಹೆಸರಲ್ಲಿ ಲಕ್ಷಾಂತರ ಎಕರೆ ಭೂಮಿಯನ್ನು ಸರಕಾರ ಸ್ವಾಧೀನಪಡಿಸಿಕೊಂಡು ಬಹುರಾಷ್ಟ್ರೀಯ ಕಂಪನಿಗಳಿಗೆ ‘ಕಾಂಟ್ರಾಕ್ಟ್ ಕೃಷಿ’ಗೆ ಹಸ್ತಾಂತರ ಮಾಡುವ ಪ್ರಯತ್ನಗಳು, ರೈತ ಕೃಷಿಯನ್ನು ನಾಶ ಮಾಡುವ ಹುನ್ನಾರ, ರೀಯಲ್ ಎಸ್ಟೇಟ್ ಮಾಫಿಯಾದ ಭೂಕಬಳಿಕೆ, ನಗರ ಮತ್ತು ಗ್ರಾಮೀಣ ಬಡ-ಮಧ್ಯಮ ವರ್ಗದ ಕುಟುಂಬಗಳಿಗೆ ನಿಲುಕದ ನಿವೇಶನ/ಮನೆ/ಅಪಾರ್ಟ್‌ಮೆಂಟುಗಳ ಸಮಸ್ಯೆ, ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕು ಪತ್ರ ನೀಡುವ ಬದಲು ಭೂಕಬಳಿಕೆ ನಿಷೇಧ ಕಾಯಿದೆ 2011 ಪ್ರಕಾರ ವಿಶೇಷ ಕೋರ್ಟು ಸ್ಥಾಪಿಸಿ ಒಕ್ಕಲೆಬ್ಬಿಸುವ ಪ್ರಯತ್ನಗಳು – ಹೀಗೆ ಭೂಮಿಯ ಪ್ರಶ್ನೆಗೆ ಹಲವು ಆಯಾಮಗಳಿವೆ.

ಭೂಮಿಯ ಹಕ್ಕಿನ ಈ ವ್ಯಾಪಕ ಪ್ರಶ್ನೆಯನ್ನು ತೆಗೆದುಕೊಂಡು ನವೆಂಬರ್ 18ರಂದು ರಾಜ್ಯವ್ಯಾಪಿ ಜೈಲ್ ಭರೋ ಚಳುವಳಿ ಹಮ್ಮಿಕೊಳ್ಳಲಾಗಿದೆ. ಇದರ ಮೊದಲು ಗ್ರಾಮ, ಹೋಬಳಿ, ತಾಲೂಕು, ಜಿಲ್ಲಾ ಮಟ್ಟಗಳಲ್ಲಿ ಸ್ಥಳೀಯ ಸನ್ನಿವೇಶಕ್ಕೆ ಅನುಗುಣವಾದ ನಿರ್ದಿಷ್ಟ ಹಕ್ಕೊತ್ತಾಯಗಳಿಗೆ ಪ್ರಚಾರ-ಪ್ರಕ್ಷೋಭೆ ಚಳುವಳಿಗಳನ್ನು ನಡೆಸಿ, ಅದು ನವೆಂಬರ್ 18ರಂದು ರಾಜ್ಯವ್ಯಾಪಿ ಜೈಲ್ ಭರೋ ಚಳುವಳಿಯಲ್ಲಿ ಅಂತಿಮವಾಗಿ ನಿರ್ಣಾಯಕ ಚಳುವಳಿಯಾಗುವಂತೆ ಮಾಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಮತ್ತಿತರ ಸಾಮೂಹಿಕ ಸಂಘಟನೆಗಳು ಕರೆ ಕೊಟ್ಟಿವೆ. ಭೂಮಿಯ ಪ್ರಶ್ನೆಯ ಬಗೆಗಿನ ಚಳುವಳಿಗೆ ಪಕ್ಷದ ಎಲ್ಲಾ ಘಟಕಗಳು ಸಮಿತಿಗಳು ತೊಡಗಿಸಿಕೊಳ್ಳಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕರೆ ಕೊಟ್ಟಿದೆ.



ದಲಿತ ಮಾನವ ಅಭಿವೃದ್ಧಿ ಬಲಪಡಿಸಿ

ಕಲಬುರಗಿ ಜಿಲ್ಲೆಯ ದಲಿತ ಹಕ್ಕುಗಳ ಸಮಿತಿ (ಕರ್ನಾಟಕ) ವತಿಯಿಂದ ಸೆಪ್ಟಂಬರ್ 28ರಂದು ಜಿಲ್ಲಾ ಮಟ್ಟದ ಸಮಾವೇಶವನ್ನು ಸಂಘಟಿಸಲಾಗಿತ್ತು. ಕಲಬುರ್ಗಿ ಜಿಲ್ಲೆಯ ಸೂಪರ್ ಮಾರ್ಕೆಟ್ ಬಳಿ ಹೈದರಾಬಾದ್ ಕರ್ನಾಟಕ ಚೇಂಬರ್ ಆಫ್ ಕಾಮರ್ಸ್ ಸಭಾಗಣದಲ್ಲಿ ಸಮಾವೇಶವನ್ನು ಹಮ್ಮಿಕೊಂಡಿದ್ದರು.

ಊನಾ ದಲಿತರ ಹಾಗೂ ದೇಶದಾದ್ಯಂತ ದಲಿತರ ಮೇಲಿನ ದೌರ್ಜನ್ಯ ಖಂಡಿಸಿ, ಖಾಸಗಿ(ಉದ್ದಿಮೆ) ವಲಯದಲ್ಲಿ ಮೀಸಲಾತಿಗೆ ಒತ್ತಾಯಿಸಿ, ಜನಸಂಖ್ಯೆಗೆ ಅನುಗುಣವಾಗಿ ಕೇಂದ್ರ ಬಜೆಟ್‌ನಲ್ಲಿ ದಲಿತರ ಏಳಿಗೆಗಾಗಿ ಹಣ ಒದಗಿಸುವುದಕ್ಕಾಗಿ, ದಲಿತ ಮಾನವ ಅಭಿವೃದ್ಧಿ ಬಲಪಡಿಸುವುದಕ್ಕಾಗಿ ಹಣ ವಿನಿಯೋಗಿಸಬೇಕೆಂದು, ವಿದ್ಯಾರ್ಥಿಗಳಿಗೆ ಶಿಷ್ಯವೇತನ ಮಾಸಿಕ ರೂ.2000/–ಕ್ಕೆ ಹೆಚ್ಚಿಸಲು, ನಿವೇಶನ ರಹಿತ ದಲಿತ ಕುಟುಂಬಗಳಿಗೆ ನಿವೇಶನ ಸಹಿತ ಮನೆ ಮಂಜೂರು ಮಾಡಬೇಕೆಂದು ಈ ಸಮಾವೇಶದಲ್ಲಿ ಒತ್ತಾಯಿಸಲಾಯಿತು.

ಸಮಾವೇಶವನ್ನು ಉದ್ದೇಶಿಸಿ ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ, ಸಹ ಸಂಚಾಲಕರಾದ ಮಾರುತಿ ಮಾನ್ಪಡೆ, ಬಾಬಾ ಸಾಹೇಬ್ ಡಾ॥ ಬಿ.ಆರ್.ಅಂಬೇಡ್ಕರ್ ವಿಚಾರ ವೇದಿಕೆಯ ಕಾರ್ಯದರ್ಶಿ ಸುರೇಶ ಬಡಿಗೆ–ರ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ಮತ್ತಿತರ ಮುಖಂಡರು ಉಪಸ್ಥಿತರಿದ್ದರು.

ವರದಿ : ಶರಣಬಸಪ್ಪ ಮಮಶೆಟ್ಟಿ

ರೇಷನ್‌ಗಾಗಿ 'ಕೂಪನ್' ಪದ್ಧತಿ ಜನವಿರೋಧಿ : ಸಿಪಿಐ(ಎಂ)

ಸಾರ್ವಜನಿಕ ಪಡಿತರ(ರೇಶನ್) ವಿತರಣೆಯಲ್ಲಿ ರಾಜ್ಯ ಸರ್ಕಾರವು ನೂತನವಾಗಿ ಜಾರಿಗೊಳಿಸಿರುವ 'ಕೂಪನ್' ಪದ್ದತಿ ಅತ್ಯಂತ ಅವೈಜ್ಞಾನಿಕ ಮತ್ತು ಜನವಿರೊಧಿಯಾಗಿದೆ. ರೇಷನ್ ವಿತರಣೆಯ ಸಂದರ್ಭದಲ್ಲಿ ಆಗುತ್ತಿರುವ ತಾಂತ್ರಿಕ ಅಡಚಣೆ, ಅನಗತ್ಯ ವಿಳಂಬ, ಗಂಟೆಗಟ್ಟಲೆ ಕ್ಯೂ ನಿಲ್ಲುವುದು ಇಂತಹ ಹತ್ತಾರು ಸಮಸ್ಯೆಗಳಿಗೆ ಕೂಪನ್ ವ್ಯವಸ್ಥೆ ರಾಮಬಾಣವಾಗಲಿದೆ ಎಂದು ಹೇಳಿ ಜಾರಿಗೆ ತಂದ ಈ 'ಕೂಪನ್' ಪದ್ದತಿ ಜನರನ್ನು ಮತ್ತಷ್ಟು ಸಂಕಷ್ಟಕ್ಕೆ ತಳ್ಳುತ್ತಿದೆ. ರೇಷನ್ ಪಡೆಯಲು ರೇಷನ್ ಡಿಪೋಗಳಲ್ಲಿ ಕ್ಯೂ ನಿಲ್ಲುತ್ತಿದ್ದ ಗ್ರಾಹಕರು ಈಗ ಇದರ ಜೊತೆಗೆ 'ಕೂಪನ್' ಪಡೆಯಲೂ..., ಕ್ಯೂ ನಿಲ್ಲಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದ–ರಿಂದ ಕನಿಷ್ಟ 3 ರಿಂದ 4 ದಿನಗಳ ಕಾಲ 'ಕೂಪನ್' ಮತ್ತು ರೇಷನ್‌ಗಾಗಿಯೇ ತಮ್ಮ ಕೆಲಸಗಳನ್ನು ಬಿಟ್ಟು ಓಡಾಡಬೇಕಾಗಿದೆ.



ಈ ಹಿನ್ನೆಯಲ್ಲಿ ಹಾಸನದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ವತಿಯಿಂದ ಸೆಪ್ಟಂಬರ್ 24ರಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಜನಸಾಮಾನ್ಯರ ಆಹಾರದ ಕೊರತೆಯನ್ನು ನೀಗಿಸಿ ಆಹಾರ ಭಧ್ರತೆಯನ್ನು ಒದಗಿಸಲು ಪೂರಕವಾಗಿ ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಬಲಪಡಿಸಲು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ಸರ್ಕಾರ ಬದಲಿಗೆ ಜನರನ್ನು ರೇಷನ್ ವ್ಯವಸ್ಥೆಯಿಂದ ದೂರಮಾಡುವ ಹಾಗೂ ಆಹಾರದ ಕೊರತೆಯಿಂದ ನಲುಗುವಂತೆ ಮಾಡುವ ಹುನ್ನಾರದ ಭಾಗವಾಗಿ ಈ ಅವೈಜ್ಞಾನಿಕ 'ಕೂಪನ್' ಪದ್ದತಿ ಜಾರಿಮಾಡಿದೆ. ಕೇಂದ್ರದ ಬಿಜೆಪಿ ಮತ್ತು ರಾಜ್ಯದ ಕಾಂಗ್ರೆಸ್ ಸರ್ಕಾರಗಳು ಒಂದಕ್ಕೊಂದು ಪೂರಕವಾಗಿಯೇ ಕೆಲಸ ಮಾಡುತ್ತಿದ್ದು ಜನರಿಗೆ ಆಹಾರ ಭದ್ರತೆ ಕಸಿದುಕೊಳ್ಳುವಂತಹ ಜನವಿರೋಧಿ ನೀತಿಗಳನ್ನು ಜಾರಿಮಾಡುತ್ತಿವೆ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಯಾವುದೇ ರೇಷನ್ ಡಿಪೋಗಳಿಗೆ ಹೋದರೂ ಒಂದಲ್ಲ ಒಂದು ರೀತಿಯ ಸಮಸ್ಯೆ. ಅಳತೆಯಲ್ಲಿ ಮೋಸ, ಡಿಜಿಟಲ್ ತೂಕದ ಯಂತ್ರವನ್ನು ಬಳಸದಿರುವುದು, ನಿಗದಿ ಪಡಿಸಿದಷ್ಟು ರೇಷನನ್ನು ಗ್ರಾಹಕರಿಗೆ ನೀಡದಿರುವುದು, ನಿಗದಿತ ದರಕ್ಕಿಂತ ಹೆಚ್ಚಿನ ದರ, ಯಾವುದೇ ರೇಷನ್ ಡಿಪೋದಲ್ಲಿಯೂ ನಿಗದಿತ ಸಮಯಕ್ಕೆ ರೇಷನ್ ವಿತರಿಸದಿರುವುದು ಮತ್ತು ಡಿಪೋಗಳಲ್ಲಿಯೂ ಸರ್ಕಾರ ನಿಗದಿಪಡಿಸಿದ ದರ ಪಟ್ಟಿಯನ್ನು ಗ್ರಾಹಕರಿಗೆ ತಿಳುವಳಿಕೆ ನೀಡುವ ಸಲುವಾಗಿ ಪ್ರದರ್ಶಿಸದಿರುವುದು, ಪ್ರತಿ ಕೂಪನ್‌ಗೆ ಗ್ರಾಹಕರಿಂದ 10 ರೂ ಪಡೆಯುವುದು ಹೀಗೆ ಸಮಸ್ಯೆಗಳು ಬೆಳೆದಿದೆ.

ಈ ಹಿನ್ನೆಲೆಯಲ್ಲಿ ಜನರ ಸಮಸ್ಯೆಗಳಿಗೆ ಕಾರಣವಾಗಿರುವ ಅವೈಜ್ಞಾನಿಕ 'ಕೂಪನ್' ಪದ್ದತಿಯನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು ಮತ್ತು ಕೇರಳದ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರದ ಮಾದರಿಯಲ್ಲಿ ಅಗತ್ಯ 19 ವಸ್ತುಗಳನ್ನು ರಿಯಾಯಿತಿ ದರದಲ್ಲಿ ನೀಡಬೇಕು. ಎಪಿಎಲ್, ಬಿಪಿಎಲ್, ಅಂತ್ಯೋದಯದಂತಹ ತಾರತಮ್ಯ ನೀತಿ ಕೈಬಿಡಬೇಕು. ಎಲ್ಲಾ ಕುಟುಂಬಕ್ಕೂ 35 ಕೆ.ಜಿ. ಅಕ್ಕಿ ವಿತರಿಸಬೇಕು. ಪಡಿತರ ವ್ಯವಸ್ಥೆಯನ್ನು ಸಾರ್ವತ್ರೀಕರಣಗೊಳಿಸಬೇಕೆಂದು ಸಿಪಿಐ(ಎಂ) ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಗಿದೆ.

ಹಾಸನ ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿ ಕಛೇರಿ ಆವರಣ ತಲುಪಿದ ಪ್ರತಿಭಟನಾಕಾರರು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಕಛೇರಿ ಎದುರು ಪ್ರತಿಭಟನೆ ನಡೆಸಿ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಧರ್ಮೇಶ್, ಸ್ಥಳೀಯ ಕಾರ್ಯದರ್ಶಿ ಎಚ್.ಆರ್.ನವೀನ್‌ಕುಮಾರ್ ಮುಂತಾದವರು ಭಾಗವಹಿಸಿದ್ದರು. ●

ಆಸ್ಪತ್ರೆಗಳಲ್ಲಿ ದರ ಪಟ್ಟಿ ಪ್ರಕಟಿಸಿ: ಡಿವೈಎಫ್‌ಐ

ಜನತೆಯ ಆರೋಗ್ಯದ ರಕ್ಷಣೆಗಾಗಿ, ಸೂಕ್ತ ಚಿಕಿತ್ಸೆಗಾಗಿ ಸರಕಾರವು ಸಾರ್ವಜನಿಕ ಆಸ್ಪತ್ರೆ, ವೈದ್ಯಕೀಯ ಸಂಸ್ಥೆಗಳನ್ನು ತೆರೆದಿವೆ. ಪರ್ಯಾಯವಾಗಿ ಖಾಸಗಿಯವರಿಗೂ ವೈದ್ಯಕೀಯ ಸಂಸ್ಥೆಗಳನ್ನು ತೆರೆಯಲು ಅವಕಾಶ ನೀಡಿದೆ. ಖಾಸಗಿಯವರಿಗೆ ಅವಕಾಶ ನೀಡಿರುವ ಉದ್ದೇಶ ಜನಸಾಮಾನ್ಯರಿಗೆ ಅರೋಗ್ಯ ಸೇವೆಗಳು ಇನ್ನಷ್ಟು ವ್ಯಾಪಕವಾಗಿ ದೊರಕಬೇಕು ಎಂಬುದು. ವೈದ್ಯಕೀಯ ಸಂಸ್ಥೆಗಳನ್ನು ನಡೆಸುವ ಖಾಸಗಿ ಸಂಸ್ಥೆಗಳು ಯಾವುದೇ ಕಾರಣ–ಕ್ಕೂ ಆಸ್ಪತ್ರೆ, ನರ್ಸಿಂಗ್ ಹೋಂ, ಲ್ಯಾಬ್‌ಗಳನ್ನು ಲಾಭದಾಯಕ ಉದ್ಯಮವನ್ನಾಗಿ ಪರಿಗಣಿಸಲು ನೆಲದ ಕಾನೂನು, ಸಂವಿಧಾನ ಅವಕಾಶ ನೀಡುವುದಿಲ್ಲ. ಈ ರೀತಿ ಕಾಯ್ದೆ ಬದ್ಧವಾಗಿ ಖಾಸಗಿಯವರು ವೈದ್ಯಕೀಯ ಸಂಸ್ಥೆಗಳನ್ನು ನಡೆಸಲು, ಖಾಸಗಿ ವೈದ್ಯಕೀಯ ಸಂಸ್ಥೆಗಳನ್ನು ನಿಯಂತ್ರಿಸಲು ಸರಕಾರ ನಿಯಮಗಳನ್ನು ರೂಪಿಸಿವೆ.

ಈ ಬಗ್ಗೆ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್‌ಐ), ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಸೆಪ್ಟಂಬರ್ 23ರಂದು ಜಿಲ್ಲೆಯ ವಿವಿಧ ಆಸ್ಪತ್ರೆಗಳಿಗೆ ಭೇಟಿ ನೀಡಿದ ನಿಯೋಗವು ಆಡಳಿತ ನಿರ್ದೇಶಕರನ್ನು ಮನವಿ ಸಲ್ಲಿಸಿದೆ.

ಕರ್ನಾಟಕ ರಾಜ್ಯ ಸರಕಾರವು ಈ ಉದ್ದೇಶದಿಂದಲೇ "ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ–2007" ರೂಪಿಸಿದೆ. ಈ ಕಾನೂನಿನ ಪ್ರಕಾರ ಖಾಸಗಿ ವೈದ್ಯಕೀಯ ಸಂಸ್ಥೆಗಳು ಪಾಲಿಸಬೇಕಾದ 28 ನಿಯಮಗಳನ್ನು ಪಟ್ಟಿ ಮಾಡಲಾಗಿದೆ.

1. ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು ರೋಗಿಗಳ ಹಾಗೂ ಸಾಮಾನ್ಯ ಜನರ ತಿಳುವಳಿಕೆಗಾಗಿ ವಿವಿಧ ವೈದ್ಯಕೀಯ ಚಿಕಿತ್ಸೆಗಳಿಗೆ ಮತ್ತು ಇತರ ಸೇವೆಗಳಿಗೆ ಸಂದಾಯ ಮಾಡತಕ್ಕ ಚಾರ್ಜುಗಳ ಪಟ್ಟಿಯನ್ನು ಕಿರು ಮಡಿಕೆಗಳು ಅಥವಾ ಕಿರುಹೊತ್ತಿಗೆಗಳಲ್ಲಿ ಲಭ್ಯವಾಗುವಂತೆ ಪ್ರದರ್ಶಿಸತಕ್ಕದ್ದು. ಅಂಥ ಕಿರುಮಡಿಕೆ ಅಥವಾ ಕಿರುಹೊತ್ತಿಗೆಯ ಪ್ರತಿಯನ್ನು ನೋಂದಣಿ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.
2. ಯಾವ ಖಾಸಗಿ ವೈದ್ಯಕೀಯ ಸಂಸ್ಥೆಯು ರೋಗಿಯಿಂದ ಅಥವಾ ಆತನ ಸಂಬಂಧಿಯಿಂದ ಅಥವಾ ಅವರನ್ನು ನೋಡಿಕೊಳ್ಳುವವರಿಂದ ಕಿರುಮಡಿಕೆ ಅಥವಾ ಕಿರುಹೊತ್ತಿಗೆಯಲ್ಲಿ ಮುದ್ರಿಸಿದ ಹಾಗೂ ಪಡೆದುಕೊಂಡ ಮೊಬಲಗಿಗೆ ಸರಿಯಾದ ರಶೀದಿಯನ್ನು ನೀಡದೆ ಯಾವುದೇ ಮೊತ್ತವನ್ನು ಸಂಗ್ರಹಿಸತಕ್ಕದ್ದಲ್ಲ.

ಆದರೆ ಬಹುತೇಕ ವೈದ್ಯಕೀಯ ಸಂಸ್ಥೆಗಳು ಈ ನಿಯಮವನ್ನು ಪಾಲಿಸುತ್ತಿಲ್ಲ. ತಮ್ಮ ಸಂಸ್ಥೆಯ ಎಲ್ಲರಿಗೂ ಕಾಣುವ ಸ್ಥಳದಲ್ಲಿ ದರಪಟ್ಟಿಯನ್ನು ಅಂಟಿಸುವುದಾಗಲೀ, ರೋಗಿ ಅಥವಾ ರೋಗಿಯ ಕಡೆಯವರಿಗೆ ದರಪಟ್ಟಿಯನ್ನು ನೀಡುವುದಾಗಲೀ ಮಾಡುತ್ತಿಲ್ಲ ಎಂದು ನಿಯೋಗವು ಗಮನಿಸಿದೆ. ಅಲ್ಲದೇ ಪಡೆಯುವ ಚಾರ್ಜುಗಳಿಗೆ ಸರಿಯಾದ ರಶೀದಿ ನೀಡುವುದು ಕಂಡು ಬರುತ್ತಿಲ್ಲ. ಇದು ಗಂಭೀರವಾದ ಲೋಪವಾಗಿದ್ದು, ಅಸಹಾಯಕ ಪರಿಸ್ಥಿತಿಯಲ್ಲಿರುವ ರೋಗಿಗಳು ಅವರ ಕುಟುಂಬಸ್ಥರ ಶೋಷಣೆಗೆ ಅವಕಾಶ ಮಾಡಿ ಕೊಡುತ್ತದೆ.

ಈ ರೀತಿ ನಿಯಮ ಉಲ್ಲಂಘನೆ ಜಿಲ್ಲೆಯ ಬಹುತೇಕ ಖಾಸಗಿ ವೈದ್ಯಕೀಯ ಸಂಸ್ಥೆಗಳಲ್ಲಿ ಸಾಮಾನ್ಯವಾಗಿದೆ. ಈ ರೀತಿ ರೋಗಿಗಳನ್ನು ಮತ್ತವರ ಅಸಹಾಯಕ ಕುಟುಂಬವನ್ನು ಶೋಷಿಸುವುದನ್ನು ಡಿವೈಎಫ್‌ಐ ದ.ಕ. ಜಿಲ್ಲಾ ಸಮಿತಿ ಗಂಭೀರವಾಗಿ ಪರಿಗಣಿಸಿದೆ. ಖಾಸಗಿ ವೈದ್ಯಕೀಯ ಸಂಸ್ಥೆಗಳು "ಅಧಿನಿಯಮ 2007"ನ್ನು ಪಾಲಿಸುವಂತಾಗಲು ಜನಾಂದೋಲನ ರೂಪಿಸಲು ಮುಂದಾಗಿದೆ. ನಿಯಮ ಪಾಲಿಸದಿದ್ದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದೆಂದು ಮನವಿ ಮಾಡಿದೆ.

ನಿಯೋಗದಲ್ಲಿ : ಡಿವೈಎಫ್‌ಐನ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಸಾದಿಕ್ ಕಣ್ಣೂರು, ಎ.ಬಿ. ನೌಷಾದ್, ನವೀನ್ ಕೊಂಚಾಡಿ, ರಿಯಾಜ್ ಬೆಂಗರೆ, ಹನೀಫ್ ಮುಂತಾದವರು ಉಪಸ್ಥಿತರಿದ್ದರು.

ವರದಿ : ಸಂತೋಷ್ ಬಜಾಲ್



ನಮ್ಮ ಚುಟು-ಟ್ವೀಟ್

ಪ್ರತಿಯೊಂದು ಕುಟುಂಬಕ್ಕೆ ಘನತೆಯ ಬದುಕಿನ ಹಕ್ಕು ಇದೆ. ಅದನ್ನು ಲಭ್ಯಗೊಳಿಸುವ ವಿಧಾನಗಳಲ್ಲಿ ಒಂದು ಎಂದರೆ ಎಲ್ಲ ಮನೆಗಳಲ್ಲಿ ಶೌಚಾಲಯಗಳನ್ನು ಲಭ್ಯಗೊಳಿಸುವುದು.
ನಮ್ಮ ಆರಂಭದ ಗುರಿಯಿದ್ದದ್ದು ಮಾರ್ಚ್2017ರ ವೇಳೆಗೆ ಕೇರಳವನ್ನು ಬಯಲು ಶೌಚ ಮುಕ್ತ ರಾಜ್ಯವಾಗಿ ಮಾಡುವುದು. ಆದರೆ, ನಾವು ನಿಯಮಿತ ಗುರಿಗಿಂತ ಬಹಳ ಮುಂದಿದ್ದೇವೆ ಎಂದು ತಿಳಿಸಲು ಸಂತೋಷ ಪಡುತ್ತೇನೆ. ನವಂಬರ್ 1, 2016ರಂದು ಕೇರಳ ಬಯಲು ಶೌಚ ಮುಕ್ತ ವಾದ ದೇಶದ ಮೊದಲ ದೊಡ್ಡ ರಾಜ್ಯವೆಂದು ಘೋಷಿಸಲಾಗುತ್ತದೆ.

–ಪಿಣರಾಯಿ ವಿಜಯನ್, ಮುಖ್ಯ ಮಂತ್ರಿಗಳು, ಕೇರಳ

ಕಡಲ ತಡಿ

ವರದಿ: **ವಾಸುದೇವ ಉಚ್ಚಿಲ್**

ಮರಳು ಸಮಸ್ಯೆ ಪರಿಹರಿಸಲು ಆಗ್ರಹಿಸಿ ಉಡುಪಿಯಲ್ಲಿ ಸರದಿ ಉಪವಾಸ

ಉಡುಪಿ ಜಿಲ್ಲೆಯಲ್ಲಿ ಉದ್ಭವಿಸಿರುವ ಮರಳು ಸಮಸ್ಯೆಯನ್ನು ಶೀಘ್ರ ಬಗೆಹರಿಸಲು ಆಗ್ರಹಿಸಿ ಸಿಐಟಿಯು ನೇತೃತ್ವದ ಉಡುಪಿ ಜಿಲ್ಲಾ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಸದಸ್ಯರು ಜಿಲ್ಲಾಧಿಕಾರಿ ಕಚೇರಿ ಎದುರು ಸೆಪ್ಟೆಂಬರ್ 26ರಿಂದ ಅನಿರ್ದಿಷ್ಟಾವಧಿ ಸರದಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದರು. 4ನೇ ದಿನದ ಹೊತ್ತಿಗೆ ಹೋರಾಟ ಇನ್ನಷ್ಟು ತೀವ್ರಗೊಂಡಿತು. ಈ ಮಧ್ಯದಲ್ಲಿ ಹೈಕೋರ್ಟ್‌ನಲ್ಲಿ ದಾಖಲಾಗಿದ್ದ ಕೇಸನ್ನು ವಾಪಸ್ಸು ಪಡೆದಿದ್ದರಿಂದ ಕಟ್ಟಡ ಕಾರ್ಮಿಕರ ಹೋರಾಟ ಯಶಸ್ವಿಯಾಗಿದೆ.

ಮರಳುಗಾರಿಕೆಯನ್ನು ಜಿಲ್ಲಾಡಳಿತ ಸ್ಥಗಿತಗೊಳಿಸಲು ಆದೇಶಿಸಿರುವ್ಯದರಿಂದ





ಜಿಲ್ಲೆಯ ಆರ್ಥಿಕ ಚಟುವಟಿಕೆಗಳು ಸಂಪೂರ್ಣ ಕುಂಠಿತಗೊಂಡಿವೆ. ಕಟ್ಟಡ ಕಾರ್ಮಿಕರು, ಗುತ್ತಿಗೆದಾರರು, ಮರಳು ಸಾಗಣೆದಾರರು, ಮರಳು ಎತ್ತುವ ಮತ್ತು ತುಂಬುವ ಕಾರ್ಮಿಕರು ಸಂಕಷ್ಟಕ್ಕೀಡಾಗಿದ್ದಾರೆ. ಅಲ್ಲದೆ ಕಟ್ಟಡ ನಿರ್ಮಾಣ ಕಾಮಗಾರಿ ಬಹುತೇಕ ಸ್ಥಗಿತಗೊಂಡಿದೆ. ಇದರಿಂದ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಬಳಸುವ ಸಾಮಾಗ್ರಿಗಳ ವಹಿವಾಟಿನ ಮೇಲೂ ವ್ಯತಿರಿಕ್ತ ಪರಿಣಾಮ ಉಂಟಾಗಿದ್ದು, ಕಟ್ಟಡ ಸಾಮಾಗ್ರಿಗಳ ವ್ಯಾಪಾರಿಗಳು ಸಹ ಸಾಕಷ್ಟು ನಷ್ಟ ಅನುಭವಿಸುತ್ತಿದ್ದಾರೆ. ನ್ಯಾಯಾಲಯದ ತಡೆಯಾಜ್ಞೆಯಿಚಿದಾಗಿ ಮಾತ್ರ ಮರಳುಗಾರಿಕೆ ಸ್ಥಗಿತಗೊಂಡಿಲ್ಲ. ಕಳೆದ ಒಂದೆ–ರಡು ವರ್ಷಗಳಲ್ಲಿ ದೊಡ್ಡ ಉದ್ಯಮಿಗಳು ಮತ್ತು ಪ್ರಭಾವೀ ವ್ಯಕ್ತಿಗಳು ಮರಳುಗಾರಿಕೆಯನ್ನು ಒಚಿದು ದಂಧೆಯನ್ನಾಗಿ ಮಾಡಿಕೊಂಡು ಜೆಸಿಬಿ ಯಂತ್ರಗಳಿಂದ ಎಗ್ಗಿಲ್ಲದೆ ತುಂಬಾ ಆಳಕ್ಕೂ ಮರಳುಗಾರಿಕೆ ನಡೆಸಿದ ಪರಿಣಾಮವಾಗಿ, ಚೆನ್ನೈ ಹಸಿರು ಪೀಠ (ಸಿಆರ್‌ಝಡ್ ವಲಯ – ಉಪ್ಪು ನೀರಿನ ನದಿ ವ್ಯಾಪ್ತಿ) ಹಾಗೂ ರಾಜ್ಯದ ಹೈಕೋರ್ಟ್ (ನಾನ್ ಸಿಆರ್‌ಝಡ್ ವಲಯ – ಉಪ್ಪು ನೀರು ಅಲ್ಲದ ನದಿ ವ್ಯಾಪ್ತಿ) ಮರಳುಗಾರಿಕೆ ತಡೆಯಾಜ್ಞೆ ನೀಡಿರುತ್ತದೆ.

ಚೆನ್ನೈನಲ್ಲಿನ ಹಸಿರು ಪೀಠದ ಮುಂದೆ ಇರುವ ಪ್ರಕರಣ ಅಕ್ಟೋಬರ್ 01ಕ್ಕೆ ವಿಚಾರಣೆಗೆ ಬರಲಿದೆ.

ಜುಲೈ 01ನೇ ತಾರೀಖಿನಿಂದ ಇಡೀ ಉದ್ಯಮ ಮತ್ತು ಕಾರ್ಮಿಕ ಪ್ರಶ್ನೆ ಬಗ್ಗೆ ಸತತವಾಗಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತಂದಿದ್ದರೂ, ಮಾತುಕತೆ ನಡೆಸಿದ್ದರೂ ಸಹ ಸಮಸ್ಯೆಯನ್ನು ಬಗೆಹರಿಸಲು ಯಾರೂ ಕ್ರಮ ಕೈಗೊಳ್ಳದಿರುವ ಹಿನ್ನೆಲೆಚುಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘವು ಸಮಸ್ಯೆ ನಿವಾರಿಸಲು ಆಗ್ರಹಿಸಿ ಈ ಸರದಿ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದರು. ಪ್ರತಿ ದಿನವೂ ಸುಮಾರು 500 ರಿಂದ 600 ಜನರು ಧರಣಿಯಲ್ಲಿ ಮುಂಜಾನೆಯಿಂದ ಸಂಜೆವರೆಗೂ ಭಾಗವಹಿಸಿದ್ದರು. ಮತ್ತು 50ಕ್ಕೂ ಹೆಚ್ಚಿನ ಮುಖಂಡರು ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

ಸಿಐಟಿಯು ಉಡುಪಿ ಜಿಲ್ಲಾಧ್ಯಕ್ಷ ಪಿ.ವಿಶ್ವನಾಥ ರೈ ಸತ್ಯಾಗ್ರಹವನ್ನು ಉದ್ಘಾಟಿಸಿ ಮಾತನಾಡಿದರು. ಸಂಘದ ಅಧ್ಯಕ್ಷ ಶೇಖರ ಬಂಗೇರ, ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ಮುಖಂಡರಾದ ಬಾಲಕೃಷ್ಣ ಶೆಟ್ಟಿ, ವಿಠಲ ಪ್ರಜಾರಿ, ದಾಸು ಭಂಡಾರಿ, ಉಮರ್ ಕಟಪಾಡಿ, ವಾಮನ ಬಂಗೇರ, ಕವಿರಾಜ್ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

ಎರಡನೇ ದಿನಕ್ಕೆ ಹೋರಾಟ ಮುಂದುವರೆದ ಪರಿಣಾಮವಾಗಿ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಮೋದ್ ಮಧ್ವರಾಜ್‌ರವರು ಪ್ರತಿಭಟನಾ ಸ್ಥಳಕ್ಕೆ ಆಗಮಿಸದೆ ಇರುವುದರಿಂದ ಮರು ದಿನ ಹೋರಾಟದ ಮೂರನೇ ದಿನದಂದು ಉಸ್ತುವಾರಿ ಸಚಿವರ ಕಛೇರಿಗೆ ಮುತ್ತಿಗೆ ಹಾಕಲು ಪ್ರತಿಭಟನಾಕಾರರು ನಿರ್ಧರಿಸಿ ಸಜ್ಜಾದಾರು. ಈ ಸಂದರ್ಭದಲ್ಲಿ ಸ್ಥಳಕ್ಕೆ ಆಗಮಿಸಿದ ಪೊಲೀಸ್ ಅಧಿಕಾರಿಗಳು ಮತ್ತು ಅಪಾರ ಜಿಲ್ಲಾಧಿಕಾರಿಗಳು ಆಗಮಿಸಿ ಪ್ರತಿಭಟನಾಕಾರರ ಸಮ್ಮುಖದಲ್ಲಿ ಸಚಿವರನ್ನು ಸಂಪರ್ಕಿಸಿ ಮುಖಂಡರಾದ ಬಾಲಕೃಷ್ಣ ಶೆಟ್ಟಿರವರ ಜೊತೆ ಮಾತನಾಡಿದ ಸಚಿವರು ಸರಿಯಾದ ಮಾಹಿತಿ ಇರದ ಪರಿಣಾಮ ಹೋರಾಟದ ಸ್ಥಳಕ್ಕೆ ಆಗಮಿಸಲು ಆಗಲಿಲ್ಲ. ಈ ಬಗ್ಗೆ ಸೂಕ್ತಕ್ರಮ ವಹಿಸಲಾಗುವುದೆಂದು ತಿಳಿಸಿದ್ದರಿಂದ ಮುತ್ತಿಗೆ ಕಾರ್ಯಕ್ರಮದ ಬದಲಾಗಿ ಸದರಿ ಧರಣಿಯನ್ನು ಮುಂದುವರೆಸಲಾಯಿತು.

ಕುಂದಾಪುರದಲ್ಲಿ ನಿವೇಶನ ರಹಿತರ ಪ್ರತಿಭಟನೆ



ವಸತಿ ರಹಿತ ಹಾಗೂ ನಿವೇಶನ ರಹಿತ ಅರ್ಜಿದಾರರಿಗೆ ಭೂಮಿ ಹಕ್ಕುಪತ್ರ ಮಂಜೂರು ಮಾಡುವಂತೆ ಆಗ್ರಹಿಸಿ ಸೆಪ್ಟೆಂಬರ್ 27ರಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಕುಂದಾಪುರ ತಾಲೂಕು ಸಮಿತಿಯ ನೇತೃತ್ವದಲ್ಲಿ ಕುಂದಾಪುರದ ಪುರಸಭಾ ಕಚೇರಿಯ ಮುಂದೆ ಪ್ರತಿಭಟನಾ ಧರಣಿ ನಡೆಸಿದರು.

ಕುಂದಾಪುರ ಪುರಸಭೆಯಲ್ಲಿ ನಿವೇಶನ ರಹಿತರ ಬೇಡಿಕೆಗಳು ಸಲ್ಲಿಕೆಯಾದ ಬಳಿಕ ನಿವೇಶನ ರಹಿತರ ಅಂತಿಮಪಟ್ಟಿ ಸಿದ್ಧವಾಗಿಯೂ ಹಲವಾರು ವರ್ಷಗಳು ಕಳೆದಿವೆ. ನಿವೇಶನ ರಹಿತರಿಗೆ ನೀಡಲು ಸರಕಾರೀ ಜಮೀನು ಗುರುತಿಸುವ ಹಾಗೂ ಖಾಸಗಿ ಜಾಗ ಖರೀದಿಸಿ ಹಕ್ಕುಪತ್ರ ಕೊಡಿಸಲು ಪುರಸಭಾ ಅಧಿಕಾರಿಗಳು ಮೇಲಾಧಿಕಾರಿಗಳಿಗೆ ಪ್ರಸ್ತಾವನೆಗಳನ್ನು ಸಿದ್ಧಪಡಿಸಿಲ್ಲ. ನಿವೇಶನ ರಹಿತರಿಗೆ ನಿವೇಶನ ಒದಗಿಸುವ ನಿಟ್ಟಿನಲ್ಲಿ ಯಾವೊಂದು ಕ್ರಮಕೈಗೊಳ್ಳದ ಪುರಸಭಾ ಆಡಳಿತವನ್ನು ಪ್ರತಿಭಟನಾಕಾರರು ಕಟುವಾಗಿ ಟೀಕಿಸಿದರು.

ಪ್ರತಿಭಟನಾ ಧರಣಿಯನ್ನು ಉದ್ದೇಶಿಸಿ ಮಾಜಿ ಪುರಸಭಾ ಅಧ್ಯಕ್ಷರಾದ ವಿ.ನರಸಿಂಹ ಮಾತನಾಡಿದರು. ಅದಕ್ಕೂ ಮೊದಲೂ ಕುಂದಾಪುರ ಕಾರ್ಮಿಕ ಭವನದಲ್ಲಿ ನಡೆದ ನಿವೇಶನ ರಹಿತರ ಅರ್ಜಿದಾರರ ಸಮಾವೇಶವನ್ನು ಉದ್ದೇಶಿಸಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಮಾತನಾಡಿದರು.

ಸಿಐಟಿಯು ಕಾರ್ಮಿಕ ಮುಖಂಡರಾದ ಎಚ್.ನರಸಿಂಹ, ರಾಜೀವ ಪಡುಕೋಣೆ, ಮಹಾಬಲ ವಡೇರಹೋಬಳಿ, ನಾಗರತ್ನ ನಾಡ, ಬಾಲಕೃಷ್ಣ ಕೆ.ಎಂ, ಸತೀಶ ಖಾರ್ವಿ, ಪದ್ಮಾವತಿ ಶೆಟ್ಟಿ, ಕುಶಲ, ರಮೇಶ ಪೂಜಾರಿ ಗುಲ್ವಾಡಿ, ಅಶೋಕ ಹಟ್ಟಿಅಂಗಡಿ ಹೋರಾಟದ ನೇತೃತ್ವ ವಹಿಸಿದ್ದರು.

ಆವೆ ಮಣ್ಣು ತೆಗೆಯಲು ಪರಿಸರ ಇಲಾಖೆಯ ಅನುಮೋದನೆ ಕಡ್ಡಾಯವೇಕೆ?

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು)ಗೆ ಸಂಯೋಜಿಸಲ್ಪಟ್ಟ ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ 16ನೇ ವಾರ್ಷಿಕ ಮಹಾಸಭೆಯು ಸೆಪ್ಟಂಬರ್ 25ರಂದು ಕುಂದಾಪುರದ ಕಾರ್ಮಿಕ ಭವನದಲ್ಲಿ ಜರುಗಿತು. ಸಂಘದ ಅಧ್ಯಕ್ಷ ವಿ.ನರಸಿಂಹ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ "ಉಡುಪಿ ಜಿಲ್ಲೆಯ ಹಂಚು ಉದ್ದಿಮೆ ತೀವ್ರವಾದ ಬಿಕ್ಕಟ್ಟನ್ನು ಎದುರಿಸುತ್ತಿದ್ದು, ಹಂಚು ಮಾರುಕಟ್ಟೆ ಕುಸಿತ, ಕಚ್ಚಾ ವಸ್ತು ಆವೆ ಮಣ್ಣನ್ನು ತೆಗೆಯಲು ಪರಿಸರ ಇಲಾಖೆಯ ಅನುಮೋದನೆ ಕಡ್ಡಾಯವೆಂಬ ಸರಕಾರದ ನೀತಿಯಿಂದಾಗಿ ಕೈಗಾರಿಕೆಗೆ ಮಾರಕವಾಗಲಿದೆ. ಹಂಚು ಉದ್ದಿಮೆ ರಕ್ಷಣೆಗೆ ಸರಕಾರ ಸಕಾರಾತ್ಮಕವಾಗಿ ಸ್ಪಂದಿಸಬೇಕು. ಹಂಚು ಕೈಗಾರಿಕೆ ಉಳಿಸಿ ಬೆಳೆಸುವ ಬಗ್ಗೆ ಕಾರ್ಮಿಕ ಸಂಘವಾಗಿ ನಾವು ಸರಕಾರವನ್ನು ಒತ್ತಾಯಿಸಲು ಸಂಘಟಿತ ಹೋರಾಟ ಮಾಡಬೇಕು ಎಂದು ಹೇಳಿದರು.

ಶ್ರದ್ಧಾಂಜಲಿ ಠರಾವು ಮಂಡಿಸಿದ ಬಳಿಕ ಹಂಚು ಕಾರ್ಮಿಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಚ್.ನರಸಿಂಹ ಗತ ವರ್ಷದ ಚಟುವಟಿಕೆ ವರದಿ ಮಂಡಿಸಿದರು. ಪ್ರತಿನಿಧಿಗಳು ವರದಿಯ ಮೇಲೆ ಚರ್ಚಿಸಿ ರಚನಾತ್ಮಕ ಸಲಹೆ ನೀಡಿದರು. ಉಡುಪಿ ಜಿಲ್ಲಾ ಸಿಐಟಿಯು ಕಾರ್ಯದರ್ಶಿ ಸುರೇಶ ಕಲ್ಲಾಗರ, ಮಹಾಬಲ ವಡೇರ ಹೋಬಳಿ, ವೆಂಕಟೇಶ ಕೋಣಿ, ಸಭೆಯಲ್ಲಿ ಮಾತನಾಡಿದರು.

ಹಂಚು ಕೈಗಾರಿಕೆಯಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಕನಿಷ್ಠ ವೇತನ ಜ್ಯಾರಿಗೊಳಿಸಬೇಕು. ಇ.ಎಸ್.ಐ. ಸಮಸ್ಯೆಗಳನ್ನು ಬಗೆಹರಿಸಬೇಕು, ಕೇರಳ ರಾಜ್ಯದ ಮಾದರಿಯಂತೆ ಸಾರ್ವಜನಿಕ ವಿತರಣಾ ವ್ಯವಸ್ಥೆ ಬಲಗೊಳಿಸಬೇಕು, ಬೆಲೆ ಏರಿಕೆಯನ್ನು ತಡೆಗಟ್ಟಬೇಕು. ವೃತ್ತಿ ತೆರಿಗೆ ಪಾವತಿಸುವುದಕ್ಕೆ ಆದಾಯ ಮಿತಿ ಹೆಚ್ಚಿಸಲು ಕ್ರಮವಹಿಸಬೇಕು. ಹಂಚು ಕೈಗಾರಿಕೆ–ಯ ಬಿಕ್ಕಟ್ಟನ್ನು ಪರಿಹರಿಸಿ–ಪ್ರೋತ್ಸಾಹ ನೀಡಬೇಕು ಎಂದು ಸರಕಾರವನ್ನು ಒತ್ತಾಯಿಸುವುದಕ್ಕೆ ಸಂಘಟಿತ ಹೋರಾಟ ಮಾಡಲು ತೀರ್ಮಾನಿಸಲಾಯಿತು.





ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ ಅಧ್ಯಕ್ಷರಾಗಿ ಕುಂದಾಪುರ ಪುರಸಭೆ ಮಾಜಿ ಅಧ್ಯಕ್ಷ, ಕಾರ್ಮಿಕ ಮುಖಂಡ ವಿ.ನರಸಿಂಹ ಪುನರಾಯ್ಕೆಗೊಂಡರು. ಎಚ್.ನರಸಿಂಹ (ಪ್ರಧಾನ ಕಾರ್ಯದರ್ಶಿ) ಪ್ರಕಾಶ ಕೋಣಿ (ಕೋಶಾಧಿಕಾರಿ) ಜಿ.ಡಿ.ಪಂಜು– ಲಕ್ಷ್ಮಣ ಡಿ. (ಉಪಾಧ್ಯಕ್ಷರು) ಗೋಪಾಲ ಮಾರ್ಕೊಡು (ಜೊತೆ ಕಾರ್ಯದರ್ಶಿ) ಇವರನ್ನೊಳಗೊಂಡ 54 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರನ್ನು ಸರ್ವಾನುಮತದಿಂದ ಆಯ್ಕೆಯಾಗಿದ್ದಾ–ರೆ.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಕುಂದಾಪುರ ತಾಲೂಕು ಅಧ್ಯಕ್ಷ ರಾಜೀವ ಪಡು–ಕೋಣೆ, ನಾಗರತ್ನ ನಾಡ, ಶುಭ ಸಂಶನೆ ಮಾಡಿದರು. ಸಂಘದ ಪದಾಧಿಕಾರಿ ಪ್ರಕಾಶ ಕೋಣಿ, ಜಿ.ಡಿ.ಪಂಜು, ಲಕ್ಷ್ಮಣ ಡಿ. ಗೋಪಾಲ ಮಾರ್ಕೊಡು, ಶೀಲಾವತಿ ಉಪಸ್ಥಿತರಿದ್ದರು.

ವರದಿ : ವೆಂಕಟೇಶ ಕೋಣಿ

ಅತಿಥಿ ಅಂಕಣ



ಪ್ರೊ. ಟಿ.ಆರ್. ಚಂದ್ರಶೇಖರ್

ಸ್ತ್ರೀವಾದಿಗಳು ಮಹಿಳೆಯರಿಗಾಗಿ ಸರ್ಕಾರಗಳು ಹಮ್ಮಿಕೊಳ್ಳುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಎರಡು ಭಾಗಗಳಾಗಿ ವರ್ಗೀಕರಿಸುತ್ತಾರೆ. ಮೊದಲನೆಯದು ಮಹಿಳೆಯರ ದೈನಂದಿನ ಹಿತಾಸಕ್ತಿಗಳನ್ನು ಈಡೇರಿಸುವ ಕಾರ್ಯಕ್ರಮಗಳು ಮತ್ತು ಎರಡನೆಯದು ಮಹಿಳೆಯರ ಸಂಘರ್ಷಣಾತ್ಮಕ ಹಿತಾಸಕ್ತಿಗಳನ್ನು ಪೂರೈಸುವ ಕಾರ್ಯಕ್ರಮಗಳು. ಕರ್ನಾಟಕದಲ್ಲಿ ಇಂದು ಅನುಷ್ಟಾನದಲ್ಲಿರುವ ಅನೇಕ ಕಾರ್ಯಕ್ರಮಗಳು ಮೊದಲನೆಯ ರೀತಿಯವು. ಈ ಬಗೆಯ ಕಾರ್ಯಕ್ರಮಗಳನ್ನು ಪೂರೈಸಲು ಸರ್ಕಾರ ಹಣವನ್ನು ಮಾತ್ರ ವಿನಿಯೋಗಿಸಬೇಕಾಗುತ್ತದೆ ವಿನಾ ಯಾವುದೇ ರೀತಿಯ ಸಾಮಾಜಿಕ ಬದಲಾವಣೆಯನ್ನು ಯೋಜಿಸಬೇಕಾಗಿಲ್ಲ. ಆದರೆ ಸಾಮಾಜಿಕ ರಚನೆಯಲ್ಲಿ ಬದಲಾವಣೆಯಿಲ್ಲದೆ ಮಹಿಳೆಯರ ಬದುಕನ್ನು ಸಮೃದ್ಧಗೊಳಿಸುವುದು ಸಾಧ್ಯವಿಲ್ಲ. ಲಿಂಗ ಸಮಾನತೆ ಅನ್ನುವುದು ಕೇವಲ ವ್ಯಕ್ತಿಗತ ಸಂಗತಿಯಲ್ಲ. ಅದು ಸಾಮಾಜಿಕ ಮತ್ತು ಆರ್ಥಿಕ ರಚನೆಗೆ ಸಂಬಂಧಿಸಿದ ಸಂಗತಿ.

ಪರಂಪರೆಯ ವೈಭವೀಕರಣ ಮತ್ತು ಲಿಂಗ ಸಮಾನತೆ

ಮಹಿಳೆಯರಿಗೆ ದೇವಾಲಯ ಪ್ರವೇಶ ನಿಷೇಧ; ಮರ್ಯಾದೆ ಹತ್ಯೆ, ವೈವಾಹಿಕ ಅತ್ಯಾಚಾರ ಅತ್ಯಾಚಾರವಲ್ಲ; ಮಹಿಳೆಯರ ಕಾರ್ಯಕ್ಷೇತ್ರವೇನಿದ್ದರೂ ಕುಟುಂಬ, ಗಂಡ; ಮಹಿಳೆಯರು ರಾತ್ರಿ ಸಮಯದಲ್ಲಿ ಹೊರಗೆ ನಡೆದಾಡಬಾರದು; ಮಹಿಳೆಯರು ಇಂತಹದ್ದೇ ಬಟ್ಟೆ ಉಡಬೇಕು; ಮಹಿಳಾ ದುಡಿಮೆಗಾರರಿಗೆ ರಾತ್ರಿ ಸರದಿಯ ನಿಷೇಧ – ಇತ್ಯಾದಿ ಸಂಗತಿಗಳು ಭಾರತೀಯ ಮಹಿಳೆಯರ ಸ್ವಾತಂತ್ರ್ಯದ ವ್ಯಾಪ್ತಿಯನ್ನು ಸೀಮಿತಗೊಳಿಸಿವೆ. ನಮ್ಮ ಸಮಾಜದಲ್ಲಿ ಮಹಿಳೆಯರ ಬದುಕನ್ನು ನಿಯತ್ರಿಸುವ ಸಾಮಾಜಿಕ ಕಟ್ಟುಪಾಡುಗಳು, ನಿಯಮ–ಸಂಹಿತೆಗಳು ಲಾಗಾಯ್ತಿನಿಂದ ಹರಿದುಕೊಂಡು ಬಂದಿವೆ. ಇವೆಲ್ಲ ನಮ್ಮ ಸಮಾಜದಲ್ಲಿನ ಸಾಂಪ್ರದಾಯಿಕ ನಂಬಿಕೆ, ಆಚರಣೆಗಳು. ಸಮಾಜದಲ್ಲಿ ಏನೆಲ್ಲ ಬದಲಾಗುತ್ತಿದ್ದರೂ ಮಹಿಳೆಯರಿಗೆ ಸಂಬಂಧಿಸಿದಂತೆ ಅನೇಕ ಸಂಗತಿಗಳು ಪಾರಂಪರಿಕವಾಗಿ ಮುಂದುವರಿದುಕೊಂಡು ಬರುತ್ತಿವೆ ಮತ್ತು ಅವುಗಳನ್ನು ಗಟ್ಟಿ ಮಾಡುವ ಶಕ್ತಿಗಳು ನಮ್ಮಲ್ಲಿ ಕ್ರಿಯಾಶೀಲವಾಗಿವೆ. ಪರಂಪರೆಯ ಹೆಸರಿನಲ್ಲಿ ಮಹಿಳೆಯರಿಗೆ ಕೆಲವೊಂದು ದೇವಾಲಯಗಳಲ್ಲಿ ಪ್ರವೇಶವನ್ನು ನಿಷೇಧಿಸಲಾಗಿದೆ. ಇತ್ತೀಚಿಗೆ ಕೇಂದ್ರ ಸರ್ಕಾರ ತಂದ ಒಂದು ಶಾಸನದಲ್ಲಿ ವೈವಾಹಿಕ ಅತ್ಯಾಚಾರ ಅಪರಾಧವಲ್ಲವೆಂದು ಘೋಷಿಸಿದೆ. ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಮಂಡಿಸಿರುವ ಒಂದು ಮಸೂದೆಯಲ್ಲಿ ಮಹಿಳೆಯರು ತಮ್ಮ ಗರ್ಭವನ್ನು ಬಾಡಿಗೆ ಕೊಡುವುದಾದರೆ ಅದ–ಕ್ಕೆ ಹಣವನ್ನು ಪಡೆಯುವಂತಿಲ್ಲ ಮತ್ತು ಅದು ಭಾರತೀಯ ವಿವಾಹಿತ ದಂಪತಿಗಳಿಗೆ ಮಾತ್ರ ಎಂದು ಅನೇಕ ಮಿತಿಗಳನ್ನು ಹೇರುವ ಕ್ರಮ ತೆಗೆದುಕೊಂಡಿದೆ. ಈ ಕ್ರಮಗಳು, ಸಾಂಪ್ರದಾಯಿಕ ಆಚರಣೆಗಳು, ಪಾರಂಪರಿಕ ನಂಬಿಕೆಗಳು ಮಹಿಳೆಯರ ಸ್ವಾತಂತ್ರ್ಯದ ವ್ಯಾಪ್ತಿಯನ್ನು ಸೀಮಿತಗೊಳಿಸುತ್ತಿವೆ. ಅನೇಕ ಹಕ್ಕುಗಳಿಂದ ಅವರನ್ನು ವಂಚಿಸಲಾಗುತ್ತಿದೆ.

ನಮ್ಮದು ಮೂಲತಃ ಅಸಮಾನತೆಯ, ಶ್ರೇಣೀಕರಣದ, ಪುರುಷ ಪ್ರಧಾನ ಸಮಾಜ. ಇಲ್ಲಿ ಮಹಿಳೆಯರ ಹಕ್ಕುಗಳನ್ನು ಶಾಸನಗಳು ನಿಯಂತ್ರಿಸುವುದಕ್ಕೆ ಬದಲಾಗಿ ಸಂಪ್ರದಾಯಗಳು ನಿಯಂತ್ರಿಸುತ್ತವೆ. ಮಹಿಳೆಯರಿಗೆ ಸಂಬಂಧಿಸಿದಂತೆ ಕೆಲವೊಂದು ವಿಷಯದಲ್ಲಿ ಸಂವಿಧಾನದ ಹಕ್ಕುಗಳು ಅಪ್ರಸ್ತುತವಾಗಿ ಬಿಡುತ್ತವೆ. ಈ ಕ್ರಮಗಳು, ಸಂಪ್ರದಾಯಗಳು, ಪರಂಪರೆಯಿಂದ ಹರಿದುಕೊಂಡು ಬರುತ್ತಿರುವ ಆಚರಣೆಗಳು ಮಹಿಳೆಯರಿಗೆ ಮಾತ್ರ ಅನ್ವಯವಾಗುತ್ತವೆ. ಈ ಬಗೆಯ ನಿಯಂತ್ರಣಗಳಿಂದ ಪುರುಷರು ಮುಕ್ತರಾಗಿದ್ದಾರೆ. ಅಂದರೆ ನಮ್ಮ ಸಮಾಜವು ತಿಳಿದು ತಿಳಿದು ಲಿಂಗ ಅಸಮಾನತೆಯನ್ನು ಸಂಪ್ರದಾಯದ ಹೆಸರಿನಲ್ಲಿ ಒಪ್ಪಿಕೊಂಡು ಬಿಟ್ಟಿದೆ ಮತ್ತು ಪೋಷಿಸುತ್ತಿದೆ.

ಲಿಂಗ ಸಂಬಂಧಗಳಲ್ಲಿ ಸಹಕಾರ ಮತ್ತು ಸಂಘರ್ಷದ ಸಂಗತಿಗಳು

ಮಹಿಳೆಯರ ಅಭಿವೃದ್ಧಿಗೆ ಸರ್ಕಾರಗಳು ಅನೇಕ ಕಾರ್ಯಕ್ರಮಗಳನ್ನು ರೂಪಿಸಿವೆ, ಜಾರಿಗೊಳಿಸಿವೆ. ವಿಶ್ವಸಂಸ್ಥೆ, ಅದರ ಅಂಗ ಸಂಸ್ಥೆಗಳು, ವಿಶ್ವ ಬ್ಯಾಂಕು ಮುಂತಾದವು ಮಹಿಳೆಯರ ಸಶಕ್ತೀಕರಣ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸುತ್ತಿವೆ. ಇತ್ತೀಚಿಗೆ ವಿಶ್ವಬ್ಯಾಂಕು ಲಿಂಗ ಸಮಾನತೆಯನ್ನು ಸ್ಮಾರ್ಟ್ ಅರ್ಥಶಾಸ್ತ್ರ ಎಂದು ಕರೆದಿದೆ (2012). ಮಹಿಳೆಯರ ಅಭಿವೃದ್ಧಿಯನ್ನು ಹಕ್ಕಿನ ಪರಿಭಾಷೆಯಲ್ಲಿ ಪರಿಭಾವಿಸಿಕೊಳ್ಳುವ ಕ್ರಮವೂ ವಾಡಿಕೆಯಲ್ಲಿದೆ. ಇಲ್ಲಿ ನಾವು ಕೇಳಿಕೊಳ್ಳಬೇಕಾದ ಸೂಕ್ಷ್ಮ ಪ್ರಶ್ನೆಗಳು ಇವು: ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಮಹಿಳೆಯರ ಯಾವ ಬಗೆಯ ಹಿತಾಸಕ್ತಿಗಳನ್ನು ಪೂರೈಸುತ್ತಿವೆ? ಅವು ಸಮಾಜದ ಯಾವ ವರ್ಗಗಳನ್ನು ಗುರಿಯಾಗಿಟ್ಟುಕೊಂಡಿವೆ? ಯಾವ ಪ್ರದೇಶದ ಮಹಿಳೆಯರನ್ನು ಅದು ಓಲೈಸುತ್ತಿದೆ? ಈ ಪ್ರಶ್ನೆಗಳನ್ನು ನಾವು ಚರ್ಚಿಸಬೇಕಾಗಿದೆ.

ಸ್ತ್ರೀವಾದಿಗಳು ಮಹಿಳೆಯರಿಗಾಗಿ ಸರ್ಕಾರಗಳು ಹಮ್ಮಿಕೊಳ್ಳುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಎರಡು ಭಾಗಗಳಾಗಿ ವರ್ಗೀಕರಿಸುತ್ತಾರೆ. ಮೊದಲನೆಯದು ಮಹಿಳೆಯರ ದೈನಂದಿನ ಹಿತಾಸಕ್ತಿಗಳನ್ನು ಈಡೇರಿಸುವ ಕಾರ್ಯಕ್ರಮಗಳು ಮತ್ತು ಎರಡನೆಯದು ಮಹಿಳೆಯರ ಸಂಘರ್ಷಣಾತ್ಮಕ ಹಿತಾಸಕ್ತಿಗಳನ್ನು ಪೂರೈಸುವ ಕಾರ್ಯಕ್ರಮಗಳು (ವಿವರಗಳಿಗೆ ನೋಡಿ. ಶ್ರೀಲತಾ ಬಾಟ್ಲಿವಾಲ 1994, ನೈಲಾ ಕಬೀರ್ 1996). ದೈನಂದಿನ ಹಿತಾಸಕ್ತಿಗಳು ಅಂದರೆ ಮಹಿಳೆಯರ ಆಹಾರ, ಉದ್ಯೋಗ, ವಸತಿ, ಆರೋಗ್ಯ, ಶಿಕ್ಷಣ, ಕುಡಿಯುವ ನೀರು ಮುಂತಾದ ಸಂಗತಿಗಳಿಗೆ ಸೌಲಭ್ಯ ಒದಗಿಸುವುದು. ಸಂಘರ್ಷಣಾತ್ಮಕ ಹಿತಾಸಕ್ತಿಗಳು ಅಂದರೆ ಮಹಿಳೆಯರ ಆಸ್ತಿ ಹಕ್ಕು, ಸಂತಾನೋತ್ಪತ್ತಿ ದುಡಿಮೆಯನ್ನು ಗಂಡ–ಹೆಂಡತಿ ಹಂಚಿಕೊಳ್ಳುವುದು, ಲಿಂಗ ಸಂಬಂಧಿ ಶ್ರಮ ವಿಭಜನೆಯನ್ನು ಅಪ್ರಸ್ತುತವನ್ನಾಗಿಸುವುದು, ಮಹಿಳೆಯರನ್ನು 'ತಾಯಿ' 'ಹೆಂಡತಿ', 'ಮಗಳು' ––– ಈ ರೀತಿಯಲ್ಲಿ ನೋಡುವುದಕ್ಕೆ ಪ್ರತಿಯಾಗಿ ಸರ್ವತಂತ್ರ ಸ್ವತಂತ್ರ ವ್ಯಕ್ತಿಗಳನ್ನಾಗಿ ಪರಿಭಾವಿಸಿಕೊಳ್ಳುವುದು, ಮಹಿಳೆಯರ ದೈಹಿಕ ಭದ್ರತೆ ಹಕ್ಕು, ಸ್ವಂತ ನಿರ್ಣಯದ ಮೇಲೆ ಸಂಚರಿಸುವ ಹಕ್ಕು ಮುಂತಾದವು.

ಕರ್ನಾಟಕದಲ್ಲಿ ಇಂದು ಅನುಷ್ಟಾನದಲ್ಲಿರುವ ಅನೇಕ ಕಾರ್ಯಕ್ರಮಗಳು, ಅಂದರೆ ಭಾಗ್ಯಲಕ್ಷ್ಮಿ, ಬೈಸಿಕಲ್ಲು, ಸ್ತ್ರೀಶಕ್ತಿ, ಮಹಿಳಾ ಸ್ವಸಹಾಯ ಗುಂಪುಗಳು, ಯಶಸ್ವಿನಿ, ಮಡಿಲು, ಜನನಿ ಸುರಕ್ಷಾ, ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಶೇ.50 ಸದಸ್ಯತ್ವ ಮೀಸಲಾತಿ, ದೇವದಾಸಿ ವಸತಿ ಯೋಜನೆ ಮುಂತಾದವು ಮಹಿಳೆಯರ ದೈನಂದಿನ ಹಿತಾಸಕ್ತಿಗಳನ್ನು ಮಾತ್ರ ಪೂರೈಸಬಲ್ಲವು. ಈ ಬಗೆಯ ಅಗತ್ಯಗಳನ್ನು ಸರ್ಕಾರಗಳು ಪೂರೈಸಬೇಕಾಗುತ್ತದೆ. ಇವೆಲ್ಲ ಮಹಿಳೆಯರ ಹಿಟ್ಟು, ಬಟ್ಟೆ, ಹೊಟ್ಟೆ ಪ್ರಶ್ನೆಗಳು. ಇವು ಮಹಿಳೆಯರ ಬದುಕನ್ನು ಸುಧಾರಿಸುತ್ತವೆ. ಈ ಬಗೆ–ಯ ಕಾರ್ಯಕ್ರಮಗಳನ್ನು ಪೂರೈಸಲು ಸರ್ಕಾರ ಹಣವನ್ನು ಮಾತ್ರ ವಿನಿಯೋಗಿಸಬೇಕಾಗುತ್ತದೆ ವಿನಾ ಯಾವುದೇ ರೀತಿಯ ಸಾಮಾಜಿಕ ಬದಲಾವಣೆಯನ್ನು ಯೋಜಿಸಬೇಕಾಗಿಲ್ಲ. ಈ ಕಾರ್ಯಕ್ರಮಗಳು ಮಹಿಳೆಯರ ಭೌತಿಕ ಬದುಕನ್ನು ಉತ್ತಮ ಪಡಿಸುತ್ತವೆ. ಆದರೆ ಇವು ಮಹಿಳೆಯರು ಎದುರಿಸುತ್ತಿರುವ ಅಸಮಾನತೆ, ಶೋಷಣೆ, ಹಿಂಸೆ, ಆಸ್ತಿ, ಅಧಿಕಾರ, ಘನತೆ ಮುಂತಾದವುಗಳಿಗೆ ಸಂಬಂಧಿಸಿದ ತಾರತಮ್ಯ ಸ್ಥಿತಿಗತಿಯನ್ನು ಮಾತ್ರ ಬದಲಾಯಿಸಲಾರವು.

ವಿಶ್ವಬ್ಯಾಂಕು ಕೂಡ ಇಂತಹ ಕಾರ್ಯಕ್ರಮಗಳ ಬಗ್ಗೆ ಆಸಕ್ತಿ ವಹಿಸುತ್ತದೆ. ಅದು ಇತ್ತೀಚಿಗೆ ಕಾರ್ಪೋರೇಟ್ ಮತ್ತು ವಾಣಿಜ್ಯ ಪರಿಭಾಷೆಯಲ್ಲಿ ಲಿಂಗ ಸಮಾನತೆಯನ್ನು ಪರಿಭಾವಿಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲೆ ಬಂಡವಾಳ ವಿನಿಯೋಗಿಸಿದರೆ ಆರ್ಥಿಕತೆಯಲ್ಲಿ ಉತ್ಪಾದನಾ ಕ್ಷಮತೆ ಉತ್ತಮವಾಗಿ ಜಿ ಡಿ ಪಿ ಯಲ್ಲಿ ಏರಿಕೆಯಾಗುತ್ತದೆ ಎಂಬ ಸಿದ್ಧಾಂತವನ್ನು ಮುಂದು ಮಾಡುತ್ತಿದೆ. ಇದನ್ನು ಅದು 'ಸ್ಮಾರ್ಟ್ ಅರ್ಥಶಾಸ್ತ್ರ' ಎಂದು ಕರೆಯುತ್ತಿದೆ. ಲಿಂಗ ಸಮಾನತೆಯನ್ನು ಅಭಿವೃದ್ಧಿಯ ಒಂದು ಸಾಧನವಾಗಿ ನೋಡುವ ಕ್ರಮ ಇಲ್ಲಿದೆ. ಅವು ಮಹಿಳೆಯರ ಸ್ವಾತಂತ್ರ್ಯವನ್ನು ವಿಸ್ತೃತಗೊಳಿಸುತ್ತವೋ ಇಲ್ಲವೋ ಎಂಬುದು ಇಲ್ಲಿ ಮುಖ್ಯವಾಗುವುದಿಲ್ಲ. ಮಹಿಳೆಯರು ಘನತೆಯಿಂದ ತಮ್ಮ ಬದುಕನ್ನು ಕಟ್ಟಕೊಳ್ಳಲು ಅವು ಅನುವು ಮಾಡಿಕೊಡುತ್ತವೋ ಇಲ್ಲವೋ ಅನ್ನುವುದು ಇಲ್ಲಿ ಮುಖ್ಯವಾಗುವುದಿಲ್ಲ. ಈ ಬಗೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಮರ್ತ್ಯ ಸೇನ್ ಉಪಕರಣವಾದಿ ಕ್ರಮಗಳು ಎಂದು ಕರೆಯುತ್ತಾನೆ. ನಿಜಕ್ಕೂ ಮಹಿಳೆಯರ ಸ್ವಾತಂತ್ರ್ಯದ ವ್ಯಾಪ್ತಿಯನ್ನು ವಿಸ್ತೃತಗೊಳಿಸುವ ಸಂಗತಿಗಳಾವುವು? ಅವುಗಳನ್ನು ಸಂಘರ್ಷಣಾತ್ಮಕ ಕಾರ್ಯಕ್ರಮ ಎಂದು ಏಕೆ ಕರೆಯಲಾಗುತ್ತದೆ?

ಸಂಘರ್ಷಣಾತ್ಮಕ ಕಾರ್ಯಕ್ರಮ

ಸಮಾಜ, ಸಂಪ್ರದಾಯ, ಪರಂಪರೆ, ಆಚರಣೆಗಳಲ್ಲಿ ರವಷ್ಟು ಬದಲಾವಣೆ ಬಯಸದ ದೈನಂದಿನ ಹಿತಾಸಕ್ತಿ ಪೂರೈಸುವ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸುವುದಕ್ಕೆ ಸರ್ಕಾರಗಳು ಮುಂದೆ ಬರುತ್ತವೆ. ಆದರೆ ಸಾಮಾಜಿಕ ರಚನೆಯಲ್ಲಿ ಬದಲಾವಣೆಯಿಲ್ಲದೆ ಮಹಿಳೆಯರ ಬದುಕನ್ನು ಸಮೃದ್ಧಗೊಳಿಸುವುದು ಸಾಧ್ಯವಿಲ್ಲ. ಲಿಂಗ ಸಮಾನತೆ ಅನ್ನುವುದು ಕೇವಲ ವ್ಯಕ್ತಿಗತ ಸಂಗತಿಯಲ್ಲ. ಅದು ಸಾಮಾಜಿಕ ಮತ್ತು ಆರ್ಥಿಕ ರಚನೆಗೆ ಸಂಬಂಧಿಸಿದ ಸಂಗತಿ.

ಆಸ್ತಿಯ ಹಕ್ಕನ್ನು ಶಾಸನದಲ್ಲಿ ಮಹಿಳೆಯರಿಗೆ ನೀಡಲಾಗಿದೆ. ಆದರೆ ಅದನ್ನು ಆಕೆಗೆ ದಕ್ಕಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಇಲ್ಲಿ ಅಧಿಕಾರ ಸಂಬಂಧದ ಪ್ರಶ್ನೆಯಿದೆ. ಲಿಂಗ ಸಂಬಂಧಿ ಅಧಿಕಾರ ಸಂಬಂಧಗಳಲ್ಲಿ ಬದಲಾವಣೆ ತಾರದೆ ಮಹಿಳೆಯರು ತಮ್ಮ ಶಾಸನಾತ್ಮಕ ಆಸ್ತಿ ಹಕ್ಕನ್ನು ಚಲಾಯಿಸಲು ಬರುವುದಿಲ್ಲ. ಕುಟುಂಬದಲ್ಲಿ ಮನೆವಾರ್ತೆ ದುಡಿಮೆಯನ್ನು ಗಂಡ ಮತ್ತು ಹೆಂಡತಿ ಹಂಚಿಕೊಳ್ಳುವ ಕ್ರಮವನ್ನು ನೋಡಬಹುದು. ಇದ–ಕ್ಕೆ ಶಾಸನದ ಅಗತ್ಯವಿಲ್ಲ. ಆದರೆ ಮಹಿಳೆಯರನ್ನು ಸಮಾನ ವ್ಯಕ್ತಿಯನ್ನಾಗಿ ಪುರುಷರು ನೋಡುವ ಮೌಲ್ಯದ ಅಗತ್ಯವಿದೆ. ಆದರೆ ನಮ್ಮ ಸಮಾಜದಲ್ಲಿ ಮಹಿಳೆಯರನ್ನು ಸಮಾನ ನೆಲೆಯಲ್ಲಿ ನೋಡುವ ಕ್ರಮವಿಲ್ಲ. ಕುಟುಂಬ ಚೌಕಟ್ಟಿನಲ್ಲಿಯೂ ಮಹಿಳೆಯರನ್ನು ಅಧೀನ ಸ್ಥಿತಿಯಲ್ಲಿಡಲಾಗುತ್ತದೆ.

ಇದನ್ನೆಲ್ಲ ಪ್ರಜ್ಞಾಪೂರ್ವಕವಾಗಿ ಯಾರೂ ಮಾಡುವುದಿಲ್ಲ. ಇವೆಲ್ಲ ನಮ್ಮ ಸಮಾಜದಲ್ಲಿ ಹೇಗೆ ಅಂತರ್ಗತಗೊಂಡಿವೆಯೆಂದರೆ ಅವುಗಳನ್ನು ಯಾರೂ ಹೇಳದಿದ್ದರೂ ಮಹಿಳೆಯರು ಪಾಲಿಸಬೇಕಾಗುತ್ತದೆ. ಉದಾಹರಣೆಗೆ ಗಂಡನ ಜೊತೆಯಲ್ಲಿ ಅಬ್ಬರಿಸಿ ಮಾತನಾಡಬಾರದು, ಆಸ್ತಿ, ಮನೆ, ರೇಷನ್ ಕಾರ್ಡ್ ಮುಂತಾದವು ಗಂಡನ ಹೆಸರಿನಲ್ಲಿರಬೇಕು, ಮನೆಯಲ್ಲಿ ಗಂಡಸರಿಗಿಂತ ಮೊದಲು ಮಹಿಳೆಯರು ಊಟ ಮಾಡುವಂತಿಲ್ಲ, ಕುಟುಂಬದ ಹಣಕಾಸು ವ್ಯವಹಾರವನ್ನು ಪುರುಷರು ಮಾತ್ರ ನಿರ್ವಹಿಸಬೇಕು, ಪುರುಷರು ಮಾತ್ರ ಉತ್ಪಾದನೆ ಮಾಡುವವರು, ಮಹಿಳೆಯರು ಏನಿದ್ದರೂ ಅನುಭೋಗಿಗಳು, ಮಹಿಳೆಯರು ಸಂಜೆಯಾದ ಮೇಲೆ ಮನೆಯಿಂದ ಹೊರಗೆ ಹೋಗುವಂತಿಲ್ಲ ಇತ್ಯಾದಿ ಇತ್ಯಾದಿ. ನಮ್ಮ ಸಂವಿಧಾನದಲ್ಲಿ ಕೊಡ ಮಾಡಿರುವ ಮೂಲಭೂತ ಹಕ್ಕುಗಳು ಪುರುಷರಿಗೆ ಮತ್ತು ಮಹಿಳೆಯರಿಗೆ ಸಮಾನ. ಆದರೆ ಮಹಿಳೆಯರು ಅನೇಕ ವಿಷಯಗಳಲ್ಲಿ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಉದಾಹರಣೆಗೆ ಮದುವೆಯಾಗುವ ಹಕ್ಕು, ಮಕ್ಕಳನ್ನು ಪಡೆಯುವ ಹಕ್ಕು, ದೈಹಿಕ ಭದ್ರತೆಯ ಹಕ್ಕು ಮುಂತಾದವು. ಮಹಿಳೆಯರ ಬದುಕನ್ನು ಎಲ್ಲ ಹಂತಗಳಲ್ಲಿಯೂ ಸಮಾಜದಲ್ಲಿ ಪುರುಷರು ನಿಯಂತ್ರಿಸುತ್ತಿರುತ್ತಾರೆ. ಆಕೆಗೆ ತನ್ನ ದೇಹದ ಮೇಲೆ ಅಧಿಕಾರವಿರುವುದಿಲ್ಲ. ಎಷ್ಟು ಮಕ್ಕಳನ್ನು ಪಡೆಯಬೇಕು ಮತ್ತು ಯಾವಾಗ ಪಡೆಯಬೇಕು ಎಂಬ ಸಂಗತಿಗಳು ಮಹಿಳೆಯರ ವೈಯುಕ್ತಿಕ ಹಕ್ಕಿನ ಸಂಗತಿಗಳು. ಆದರೆ ಅವುಗಳನ್ನು ಕುಟುಂಬ ನಿರ್ಧರಿಸುವ ಸ್ಥಿತಿ ನಮ್ಮಲ್ಲಿದೆ.

ಈ ಬಗೆಯ ಹಕ್ಕುಗಳಿಗೆ, ಸಮಾನತೆಗೆ, ಸ್ವಾ–ಯತ್ತತೆಗೆ ಸಾಮಾಜಿಕ ರಚನೆಯ ಬದಲಾವಣೆ ಅಗತ್ಯ. ಮದುವೆ, ಕುಟುಂಬ, ಗಂಡ–ಹೆಂಡತಿ ಸಂಬಂಧ, ಮಕ್ಕಳ ಜನನ ಮುಂತಾದ ಸಂಗತಿಗಳನ್ನು ನಮ್ಮ ಸಮಾಜವು 'ಖಾಸಗಿ' ಎಂದು ವರ್ಗೀಕರಿಸಿಕೊಂಡು ಬಂದಿದೆ. ಆದ್ದರಿಂದ ಇವುಗಳನ್ನೆಲ್ಲ ಶಾಸನದ ಚೌಕಟ್ಟಿಗೆ ತರುವುದು ವಿಹಿತವಲ್ಲ ಎಂದು ಭಾವಿಸಲಾಗಿದೆ. ಇವೆಲ್ಲ ಸಂಪ್ರದಾಯದ ಸಂಗತಿಗಳು. ಇವೆಲ್ಲ ನಮ್ಮ ಪರಂಪರೆಗೆ ಸಂಬಂಧಿಸಿದ ಸಂಗತಿಗಳು. ಸಾರ್ವಜನಿಕ ಸ್ಥಳಗಳಿಗೆ ಪ್ರವೇಶಿಸಲು ಭಾರತದ ಎಲ್ಲ ಪ್ರಜೆಗಳಿಗೂ ಸಂವಿಧಾನ ಹಕ್ಕನ್ನು ನೀಡಿದೆ. ಆದರೆ ಮಹಿಳೆಯರು ಅಶುದ್ಧರು, ಅವಳು ಸೂತಕ ಎಂಬ ಹೆಸರಿನಲ್ಲಿ ದೇವಾಲಯ ಪ್ರವೇಶವನ್ನು ಅವರಿಗೆ ನಿಷೇಧಿಸಲಾಗುತ್ತಿದೆ. ಇದನ್ನು ಸಮರ್ಥಿಸುವ ಬಹುಶ್ರುತರು ನಮ್ಮಲ್ಲಿದ್ದಾರೆ. ವೈವಾಹಿಕ ಅತ್ಯಾಚಾರವನ್ನು ಅಪರಾಧವೆಂದು ಶಾಸನದಲ್ಲಿ ಘೋಷಿಸಿದರೆ ನಮ್ಮ ಕುಟುಂಬ ವ್ಯವಸ್ಥೆಯು ನಾಶವಾಗುತ್ತದೆ ಎಂದು ಅದನ್ನು ಸಮರ್ಥಿಸಿಕೊಳ್ಳಲಾಗುತ್ತಿದೆ.

ಈ ಬಗೆಯ ಕಾರ್ಯಕ್ರಮಗಳು ಸಮಾಜದಲ್ಲಿ ಸಂಘರ್ಷವನ್ನು ಉಂಟು ಮಾಡುತ್ತವೆ. ಈ ಕಾರಣ–ಕ್ಕೆ ಸರ್ಕಾರಗಳು ಇಂತಹ ಕಾರ್ಯನೀತಿಗಳನ್ನು ಅನುಸರಿಸಲು ಸಿದ್ಧವಿರುವುದಿಲ್ಲ. ಮಹಿಳೆಯರ ದೈನಂದಿನ ಹಿತಾಸಕ್ತಿಗಳನ್ನು ಪೂರೈಸುವ ಕಾರ್ಯಕ್ರಮಗಳು ಮಹಿಳೆಯರ ಬದುಕನ್ನು ಸುಧಾರಿಸಬಹುದು. ಆದರೆ ಅಲ್ಲಿ ಲಿಂಗ ಸಮಾನತೆ, ವೈಯುಕ್ತಿಕ ಸ್ವಾಯತ್ತತೆ, ಸ್ವಾತಂತ್ರ್ಯ ಮಹಿಳೆಯರಿಗೆ ದೊರೆಯುವುದಿಲ್ಲ. ಅಮರ್ತ್ಯ ಸೇನ್ ತನ್ನ ಪ್ರಸಿದ್ಧ ಕೃತಿ 'ಡೆವಲಪ್‌ಮೆಂಟ್ ಆಸ್ ಫ್ರೀಡಮ್'ನಲ್ಲಿ ಸ್ವಾತಂತ್ರ್ಯವೇ ಅಭಿವೃದ್ಧಿ ಎಂದು ಅಭಿವೃದ್ಧಿಯನ್ನು ನಿರ್ವಚಿಸಿದ್ದಾನೆ. ಮಹಿಳೆಯರು ಸ್ವಾತಂತ್ರ್ಯ–ಕ್ಕೆ ಅರ್ಹರಲ್ಲ ಎಂಬ ನಮ್ಮ ಸಾಂಪ್ರದಾಯಿಕ ನಂಬಿಕೆಯನ್ನು ಇಂದೂ ಅನುಸರಿಸಿಕೊಂಡು ಬರುತ್ತಿದ್ದೇವೆ. ಈ ಕಾರಣಕ್ಕೆ ಮಹಿಳೆಯರು ಅನೇಕ

ಪುಟ 11 ಕ್ಕೆ



ಖೈರ್ಲಾಂಜಿಯ ಹತ್ತು ವರ್ಷಗಳ ನಂತರ

ಆ ಘೋರ ದೌರ್ಜನ್ಯ ಮುನ್ನೆಲೆಗೆ ತಂದಿದ್ದ ಎಲ್ಲಾ ವಿಷಯಗಳು ಇನ್ನಷ್ಟು ಭೀಕರತೆಯಿಂದ ಎದ್ದು ನಿಂತಿವೆ. ಸಮಾಜದ ಶ್ರೇಣೀಕೃತ ಸ್ವರೂಪವನ್ನು ಸಂರಕ್ಷಿಸಲು ಬದ್ಧವಾಗಿರುವ ವಿಶಾಲ ಪರಿವಾರದ ಭಾಗವಾಗಿರುವ ಒಂದು ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದಿದೆ. ಅದೀಗ ತನ್ನ ಅಜೆಂಡಾವನ್ನು ನಾಚಿಕೆಯಿಲ್ಲದೆ ಅನುಷ್ಠಾನಗೊಳಸುತ್ತಿದೆ. ಆದರೆ ದಲಿತರಲ್ಲಿ ಇದು ಅಪಾರ ಕ್ರೋಧ ಮತ್ತು ವಿರೋಧವನ್ನು ಹುಟ್ಟುಹಾಕುತ್ತಿದ್ದು, ಹೊಸ ವಿಧಗಳ ನಾಯಕರು ಮೂಡಿಬರುತ್ತಿದ್ದಾರೆ, ಅವರು ಹೊಸ ಬಗೆಯ ಬೇಡಿಕೆಗಳನ್ನು ಎತ್ತುತ್ತಿದ್ದಾರೆ ಮತ್ತು ಹೊಸ ರೀತಿಯ ಮೈತ್ರಿಗಳನ್ನು ಅರಸುತ್ತಿದ್ದಾರೆ.



ಸಮಾನತೆಯ ಹೋರಾಟಗಳಿಗೆ ಹೊಸ ಆವೇಗ



ಖೈರ್ಲಾಂಜಿ ದೌರ್ಜನ್ಯದ ಹತ್ತನೇ ವರ್ಷವು ಮತ್ತೆ ಖೈರ್ಲಾಂಜಿಗಳು ನಡೆಯದಂತೆ ಖಾತರಿಪಡಿಸುವ ಹೊಸ, ಐಕ್ಯ ಹೋರಾಟಗಳನ್ನು ಕಾಣಬೇಕಾಗಿದೆ.

ಪ್ರಕಾಶ ಕಾರಟ್

ಸೆಪ್ಟೆಂಬರ್ 29, 2016– ಖೈರ್ಲಾಂಜಿ ದೌರ್ಜನ್ಯದ ಹತ್ತನೇ ವರ್ಷಾಚರಣೆಯ ದಿನ. ಮಹಾರಾಷ್ಟ್ರದ ಭಂಡಾರಾ ಜಿಲ್ಲೆಯ ಖೇರ್ಲಾಂಜಿ ಎಂಬ ಪುಟ್ಟ ತಾಂಡಾದಲ್ಲಿ ಸುರೇಖಾ ಭೋತ್ಮಂಗೆ, ಆಕೆಯು ಮಗಳು ಪ್ರಿಯಾಂಕಾ ಮತ್ತು ಪುತ್ರರಾದ ಸುಧೀರ್ ಹಾಗೂ ಅಂಧನಾಗಿದ್ದ ರೋಷನ್ ಅವರನ್ನು ಆ ದಿನ ಬರ್ಬರವಾಗಿ ಹತ್ಯೆ ಮಾಡಿದ್ದು ದಲಿತರು ಎದುರಿಸುವ ದೌರ್ಜನ್ಯದ ಅನೇಕ ಹಳೆಯ ಮತ್ತು ಹೊಸ ಮುಖಗಳನ್ನು ಅನಾವರಣಗೊಳಿಸಿತ್ತು.

ಭೋತ್ಮಂಗೆ ಕುಟುಂಬ ಆ ತಾಂಡಾದಲ್ಲಿ ವಾಸಿಸಿದ್ದ ಕೇವಲ ಮೂರು ದಲಿತ ಕುಟುಂಬಗಳಲ್ಲಿ ಒಂದಾಗಿತ್ತು. ಅವರಿಗೆ ಐದು ಎಕರೆ ಜಮೀನಿತ್ತು. ಆದರೆ ಆ ಕುಟುಂಬದಿಂದ ಯಾವುದೇ ಲೆವಿ ಮತ್ತು ಭೂ ಕಂದಾಯ ಸಂಗ್ರಹಿಸಲು ಗ್ರಾಮ ಪಂಚಾಯತ್ ನಿರಾಕರಿಸಿತ್ತು. ಈ ಕುಟುಂಬಕ್ಕೆ ಜಮೀನಿನ ಮೇಲೆ ಇರುವ ಹಕ್ಕಿಗೆ ಸಾಕ್ಷಿಯಾಗುವ ಯಾವುದೇ ದಾಖಲೆ ಪತ್ರಗಳನ್ನು ನಿರಾಕರಿಸುವುದೇ ಅದರ ಉದ್ದೇಶವಾಗಿತ್ತು. ಒಂದು ಪಕ್ಕಾ ಮನೆಯನ್ನು ಕಟ್ಟಿಕೊಳ್ಳಲು ಕುಟುಂಬ ಮಾಡಿಕೊಂಡ ಮನವಿಯನ್ನು ಕೂಡ ಗ್ರಾಮ ಪಂಚಾಯತ್ ತಿರಸ್ಕರಿಸಿತು. ಆ ಜಮೀನನ್ನು ತನ್ನ ವಶಕ್ಕೆ ಪಡೆಯುವುದು ಪಂಚಾಯತ್ ಹವಣಿಕೆಯಾಗಿತ್ತು.

ಹತ್ಯಾಕಾಂಡದ ಹತ್ತು ವರ್ಷಗಳ ನಂತರವೂ ಸುರೇಖಾಳ ಪತಿ ಭಯ್ಯಾಜಿ ನ್ಯಾಯಕ್ಕಾಗಿ ಇನ್ನೂ ಹೋರಾಡುತ್ತಿದ್ದಾರೆ. ದೌರ್ಜನ್ಯಕ್ಕೆ ಹೊಣೆಗಾರರು ಎಂದು ಹೆಸರಿಸಲಾದ 54 ಜನರ ಪೈಕಿ ಅಂತಿಮವಾಗಿ ಎಂಟು ಜನರ ಮೇಲೆ ದೋಷಾರೋಪ ಪಟ್ಟಿ ಸಲ್ಲಿಸಲಾಯಿತು. ಅವರಲ್ಲಿ ಎಂಟು ಜನರಿಗೆ ಗಲ್ಲು ಶಿಕ್ಷೆ ಹಾಗೂ ಉಳಿದಿಬ್ಬರಿಗೆ ಜೀವಾವಧಿ ಶಿಕ್ಷೆ ವಿಧಿಸಿ ಫಾಸ್ಟ್ ಟ್ರಾಕ್ ವಿಚಾರಣಾ ಕೋರ್ಟ್ ತೀರ್ಪು ನೀಡಿತು. ಮರುವರ್ಷ ಮುಂಬಯಿ ಹೈಕೋರ್ಟ್‌ನ ನಾಗ್ಪುರ ಪೀಠವು ಆರು ಮಂದಿಯ ಗಲ್ಲು ಶಿಕ್ಷೆಯನ್ನು ಕಡಿತಗೊಳಿಸಿ ಅದನ್ನು ಜೀವಾವಧಿ ಶಿಕ್ಷೆಯಾಗಿ ಪರಿವರ್ತಿಸಿತು. ಅಂದರೆ ಎಲ್ಲಾ ಎಂಟು ಮಂದಿಗೆ ಜೀವಾವಧಿ ಶಿಕ್ಷೆಯಾಯಿತು. ಅದರ ವಿರುದ್ಧ ಅವರು ಸಲ್ಲಿಸಿರುವ ಮನವಿ ಈಗ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆಗೆ ಕಾಯುತ್ತಿದೆ.

ಆರೋಪಿಗಳಲ್ಲಿ ಯಾರೊಬ್ಬರ ವಿರುದ್ಧವೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಜನರ ಮೇಲಿನ ದೌರ್ಜನ್ಯ ತಡೆ ಕಾನೂನಿನ ಪ್ರಕಾರ ಆರೋಪಗಳನ್ನು ಹೊರಿಸಲಾಗಿಲ್ಲ ಅಥವಾ ಆ ಕಾನೂನಿನ ಪ್ರಕಾರ ಶಿಕ್ಷೆಯನ್ನೂ ನೀಡಲಾಗಿಲ್ಲ. ಅದರ ಪರಿಣಾಮವಾಗಿ, ಸುರೇಖಾ ಪತಿ ಭಯ್ಯಾಜಿಗೆ ಯಾವುದೇ ಪರಿಹಾರ ಸಿಗಲಿಲ್ಲ. ಅವರೀಗ ಭಂಡಾರಾ ಪಟ್ಟಣದಲ್ಲಿ ವಾಚ್‌ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರು ಹಳ್ಳಿಯಲ್ಲಿದ್ದ ತನ್ನ ಜಮೀನನ್ನು ದಲಿತೇತರಿಗೆ ಅತಿ ಕಡಿಮೆ ದರದಲ್ಲಿ ಗುತ್ತಿಗೆಗೆ (ಲೀಸ್) ನೀಡಬೇಕಾಗಿ ಬಂದಿದೆ. ಕೋರ್ಟ್‌ಗಳಿಗೆ ಹಾಜರಾಗಲು ಮಹಾರಾಷ್ಟ್ರ ಮತ್ತು ದೆಹಲಿಗೆ ಅಲೆದಾಟಕ್ಕಾಗಿ ಆಗುತ್ತಿರುವ ಖರ್ಚು ವೆಚ್ಚಗಳಿಂದಾಗಿ ಭಯ್ಯಾಜಿ ದರಿದ್ರ ಸ್ಥಿತಿಗೆ ತಲುಪಿ ಸುಸ್ತಾಗಿದ್ದಾರೆ.

ಖೈರ್ಲಾಂಜಿ ಹತ್ಯಾಕಾಂಡದ ಹತ್ತು ವರ್ಷಗಳ ನಂತರ, ಆ ಘೋರ ದೌರ್ಜನ್ಯ ಮುನ್ನೆಲೆಗೆ ತಂದಿದ್ದ ಎಲ್ಲಾ ವಿಷಯಗಳು ಇನ್ನಷ್ಟು ಭೀಕರತೆಯಿಂದ ನಮ್ಮ ಮುಂದೆ ಎದ್ದು ನಿಂತಿವೆ. ಯಾಕೆಂದರೆ ದಲಿತರ ಮೇಲೆ ಇನ್ನೂ ದೊಡ್ಡ ಪ್ರಮಾಣದ ದಬ್ಬಾಳಿಕೆಗಳು ಪದೇ ಪದೇ ನಡೆಯುತ್ತಿವೆ. ಬಿಜೆಪಿ ಕೇಂದ್ರದಲ್ಲಿ ಮತ್ತು ಅನೇಕ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಿದೆಯೆಂದರೆ, ವರ್ಣಾಶ್ರಮ ಧರ್ಮವನ್ನು ಎತ್ತಿ ಹಿಡಿಯಲು ಹಾಗೂ ಬಲಪಡಿಸಲು ಬದ್ಧವಾಗಿರುವ ಮತ್ತು ಹಿಂದೂ ಸಮಾಜದ ಶ್ರೇಣೀಕೃತ ಸ್ವರೂಪವನ್ನು ಸಂರಕ್ಷಿಸಲು ಬದ್ಧವಾಗಿರುವ ವಿಶಾಲ ಪರಿವಾರದ ಭಾಗವಾಗಿರುವ ಒಂದು ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದಿದೆ ಎಂದೇ ಅರ್ಥ. ಅದೀಗ ಜಾತಿ ಮತ್ತು ವರ್ಗ ಶೋಷಣೆಯನ್ನು ಹೆಚ್ಚಿಸುತ್ತಿದೆ ಹಾಗೂ ಬಲಪಡಿಸುವ ಅಜೆಂಡಾವನ್ನು ನಾಚಿಕೆಯಿಲ್ಲದೆ ಅನುಷ್ಠಾನಗೊಳಿಸುತ್ತಿದೆ.

ಆದರೆ ದಲಿತರಲ್ಲಿ ಇದು ಅಪಾರ ಕ್ರೋಧ ಮತ್ತು ವಿರೋಧವನ್ನು ಹುಟ್ಟುಹಾಕುತ್ತಿದ್ದು, ಹೊಸ ವಿಧಗಳ ನಾಯಕರು ಮೂಡಿಬರುತ್ತಿದ್ದಾರೆ, ಅವರು ಹೊಸ ಬಗೆಯ ಬೇಡಿಕೆಗಳನ್ನು ಎತ್ತುತ್ತಿದ್ದಾರೆ ಮತ್ತು ಹೊಸ ರೀತಿಯ ಮೈತ್ರಿಗಳನ್ನು ಅರಸುತ್ತಿದ್ದಾರೆ.

2016ರ ಜನವರಿಯಲ್ಲಿ ಹೈದರಾಬಾದ್ ವಿಶ್ವವಿದ್ಯಾನಿಲಯದ ಪಿಎಚ್‌ಡಿ ವಿದ್ಯಾರ್ಥಿ ರೋಹಿತ್ ವೇಮುಲ ಅವರ ದುರಂತ ಆತ್ಮಹತ್ಯೆಯನ್ನು ಕೇಂದ್ರದ ಕನಿಷ್ಠ ಇಬ್ಬರು ಸಚಿವರು ಶಾಮೀಲಾಗಿರುವ. ಒಂದು 'ಸಾಂಸ್ಥಿಕ ಕೊಲೆ' ಎಂದು ಸರಿಯಾಗಿಯೇ ವರ್ಣಿಸಲಾಗುತ್ತಿದೆ ಹಾಗೂ ಕಾಣಲಾಗುತ್ತಿದೆ. ರೋಹಿತ್ ಸಾವು, ಶಿಕ್ಷಣದ ಮೂಲಭೂತ ಹಕ್ಕನ್ನು ಮತ್ತು ದಲಿತ ಸಮುದಾಯಕ್ಕೆ ಒಂದು ಗೌರವಯುತ ಹಾಗೂ ಸಮಾನತೆಯ ಬದುಕನ್ನು ಮೋದಿ ಸರಕಾರ ಉದ್ದೇಶಪೂರ್ವಕವಾಗಿ ನಿರಾಕರಿಸಿದ ಪರಿಣಾಮ ಎಂದು ಕಾಣಲಾಗುತ್ತಿದೆ. ಅವರ ಸಾವು ದಲಿತರು, ವಿದ್ಯಾರ್ಥಿಗಳು, ಪ್ರಗತಿಪರ ಮತ್ತು ಎಡಶಕ್ತಿಗಳ ನಡುವೆ ಸೃಷ್ಟಿಸಿದ ಅಪಾರ ಪ್ರತಿಕ್ರಿಯೆ ಅಭೂತಪೂರ್ವವಾಗಿತ್ತು.

ದೇಶಾದ್ಯಂತ ಆಗ ಹೊತ್ತಿದ ಪ್ರತಿಭಟನೆಯ ಜ್ವಾಲೆ ಇನ್ನೂ ಉರಿಯುತ್ತಿದೆ. ಗುಜರಾತ್‌ನ ಉನಾದಲ್ಲಿ ಸತ್ತ ದನದ ಚರ್ಮವನ್ನು ಸುಲಿಯುತ್ತಿದ್ದ ನಾಲ್ವರು ದಲಿತ ಯುವಕರ ಕೈಕಾಲುಗಳನ್ನು ಕಟ್ಟಿಹಾಕಿ, ಜೀಪಿಗೆ ಕಟ್ಟಿ ಎಳೆದಾಡಿ ಅಮಾನುಷವಾಗಿ ಥಳಿಸಿದ ಸ್ವಯಂಘೋಷಿತ ಗೋರಕ್ಷಕರ ಕೃತ್ಯ ಈ ಜ್ವಾಲೆಯ ಉರಿಯನ್ನು ಇನ್ನಷ್ಟು ಹೆಚ್ಚಿಸಿದೆ ಎಂದೇ ಹೇಳಬೇಕು. ಈ ಸ್ವಘೋಷಿತ ಗೋರಕ್ಷಕರ ದರ್ಪದ ಅಮಲು ಎಷ್ಟರ ಮಟ್ಟಿಗಿತ್ತೆಂದರೆ ತಮ್ಮ ಹೀನ ಕೃತ್ಯವನ್ನು ಚಿತ್ರೀಕರಿಸಿ ಇಲೆಕ್ಟ್ರಾನಿಕ್ ಮಾಧ್ಯಮದವರಿಗೆ ನೀಡಿದ್ದರು.

ಉನಾ ದೌರ್ಜನ್ಯವನ್ನು ವಿರೋಧಿಸಲು ಜುಲೈ 31ರಂದು ಅಹಮದಾಬಾದ್‌ನಲ್ಲಿ ದಲಿತ ಜನಸಮೂಹದ ಸಾಗರವೇ ನೆರೆದಿತ್ತು. ಅವರು ಅಲ್ಲಿಂದ 400 ಕಿ.ಮೀ. ದೂರದಲ್ಲಿರುವ ಉನಾಕ್ಕೆ ಜಾಥಾ ನಡೆಸಿದಾಗ ಎತ್ತಿದ ಎರಡು ಘೋಷಣೆಗಳು ದೂರಗಾಮಿ ಪರಿಣಾಮ ಹೊಂದಿರುವಂಥದ್ದಾಗಿವೆ. ಮೊದಲನೆಯದು, 'ದನದ ಬಾಲವನ್ನು ನೀವೇ ಹಿಡಿದುಕೊಳ್ಳಿ' ಮತ್ತು ಎರಡನೆಯದು, 'ನಮಗೆ ಐದು ಎಕರೆ ಜಮೀನು ಕೊಡಿ'.

ಸತ್ತ ದನಗಳ ಚರ್ಮವನ್ನು ಸುಲಿಯಲು ಸಾವಿರಾರು ದಲಿತರು ನಿರಾಕರಿಸಿರುವುದು ಅಸ್ಪೃಶ್ಯತೆ ಮತ್ತು ಜಾತಿ–ಶುದ್ಧತೆಯ ಮೂಲ ನೆಲೆಗಟ್ಟಿಗೇ ಹಾಕಿರುವ ಸವಾಲು ಆಗಿದೆ. ಮೊದಲನೇ ಘೋಷಣೆ ಇದನ್ನು ಧ್ವನಿಸುತ್ತದೆ. ಎರಡನೇ ಘೋಷಣೆ ದೇಶದಾದ್ಯಂತ ಭೂರಹಿತರ ನಡುವೆ ಅನುರಣನಗೊಳ್ಳಲಿದೆ ಹಾಗೂ ಅದು ಭೂಮಿ ಮತ್ತು ಸಂಪತ್ತಿನ ಪ್ರಜಾಸತ್ತಾತ್ಮಕ ಹಾಗೂ ನ್ಯಾಯಸಮ್ಮತ ವಿತರಣೆಯ ಬೇಡಿಕೆ ಮೇಲೆ ಐಕ್ಯ ಹೋರಾಟಗಳನ್ನು ಕಟ್ಟುವ ಸಾಧ್ಯತೆಯನ್ನು ಹೊಂದಿದೆ.

ಈ ದಾಳಿಗಳು, ಅದಕ್ಕೆ ಪ್ರತಿರೋಧಗಳು ಮತ್ತು ಪ್ರತಿಭಟನೆಕಾರರು ಎತ್ತಿರುವ ಬೇಡಿಕೆಗಳನ್ನು ಪಕ್ಷ ಮತ್ತು ಇತರ ಎಡ ಶಕ್ತಿಗಳು ಗಂಭೀರವಾಗಿ ಪರಿಗಣಿಸಬೇಕು. ಎಲ್ಲರೂ ಸೇರಿಹೋರಾಟ ನಡೆಸಲು ಒಂದು ಹೊಸ ಅವಕಾಶ ತೆರೆದುಕೊಳ್ಳುತ್ತಿದೆ, ಅದಕ್ಕೆ ಈಗ ಬೇಕಾಗಿರುವುದು ದೃಢತೆ, ತ್ಯಾಗ ಮತ್ತು ಸಂವೇದನಾಶೀಲತೆ.

ಸೆಪ್ಟೆಂಬರ್ 16ರಂದು ನಡೆದ ಎಡ ಮತ್ತು ದಲಿತ ಸಂಘಟನೆಗಳ ಜಂಟಿ ರ್‍ಯಾಲಿ ಒಂದು ಹೊಸ ದಿಕ್ಕನ್ನು ತೋರಿಸಿದೆ. ಆದರೆ ಮಾಡಬೇಕಾದುದು ಇನ್ನೂ ತುಂಬಾ ಇದೆ. ದಲಿತರ ಹಕ್ಕುಗಳು ಮತ್ತು ಬೇಡಿಕೆಗಳಿಗಾಗಿ, ದೌರ್ಜನ್ಯಗಳು ಮತ್ತು ಜಾತೀಯ ದಬ್ಬಾಳಿಕೆಗಳ ವಿರುದ್ಧ ಮತ್ತು ಭೂರಹಿತರಿಗೆ ಭೂಮಿಗಾಗಿ ಸರ್ವಸಾಮಾನ್ಯ ಹೋರಾಟಗಳನ್ನು ನಡೆಸಬೇಕಾಗಿದೆ.

ಖೈರ್ಲಾಂಜಿ ದೌರ್ಜನ್ಯದ ಹತ್ತನೇ ವರ್ಷವು ಮತ್ತೆ ಖೈರ್ಲಾಂಜಿಗಳು ನಡೆಯದಂತೆ ಖಾತರಿಪಡಿಸುವ ಹೊಸ, ಐಕ್ಯ ಹೋರಾಟಗಳನ್ನು ಕಾಣಬೇಕಾಗಿದೆ.

ಅನುವಾದ–ವಿಶ್ವ

ಹವಾಮಾನ ಬದಲಾವಣೆಯ ಪ್ರಶ್ನೆ–ಅಮೆರಿಕಾದ ಒತ್ತಡದಿಂದ ತಿಪ್ಪರಲಾಗ

ಪುಟ 2 ರಿಂದ

ಹೊಣೆಗಾರಿಕೆ' ಎಂಬ ಪರಿಕಲ್ಪನೆಯನ್ನು 'ವಿಶ್ವಸಂಸ್ಥೆ ಹವಾಮಾನ ಬದಲಾವಣೆ ಚೌಕಟ್ಟು ಸಮಾವೇಶ' ರೂಪಿಸಿದೆ. ಪ್ಯಾರಿಸ್ ಒಪ್ಪಂದ ಅಮೆರಿಕಾದ ತಂತ್ರದಿಂದಾಗಿ ಈ ಪರಿಕಲ್ಪನೆಗೆ ತಿಲಾಂಜಲಿ ನೀಡಿದೆ ಎಂಬುದೇ ಸಿಪಿಐ(ಎಂ) ಮತ್ತು ಇತರ ಪ್ರಗತಿಪರ ಸಂಘಟನೆಗಳ ಮತ್ತು ವ್ಯಕ್ತಿಗಳ ಆಕ್ಷೇಪ. ಅಲ್ಲದೆ ಪರಿಸರ ಮಾಲಿನ್ಯವನ್ನು ಕಡಿಮೆ ಮಾಡುವ ತಂತ್ರಜ್ಞಾನವನ್ನು, ಅದಕ್ಕೆ ಬೇಕಾದ ಹಣಸಹಾಯವನ್ನು ಅಭಿವೃದ್ಧಿ ಹೊಂದಿರುವ ದೇಶಗಳು ಒದಗಿಸಬೇಕು ಎಂಬ ಸದಾಶಯದ ಹೇಳಿಕೆ ಇದ್ದರೂ, ಈ ಆಶಯವನ್ನು ಜಾರಿಗೆ ತರುವಂತೆ ಮಾಡುವ ಅಂಶ ಈ ಒಪ್ಪಂದದಲ್ಲಿ ಇಲ್ಲ. ಆದ್ದರಿಂದ ಅದು ಜಾರಿಗೆ ಸಂಭವವೂ ಬಹಳ ಕಡಿಮೆ.

ಇದರಿಂದಾಗಿಯೇ, ಈ ಒಪ್ಪಂದ ಒಂದು ಸಾಧನೆ ಎಂದು ಮೊದಲಿಗೆ ಪ್ರಧಾನಿಗಳೂ ಸೇರಿದಂತೆ ಬಿಜೆಪಿ ಸರಕಾರದ ಮುಖಂಡರು ಹೇಳಿದರೂ, ಆನಂತರ ಭಾರತದ ಪರಿಸರ, ಅರಣ್ಯ ಮತ್ತು ಇಂಧನ ಕುರಿತ ನಿಯಮಗಳನ್ನು ಪರೀಕ್ಷಿಸಿದ ನಂತರವೇ ಇದನ್ನು ಅಧಿಕೃತವಾಗಿ ಅನುಮೋದಿಸಲಾಗುವುದು ಎಂದು ಸರಕಾರ ಹೇಳಲಾರಂಭಿಸಿದ್ದು. ಪರಿಸರ ಮಂತ್ರಾಲಯ ಅನುಮೋದನೆಯ ಬಗ್ಗೆ ಏನು ಹೇಳಲೂ ಸಿದ್ಧವಾಗಿಲ್ಲ, ಏಕೆಂದರೆ ಈ ಒಪ್ಪಂದವನ್ನು ಅನುಮೋದಿಸಿದರೆ ನಮ್ಮ ಹಲವು ನಿಯಮಗಳನ್ನು ಬದಲಿಸಬೇಕಾಗುತ್ತದೆ. ಬೇರೆ ಮಂತ್ರಾಯಗಳದ್ದೂ ಅದೇ ನಿಲುವಾಗಿತ್ತು. ಪ್ರಧಾನ ಮಂತ್ರಿಗಳ ಕಚೇರಿ ಕೂಡ ಎಲ್ಲ ಇಲಾಖೆಗಳು/ಮಂತ್ರಾಲಯಗಳು ನಡೆಸುತ್ತಿರುವ ನಿಯಮಗಳ ಪರೀಕ್ಷೆಗಳು ಮುಗಿಯಲಿ ಎಂಬ ನಿಲುವು ತಳೆದಿತ್ತು. ತೀರಾ ಇತ್ತೀಚಿನ ವರೆಗೂ ಅಂದರೆ ಸಪ್ಟಂಬರ್ 21ರ ವರೆಗೂ ಅದೇ ನಿಲುವನ್ನು ತಳೆದಿತ್ತು ಎಂದು ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ.

ಆದರೆ ನಾಲ್ಕು ದಿನಗಳೊಳಗೇ ಈ ತಿಪ್ಪರಲಾಗ ಏಕೆ?

ಇದಕ್ಕೆ ಕಾರಣ ವಿದೇಶ ಮಂತ್ರಾಲಯದಿಂದ ಬಂದ 'ಎಚ್ಚರಿಕೆ' ಎನ್ನಲಾಗಿದೆ. ಇದುವರೆಗೆ ಸಹಿ ಹಾಕದೇ ಇರುವ ಯುರೋಪಿಯನ್ ಒಕ್ಕೂಟ, ರಶ್ಯ ಅಥವ ಜಪಾನ್ ಸಹಿ ಹಾಕಿದರೆ ಭಾರತ ಹಿಂದೆ ಬಿದ್ದಂತೆ ಆಗುತ್ತದೆ ಎಂಬುದು ಈ 'ಎಚ್ಚರಿಕೆ'ಗೆ ಕೊಟ್ಟ ಒಂದು ಕಾರಣವಾದರೆ, ಇನ್ನೊಂದು, ಬಹುಶಃ ಬಹಳ ಮುಖ್ಯವಾದದ್ದು "ಭಾರತ ಮತ್ತು ಅಮೆರಿಕಾದ ನಡುವೆ ಇರುವ ವಿಶೇಷ ಏಕಪಕ್ಷೀಯ ಸಂಬಂಧ. ಈ ಒಪ್ಪಂದವನ್ನು ಮಾಡಿಸಿದ್ದು ಅಮೆರಿಕಾವಾದ್ದರಿಂದ ಅದನ್ನು ಅನುಮೋದಿಸದಿರುವುದು ಒಂದು ತಪ್ಪು ಸಂಕೇತ ನೀಡುತ್ತದೆ, ವಿಶೇಷವಾಗಿ ಬರಾಕ್ ಒಬಾಮ ಇನ್ನು ಎರಡು ತಿಂಗಳೊಳಗೆ ಅಮೆರಿಕ ಅಧ್ಯಕ್ಷರ ಹುದ್ದೆ ಬಿಡುವುದರಿಂದಾಗಿ" ಎಂದು ವಿದೇಶಾಂಗ ಕಾರ್ಯದರ್ಶಿ ಹೇಳಿರುವುದಾಗಿ ವರದಿಯಾಗಿದೆ (ಇಂಡಿಯನ್ ಎಕ್ಸ್‌ಪ್ರೆಸ್, ಸಪ್ಟಂಬರ್28).

ಈ ರೀತಿ ಅಮೆರಿಕಾದ ಹಿತಾಸಕ್ತಿಗಳ ಎದುರು ತಲೆಬಾಗಿ ಪ್ಯಾರಿಸ್ ಒಪ್ಪಂದಕ್ಕೆ ಅನುಮೋದನೆ ಕೊಡಲು ನಿರ್ಧರಿಸಿರುವುದು ಭಾರತದ ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಯ ಮೇಲೆ ದುಷ್ಪರಿಣಾಮ ಬೀರಲಿದೆ, ಈ ವಾಯುದೂಷಣೆ ಇಳಿಸುವ ಕ್ರಮಗಳನ್ನು ಈಗಾಗಲೇ ಇಂಧನ ಲಭ್ಯತೆ ಬಹಳ ಕಡಿಮೆ ಇರುವ ಜನಸಾಮಾನ್ಯರನ್ನೇ ತಟ್ಟುವ ಕಾರ್ಪೊರೇಟ್–ಪರ ದಾರಿಯಲ್ಲೇ ಸಾಗುವ ಭೀತಿ ಹೆಚ್ಚಾಗಿದೆ. ●

ಫ್ಯಾಸಿಸ್ಟ್ ಆಳ್ವಿಕೆಯೋ ಅಥವಾ ಸರ್ವಾಧಿಕಾರಶಾಹಿಯೋ?





ಜಗತ್ತಿನಲ್ಲಿ ಇಂದು, ಸಾಮ್ರಾಜ್ಯಶಾಹಿ ಮತ್ತು ವಿಭಿನ್ನ ದೇಶಗಳ ಆಳುವ ವರ್ಗಗಳು ತಮ್ಮ ವರ್ಗಆಳ್ವಿಕೆಯನ್ನು ಶಾಶ್ವತಗೊಳಿಸಲು ಮತ್ತು ನವ-ಉದಾರವಾಧಿ ಧೋರಣೆಗಳನ್ನು ಅನುಸರಿಸಲು ಬಹಿರಂಗ ಫ್ಯಾಸಿಸ್ಟ್ ಆಳ್ವಿಕೆಯ ಬದಲು ವಿಭಿನ್ನ ಸ್ವರೂಪಗಳ ಸರ್ವಾಧಿಕಾರಶಾಹಿಯನ್ನು ಬಳಸುತ್ತಿವೆ. ಕೆಲವೆಡೆಗಳಲ್ಲಿ ಧಾರ್ಮಿಕ-ಜನಾಂಗೀಯ ಆಧಾರದಲ್ಲಿ ಜನಗಳನ್ನು ರಾಜಕೀಯವಾಗಿ ಅಣಿನೆರೆಸಿ ಸರ್ವಾಧಿಕಾರಶಾಹಿಯನ್ನು ಹೇರಲಾಗುತ್ತಿದೆ. ಧರ್ಮ ಆಧಾರಿತ ಕೋಮುವಾದ ಅಥವ ರಾಜಕೀಯ ಅಣಿನೆರಿಕೆಯೊಂದಿಗೆ ಅತ್ಯಂತ ಬಲಪಂಥೀಯ ಆರ್ಥಿಕ ಧೋರಣೆಗಳ ಹೇರಿಕೆಯೂ ನಡೆಯುತ್ತದೆ. ಭಾರತ ಇಂತಹ ಒಂದು ದೇಶ. **–ಪ್ರಕಾಶ ಕಾರಟ್**

ಕೇಂದ್ರದಲ್ಲಿ ಬಿಜೆಪಿ ಸರಕಾರ, ಲೋಕಸಭೆಯಲ್ಲಿ ಒಂದು ಸ್ಥಿರ ಬಹುಮತದೊಂದಿಗೆ ಅಸ್ತಿತ್ವದಲ್ಲಿ ಇರುವುದರಿಂದ ಎಡಪಂಥಿಯ ವಲಯಗಳಲ್ಲಿ ಮತ್ತು ಕೆಲವು ಉದಾರವಾದಿ ಬುದ್ಧಿಜೀವಿಗಳ ನಡುವೆಯೂ ಈಗ ಅಧಿಕಾರದಲ್ಲಿ ಇರುವ ಸರಕಾರದ ಸ್ವರೂಪವೇನು ಎಂಬುದರ ಬಗ್ಗೆ ಒಂದು ಚರ್ಚೆ ನಡೆಯುತ್ತಿದೆ. ಮೋದಿ ಸರಕಾರ ಬರುವುದರೊಂದಿಗೆ ದೇಶದಲ್ಲಿ ಒಂದು ಬಲಪಂಥೀಯ ದಾಳಿ ಅನಾವರಣಗೊಳ್ಳುತ್ತಿದೆ. ಬಲಪಂಥೀಯ ನವ-ಉದಾರವಾದಿ ಆರ್ಥಿಕ ಧೋರಣೆಗಳು ಮತ್ತು ಆಕ್ರಮಣಕಾರೀ ಹಿಂದುತ್ವ ಅಜೆಂಡಾದ ಒಂದು ಜೋಡಿ ಈ ದಾಳಿಯ ಮುಖ್ಯ ಲಕ್ಷಣವಾಗಿದೆ. ಇಂದು ಈ ದಾಳಿಯನ್ನು ಎದುರಿಸುವುದು ಹೇಗೆ ಎಂಬುದು ಎಡ, ಪ್ರಜಾಪ್ರಭುತ್ವವಾದಿ, ಮತ್ತು ಜಾತ್ಯತೀತ ಶಕ್ತಿಗಳ ಪ್ರಾಥಮಿಕ ಕಾಳಜಿ.

ಎಡ ಮತ್ತು ಉದಾರವಾದಿ ಅಭಿಪ್ರಾಯ ಹೊಂದಿರುವವರಲ್ಲಿ ಒಂದು ಗಮನಾರ್ಹ ವಿಭಾಗ ದೇಶದಲ್ಲಿ ಈಗಿರುವುದು ಫ್ಯಾಸಿಸಂ ಆಗಮಿಸಿರುವ ಸನ್ನಿವೇಶ ಎಂದು ವಿವರಿಸುತ್ತಾರೆ. ಇವರಲ್ಲಿ ಒಂದು ಪ್ರಭಾವೀ ಧಾರೆಯವರು ಈಗಿನ ವ್ಯವಸ್ಥೆ 'ಕೋಮುವಾದಿ ಫ್ಯಾಸಿಸಂ' ಎಂದು ನಿರೂಪಿಸುತ್ತಾರೆ ಮತ್ತು ಇದು ಫ್ಯಾಸಿಸಂನ ಭಾರತೀಯ ಅವತಾರ ಎಂದು ತರ್ಕಿಸುತ್ತಾರೆ.

ಭಾರತ ಎದುರಿಸುತ್ತಿರುವ ಬಲಪಂಥೀಯ ಬೆದರಿಕೆ ಯಾವ ತೆರನದ್ದು? ಆಳುತ್ತಿರುವವರ ಮತ್ತು ಅವರು ಪ್ರತಿನಿಧಿಸುತ್ತಿರುವ ರಾಜಕೀಯ ಆಂದೋಲನದ ಬಗ್ಗೆ ಒಂದು ಸರಿಯಾದ ತಿಳುವಳಿಕೆ ಅಗತ್ಯ. ಏಕೆಂದರೆ, ಅದು ಬಿಜೆಪಿ ಮತ್ತು ಮೋದಿ ಸರಕಾರಕ್ಕೆ ಎದುರಾಗಿ ಹೋರಾಡುವಲ್ಲಿ ಅನುಸರಿಸಬೇಕಾದ ರಾಜಕೀಯ ವ್ಯೂಹ ಮತ್ತು ಚುನಾವಣಾ ಕಾರ್ಯತಂತ್ರದ ಮೇಲೆ ನೇರ ಪರಿಣಾಮ ಬೀರುವಂತದ್ದು. ಬಿಜೆಪಿಯ ಚಾರಿತ್ರ್ಯವನ್ನು ನಿರೂಪಿಸುವಲ್ಲಿ ಒಂದು ಸ್ಪಷ್ಟತೆ ಇರಬೇಕು. ಅದು ಒಂದು ಸಾಮಾನ್ಯ ಬೂರ್ಜ್ವಾ ಪಕ್ಷ ಅಲ್ಲ. ಅದರ ವೈಶಿಷ್ಟ್ಯತೆ ಇರುವುದು ರಾಷ್ಟ್ರೀಯ ಸ್ವಯಂಸೇವಕ ಸಂಘದೊಂದಿಗೆ ಅದರ ಅಂಗಾಂಗ ಸಂಬಂಧದಲ್ಲೇ. ಬಿಜೆಪಿ ಆರ್ಥಿಕ ಮತ್ತು ಸಾಮಾಜಿಕ ಅಜೆಂಡಾದ ದೃಷ್ಟಿಯಿಂದ ಒಂದು ಬಲಪಂಥೀಯ ಪಕ್ಷ, ಅದನ್ನು ಒಂದು ಬಹುಸಂಖ್ಯಾತ ಕೋಮುವಾದದ ಬಲಪಂಥೀಯ ಪಕ್ಷ ಎಂದು ನಿರೂಪಿಸಬಹುದು. ಅಲ್ಲದೆ, ಒಂದು ಅರೆ-ಫ್ಯಾಸಿಸ್ಟ್ ಸಿದ್ಧಾಂತ ಹೊಂದಿರುವ ಆರೆಸ್ಸೆಸ್‌ನೊಂದಿಗೆ ಅದರ ಸಂಪರ್ಕದಿಂದಾಗಿ ಅದು ಒಂದು ಸರ್ವಾಧಿಕಾರಶಾಹಿ ಪ್ರಭುತ್ವ ಸನ್ನಿವೇಶಕ್ಕೆ ಅಗತ್ಯ ಎಂದು ನಂಬಿದರೆ ಅದನ್ನು ಹೇರುವ ಸಾಮರ್ಥ್ಯ ಇರುವ ಪಕ್ಷ.

ಫ್ಯಾಸಿಸ್ಟ್ ಅಲ್ಲ, ಸರ್ವಾಧಿಕಾರಶಾಹಿ

ಫ್ಯಾಸಿಸಂ ಒಂದು ಸಿದ್ಧಾಂತವಾಗಿ ಮತ್ತು ಒಂದು ರಾಜಕೀಯ ಆಳ್ವಿಕೆಯ ಸ್ವರೂಪವಾಗಿ ಮೂಡಿಬಂದದ್ದು 20ನೇ ಶತಮಾನದಲ್ಲಿ ಎರಡು ವಿಶ್ವಯುದ್ಧಗಳ ನಡುವಿನ ಅವಧಿಯಲ್ಲಿ. ಬಂಡವಾಳಶಾಹಿ ವ್ಯವಸ್ಥೆಯನ್ನು ಆಳವಾದ ಬಿಕ್ಕಟ್ಟು ಆವರಿಸಿದ್ದಾಗ ಮತ್ತು ಅದು ಕಾರ್ಮಿಕ ವರ್ಗದ ಕ್ರಾಂತಿಕಾರಿ ಆಂದೋಲನದ ಬೆದರಿಕೆಯನ್ನು ಎದುರಿಸುತ್ತಿದ್ದಾಗ, ಜರ್ಮನಿಯ ಆಳುವ ವರ್ಗಗಳು ಬೂರ್ಜ್ವಾ ಪ್ರಜಾಪ್ರಭುತ್ವವನ್ನು ನಿರ್ಮೂಲ ಮಾಡುವ ಒಂದು ಆಳ್ವಿಕೆಯ ಸ್ವರೂಪವನ್ನು ಆಯ್ದುಕೊಂಡವು. ಮುಸೊಲಿನಿಯ ಇಟೆಲಿ ಮತ್ತು ಜಪಾನಿನದ್ದು ಕೂಡ ಫ್ಯಾಸಿಸ್ಟ್ ಆಳ್ವಿಕೆಗಳಾಗಿದ್ದವು.

ಫ್ಯಾಸಿಸಂ ಎಂದರೇನು ಎಂಬ ಬಗ್ಗೆ ಒಂದು ಶಾಸ್ತ್ರೀಯ ನಿರೂಪಣೆಯಲ್ಲಿ ಯಾವ ಸಂದಿಗ್ಧತೆಗೂ ಅವಕಾಶವಿಲ್ಲ. ಅಧಿಕಾರದಲ್ಲಿರುವ ಫ್ಯಾಸಿಸಂ "ಹಣಕಾಸು ಬಂಡವಾಳದ ಅತ್ಯಂತ ಪ್ರತಿಕ್ರಿಯಾವಾದಿ, ಅತ್ಯಂತ ಸಂಕುಚಿತವಾದಿ ಮತ್ತು ಅತ್ಯಂತ ಸಾಮ್ರಾಜ್ಯಶಾಹೀ ಮಂದಿಯ ಬಹಿರಂಗ ಭಯೋತ್ಪಾದಕ ಸರ್ವಾಧಿಕಾರ". ಭಾರತದಲ್ಲಿ ಇಂದು ಫ್ಯಾಸಿಸಂ ಸ್ಥಾಪನೆಗೊಂಡಿಲ್ಲ, ಅದರ ಸ್ಥಾಪನೆಯ ಪರಿಸ್ಥಿತಿಗಳು–ರಾಜಕೀಯ, ಆರ್ಥಿಕ ಮತ್ತು ವರ್ಗದೃಷ್ಟಿಯಿಂದ–ಕೂಡ ಇಲ್ಲ. ಬಂಡವಾಳಶಾಹಿ ವ್ಯವಸ್ಥೆ ಕುಸಿದು ಬೀಳುವ ಬೆದರಿಕೆಯೊಡ್ಡಿರುವ ಬಿಕ್ಕಟ್ಟು ಇಲ್ಲ; ಭಾರತದ ಆಳುವ ವರ್ಗಗಳು ತಮ್ಮ ವರ್ಗ ಆಳ್ವಿಕೆಗೆ ಬೆದರಿಕೆಯನ್ನೇನೂ ಎದುರಿಸುತ್ತಿಲ್ಲ. ಆಳುವ ವರ್ಗದ ಯಾವುದೇ ವಿಭಾಗ ಕೂಡ ಇಂದು ಬೂರ್ಜ್ವಾ ಸಂಸದೀಯ ವ್ಯವಸ್ಥೆಯನ್ನು ಕಿತ್ತೆಸೆಯುವ ಕೆಲಸದಲ್ಲಿ ತೊಡಗಿಲ್ಲ. ಆಳುವ ವರ್ಗಗಳು ತಮ್ಮ ವರ್ಗ ಹಿತಾಸಕ್ತಿಗಳ ಈಡೇರಿಕೆಗಾಗಿ ಸರ್ವಾಧಿಕಾರಶಾಹಿಯ ಸ್ವರೂಪಗಳನ್ನು ಬಳಸಿಕೊಳ್ಳುವ ಪ್ರಯತ್ನ ನಡೆಸುತ್ತಿವೆ.

ಭಾರತದಲ್ಲಿ ಇಂದು ಹಿಂದುತ್ವ ಸಿದ್ಧಾಂತ ಮತ್ತು ಸಂಕುಚಿತ ರಾಷ್ಟ್ರವಾದವನ್ನು ಜನಗಳನ್ನು ಕೋಮುವಾದೀ ಆಧರದಲ್ಲಿ ಧ್ರುವೀಕರಿಸಲು ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸಲು ಬಳಸಲಾಗುತ್ತಿದೆ. ಅಲ್ಪಸಂಖ್ಯಾತರನ್ನು ಸದೆ ಬಡಿಯಲು ಅಮಾನುಷ ವಿಧಾನಗಳನ್ನು ಬಳಸಲಾಗುತ್ತಿದೆ; ಭಿನ್ನಾಭಿಪ್ರಾಯವನ್ನು ಮತ್ತು ಜಾತ್ಯತೀತ ಬುದ್ಧಿಜೀವಿಗಳನ್ನು 'ರಾಷ್ಟ್ರ-ವಿರೋಧಿಗಳು' ಎಂದು ಹಣೆ ಪಟ್ಟಿಹಚ್ಚಿ ಬಾಯಿ ಮುಚ್ಚಿಸಲು ಪ್ರಯತ್ನಿಸಲಾಗುತ್ತಿದೆ. ಮೇಲಿನಿಂದ, ಪ್ರಭುತ್ವದ ಸಂಸ್ಥೆಗಳ ಮಟ್ಟದಲ್ಲಿ, ಮತ್ತು ಕೆಳಗಿನಿಂದ ಹಿಂದುತ್ವ ಪಡೆಗಳ ಮೂಲಕ, ಸಮಾಜವನ್ನು ಮತ್ತು ರಾಜಕೀಯ ವ್ಯವಸ್ಥೆಯನ್ನು ಹಿಂದುತ್ವದ ನೆರಳಲ್ಲಿ ಮರುವ್ಯವಸ್ಥೆಗೊಳಿಸುವ ಒಂದು ದೃಢ ಪ್ರಯತ್ನವನ್ನು ಮಾಡಲಾಗುತ್ತಿದೆ. ಈ ಚಟುವಟಿಕೆಗಳು ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಗೆ ಒಂದು ಗಂಭೀರ ಮತ್ತು ಪ್ರಸಕ್ತ ಅಪಾಯವನ್ನು ಒಡ್ಡಿವೆಯಾದರೂ, ಅವೇ ತಮ್ಮಷ್ಟಕ್ಕೆ ಒಂದು ಫ್ಯಾಸಿಸ್ಟ್ ವ್ಯವಸ್ಥೆಯ ಸ್ಥಾಪನೆಯಲ್ಲ.



ಎರಡು ಪ್ರಧಾನ ಪಕ್ಷಗಳು– ಬಿಜೆಪಿ ಮತ್ತು ಕಾಂಗ್ರೆಸ್ ಪರ್ಯಾಯವಾಗಿ ನವ-ಉದಾರವಾದವನ್ನು ಆಳುವ ವರ್ಗಗಳಿಗಾಗಿ ನಿರ್ವಹಿಸುತ್ತಿರುವುದರಿಂದಾಗಿ ಬಿಜೆಪಿಯ ವಿರುದ್ಧ ರಾಜಕೀಯ ಹೋರಾಟವನ್ನು ಆಳುವ ವರ್ಗಗಳ ಇನ್ನೊಂದು ಪ್ರಧಾನ ಪಕ್ಷದೊಡನೆ ಮೈತ್ರಿಯಿಂದ ನಡೆಸಲು ಸಾಧ್ಯವಿಲ್ಲ.

ನವ-ಉದಾರವಾದ ಮತ್ತು ಕೋಮುವಾದದ ಸ್ಫೋಟಕ ಮಿಶ್ರಣ

ಭಾರತ ಇಂದು ಒಂದು ಸರ್ವಾಧಿಕಾರಶಾಹಿಯ ಮುನ್ನಡೆಯನ್ನು ಎದುರಿಸುತ್ತಿದೆ. ಇದಕ್ಕೆ ಚಾಲನೆ ಒದಗಿಸುತ್ತಿರುವುದು ನವ-ಉದಾರವಾದ ಮತ್ತು ಕೋಮುವಾದದ ಒಂದು ಸ್ಫೋಟಕ ಮಿಶ್ರಣ. ಹಿಂದುತ್ವ ಕೋಮುವಾದವಲ್ಲದೆ, ಸರ್ವಾಧಿಕಾರಶಾಹಿಯ ಇನ್ನೊಂದು ಪ್ರಮುಖ ಮೂಲವೆಂದರೆ ಬಲಪಂಥೀಯ ನವ-ಉದಾರವಾದಿ ರಭಸ. ನವ-ಉದಾರವಾದಿ ಆಳ್ವಿಕೆ ಮೂಲಭೂತ ಧೋರಣೆಗಳನ್ನು ರೂಪಿಸುವುದಕ್ಕೆ ಸಂಬಂಧಪಟ್ಟಂತೆ ಪ್ರಜಾಪ್ರಭುತ್ವ ಅವಕಾಶವನ್ನು ಕುಗ್ಗಿಸುವ, ಎಲ್ಲ ಬೂರ್ಜ್ವಾ ಪಕ್ಷಗಳನ್ನು ಸಮರೂಪಗೊಳಿಸುವ, ಸಂಸದೀಯ ಪ್ರಜಾಪ್ರಭುತ್ವವನ್ನು ಟೊಳ್ಳಾಗಿಸುವ, ಮತ್ತು ಜನಗಳನ್ನು ಬಲಹೀನರನ್ನಾಗಿ ಮಾಡುವ ಕ್ರಿಯೆ ನಡೆಸುತ್ತಿದೆ. ರಾಜಕೀಯ ವ್ಯವಸ್ಥೆಯ ಮೇಲೆ ನವ-ಉದಾರವಾದದ ಪ್ರಭಾವದಿಂದ ಪ್ರಜಾಪ್ರಭುತ್ವ ಸಂಕುಚಿತಗೊಳ್ಳುವಂತಾಗಿದೆ.

ಜಗತ್ತಿನಲ್ಲಿ ಇಂದು, ಸಾಮ್ರಾಜ್ಯಶಾಹಿ ಮತ್ತು ವಿಭಿನ್ನ ದೇಶಗಳ ಆಳುವ ವರ್ಗಗಳು ತಮ್ಮ ವರ್ಗಆಳ್ವಿಕೆಯನ್ನು ಶಾಶ್ವತಗೊಳಿಸಲು ಮತ್ತು ನವ-ಉದಾರವಾಧಿ ಧೋರಣೆಗಳನ್ನು ಅನುಸರಿಸಲು ಬಹಿರಂಗ ಫ್ಯಾಸಿಸ್ಟ್ ಆಳ್ವಿಕೆಯ ಬದಲು ವಿಭಿನ್ನ ಸ್ವರೂಪಗಳ ಸರ್ವಾಧಿಕಾರಶಾಹಿಯನ್ನು ಬಳಸುತ್ತಿವೆ. ಇಂತಹ ಸರ್ವಾಧಿಕಾರಶಾಹಿಯನ್ನು ಔಪಚಾರಿಕ ಪ್ರಜಾಪ್ರಭುತ್ವ ಮತ್ತು ಚುನಾಯಿತ ಸರಕಾರಗಳು ಇರುವಲ್ಲಿ ಹೇರಲು ಸಾಧ್ಯವಿದೆ.

ಇಂದು ವಿಭಿನ್ನ ಸ್ವರೂಪಗಳ ಸರ್ವಾಧಿಕಾರಶಾಹಿ ಜಗತ್ತಿನಲ್ಲಿ ಇದೆ. ಕೆಲವೆಡೆಗಳಲ್ಲಿ ಧಾರ್ಮಿಕ-ಜನಾಂಗೀಯ ಆಧಾರದಲ್ಲಿ ಜನಗಳನ್ನು ರಾಜಕೀಯವಾಗಿ ಅಣಿನೆರೆಸಿ ಸರ್ವಾಧಿಕಾರಶಾಹಿಯನ್ನು ಹೇರಲಾಗುತ್ತಿದೆ. ಧರ್ಮ ಆಧಾರಿತ ಕೋಮುವಾದ ಅಥವ ರಾಜಕೀಯ ಅಣಿನೆರಿಕೆಯೊಂದಿಗೆ ಅತ್ಯಂತ ಬಲಪಂಥೀಯ ಆರ್ಥಿಕ ಧೋರಣೆಗಳ ಹೇರಿಕೆಯೂ ನಡೆಯುತ್ತದೆ. ಭಾರತ ಇಂತಹ ಒಂದು ದೇಶ.

ಟರ್ಕಿ ಮತ್ತು ಭಾರತ–ಆಶ್ಚರ್ಯಕರ ಸಾಮ್ಯತೆ

ಧರ್ಮ-ಆಧಾರಿತ ರಾಜಕೀಯ ಅಣಿನೆರಿಕೆ ಮತ್ತು ಸರ್ವಾಧಿಕಾರಕ್ಕೆ ಸಂಬಂಧಪಟ್ಟಂತೆ ಭಾರತ ಮತ್ತು ಟರ್ಕಿಯ ನಡುವೆ ಆಶ್ಚರ್ಯಕರ ಸಾಮ್ಯಗಳಿವೆ. ಮೋದಿ ಸರಕಾರ ಮೇ 2014ರಲ್ಲಿ ಅಧಿಕಾರಕ್ಕೆ ಬಂದ ನಂತರ, ಲೇಖಕ ಅಮಿತಾವ್ ಘೋಷ್ ಈ ಸಮಾನ ಲಕ್ಷಣಗಳ ಬಗ್ಗೆ ಬರೆದ ಮೊದಲಿಗರಲ್ಲಿ ಒಬ್ಬರು. ಎರಡೂ ದೇಶಗಳ ಆಳುವ ಪಕ್ಷಗಳು ಬೆಂಬಲ ಕ್ರೋಡೀಕರಿಸಲು ಧರ್ಮ-ಆಧಾರಿತ 'ರಾಷ್ಟ್ರವಾದ'ವನ್ನು ಬಳಸುತ್ತವೆ. ಟರ್ಕಿಯ ಎಕೆಪಿ(ನ್ಯಾಯ ಮತ್ತು ಅಭಿವೃದ್ಧಿ ಪಕ್ಷ) ಒಂದು ಇಸ್ಲಾಮ್‌ವಾದೀ ಪಕ್ಷವಾದರೆ ಬಿಜೆಪಿ ಹಿಂದುತ್ವದ ಮೇಲೆ ನಿಂತಿರುವ ಪಕ್ಷ. ಎರಡರಲ್ಲೂ ಸರ್ವಾಧಿಕಾರೀ ಪ್ರವೃತ್ತಿಗಳಿರುವ ಒಬ್ಬ ಬಲಿಷ್ಟ ಮುಖಂಡರು–ರೆಸೆಪ್ ಎರ್ಡೊಗನ್ ಮತ್ತು ನರೇಂದ್ರ ಮೋದಿ–ಸರಕಾರದಲ್ಲಿದ್ದಾರೆ. ಎಕೆಪಿ ಸರಕಾರ ಟರ್ಕಿ ಪ್ರಭುತ್ವದ ಜಾತ್ಯತೀತ ಸ್ವರೂಪವನ್ನು ಕಳಚಲು ಪ್ರಯತ್ನಿಸುತ್ತಿದೆ, ಕುರ್ದಿ ಅಲ್ಪಸಂಖ್ಯಾತರ ಮೇಲೆ ಮತ್ತು ಜಾತ್ಯತೀತ ಬುದ್ಧಿಜೀವಿಗಳ ಮೇಲೆ ಗುರಿಯಿಟ್ಟಿದೆ. ಬಿಜೆಪಿ ಮತ್ತು ಮೋದಿ ಸರಕಾರವೂ ಅಲ್ಪಸಂಖ್ಯಾತರ ಮೇಲೆ ಗುರಿಯಿಟ್ಟಿದೆ ಮತ್ತು ಜಾತ್ಯತೀತ ಬುದ್ಧಿಜೀವಿಗಳ ಭಿನ್ನಾಭಿಪ್ರಾಯದ ದನಿಗಳನ್ನು ಅಡಗಿಸಲು ಪ್ರಯತ್ನಿಸುತ್ತಿದೆ. ಈ ಇಬ್ಬರೂ ನವ-ಉದಾರವಾದವನ್ನು ಅಪ್ಪಿಕೊಂಡಿದ್ದಾರೆ. ಆದರೆ ಟರ್ಕಿಯ ಅಥವ ಭಾರತದ ಸರಕಾರಗಳನ್ನು ಮತ್ತು ಪ್ರಭುತ್ವವನ್ನು ಫ್ಯಾಸಿಸ್ಟ್ ಎಂದು ನಿರೂಪಿಸುವುದು ತಪ್ಪಾಗುತ್ತದೆ. ಅವು ಬಲಪಂಥೀಯ ಸರ್ವಾಧಿಕಾರಶಾಹಿಗಳು ಎಂದು ವರ್ಣಿಸುವುದೇ ಉತ್ತಮ.

ಮೋದಿ ಸರಕಾರದ ಸರ್ವಾಧಿಕಾರಶಾಹಿ ಅಮೆರಿಕ ಸಂಯುಕ್ತ ಸಂಸ್ಥಾನಗಳೊಂದಿಗೆ ಅದರ ಹೆಚ್ಚುತ್ತಿರುವ ಮಿಲಿಟರಿ ಸಹಕಾರದಿಂದ ಪುಷ್ಟಿ ಪಡೆಯುತ್ತಿದೆ. ಹೀಗೆ ಬಿಜೆಪಿ–ಆರೆಸ್ಸೆಸ್ ಕೂಟದ ವಿರುದ್ಧ ಹೋರಾಟ ಫ್ಯಾಸಿಸಂ ಮತ್ತು ಫ್ಯಾಸಿಸಂ–ವಿರೋಧಿ ಶಕ್ತಿಗಳ ನಡುವಿನ ಕಪ್ಪು–ಬಿಳುಪು ಹೋರಾಟಕ್ಕಿಂತ ಹೆಚ್ಚು ಸಂಕೀರ್ಣ ಮತ್ತು ಬಹು–ಆಯಾಮಗಳ ಸ್ವರೂಪ ಹೊಂದಿದೆ.


ಇಮ್ಮುಖಿ ನಿಲುವು

ಬಿಜೆಪಿ ಮತ್ತು ಅದರ ಪೋಷಕ ಆರೆಸ್ಸೆಸ್ ವಿರುದ್ಧ ರಾಜಕೀಯ, ಸೈದ್ಧಾಂತಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಲಯಗಳಲ್ಲಿ ಹೋರಾಟ ನಡೆಸಬೇಕಾಗಿದೆ. ಬಿಜೆಪಿ ಮತ್ತು ಬಲಪಂಥೀಯ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟವನ್ನು ಕೋಮುವಾದದ ವಿರುದ್ಧ ಹೋರಾಟದೊಂದಿಗೆ ನವ-ಉದಾರವಾದದ ವಿರುದ್ಧ ಹೋರಾಟವನ್ನು ಬೆಸೆಯುವ ಮೂಲಕ ನಡೆಸಬೇಕಾಗಿದೆ. ಎರಡು ಪ್ರಧಾನ ಪಕ್ಷಗಳು– ಬಿಜೆಪಿ ಮತ್ತು ಕಾಂಗ್ರೆಸ್ ಪರ್ಯಾಯವಾಗಿ ನವ-ಉದಾರವಾದವನ್ನು ಆಳುವ ವರ್ಗಗಳಿಗಾಗಿ ನಿರ್ವಹಿಸುತ್ತಿರುವುದರಿಂದಾಗಿ ಬಿಜೆಪಿಯ ವಿರುದ್ಧ ರಾಜಕೀಯ ಹೋರಾಟವನ್ನು ಆಳುವ ವರ್ಗಗಳ ಇನ್ನೊಂದು ಪ್ರಧಾನ ಪಕ್ಷದೊಡನೆ ಮೈತ್ರಿಯಿಂದ ನಡೆಸಲು ಸಾಧ್ಯವಿಲ್ಲ. ಒಂದು ಫ್ಯಾಸಿಸ್ಟ್ ವ್ಯವಸ್ಥೆಯ ವಿರುದ್ಧ ಹೋರಾಟದಲ್ಲಿ ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳು ಅನವಶ್ಯಕವಾಗಿಬಿಡುತ್ತವೆ, ಆದರೆ ಭಾರತದಲ್ಲಿ ಚುನಾವಣಾ ಹೋರಾಟವೂ ಮಹತ್ವದ್ದಾಗಿದೆ.

ಈಗಿನ ಹೋರಾಟ ಫ್ಯಾಸಿಸಂ ವಿರುದ್ಧ ಎಂಬ ಘೋಷಣೆ ಬಿಜೆಪಿ ಮತ್ತು ಮೋದಿ ಸರಕಾರದ ವಿರುದ್ಧ ಜನಗಳನ್ನು ಅಣಿನೆರೆಸಬಹುದಾದ ಕೆಲವು ಜೀವನ್ಮರಣ ಪ್ರಶ್ನೆಗಳನ್ನು ಗೋಜಲಾಗಿಸುತ್ತದೆ. ಇದರಲ್ಲಿ ಲೂಟಿಕೋರ ಆರ್ಥಿಕ ಧೋರಣೆಗಳು ಮತ್ತು ದೊಡ್ಡ ಬಂಡವಾಳಿಗರು ಮತ್ತು ಹಣಕಾಸು ಬಂಡವಾಳದ ಕೈಂಕರ್ಯವೂ ಸೇರಿದೆ. ಇವು ಜನಗಳ ಜೀವನಾಧಾರಗಳನ್ನು ಮತ್ತು ಆರ್ಥಿಕ ಹಕ್ಕುಗಳನ್ನು ಬಹುವಾಗಿ ತಟ್ಟುವ ಪ್ರಶ್ನೆಗಳು.

ದೇಶದಲ್ಲಿ ಇಂದು ಕಾಣುತ್ತಿರುವ ನಿರ್ದಿಷ್ಟ ಸನ್ನಿವೇಶದಲ್ಲಿ ಕೋಮುವಾದದ ವಿರುದ್ಧ ಎಲ್ಲ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳ ಅತ್ಯಂತ ವಿಶಾಲವಾದ ಕ್ರೋಡೀಕರಣ ಅತ್ಯಂತ ಆವಶ್ಯಕವಾಗಿದೆ, ಅದೇ ವೇಳೆಗೆ ಒಂದು ಪರ್ಯಾಯ ಕಾರ್ಯಕ್ರಮದ ಆಧಾರದಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಒಂದು ರಾಜಕೀಯ ಮೈತ್ರಿಯನ್ನೂ ಕಟ್ಟಬೇಕಾಗಿದೆ. ಇಂತಹ ಇಮ್ಮುಖಿ ನಿಲುವು ಮಾತ್ರವೇ ಭಾರತದ ಬಲಪಂಥೀಯ ಶಕ್ತಿಗಳನ್ನು ತಡೆದು, ಹಿಮ್ಮೆಟ್ಟಿಸಬಲ್ಲದು.

ಕೋಮುವಾದದ ವಿರುದ್ಧ ಎಲ್ಲ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳ ಅತ್ಯಂತ ವಿಶಾಲವಾದ ಕ್ರೋಡೀಕರಣ ಮತ್ತು ಒಂದು ಪರ್ಯಾಯ ಕಾರ್ಯಕ್ರಮದ ಆಧಾರದಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಒಂದು ರಾಜಕೀಯ ಮೈತ್ರಿಯ ಇಮ್ಮುಖೀ ನಿಲುವು ಮಾತ್ರವೇ ಭಾರತದ ಬಲಪಂಥೀಯ ಶಕ್ತಿಗಳನ್ನು ತಡೆದು, ಹಿಮ್ಮೆಟ್ಟಿಸಬಲ್ಲದು.





ಕಾವೇರಿ ವಿವಾದ : ಕೆಲವು ಪ್ರಶ್ನೆಗಳು

ಕಾವೇರಿ ವಿವಾದದಲ್ಲಿ ಕೆಲವು ಪ್ರಶ್ನೆಗಳು ಪದೇ ಪದೇ ಏಳುತ್ತಿವೆ. ಅದಕ್ಕೆ ಉತ್ತರ ಕಂಡುಕೊಳ್ಳದೆ ವಿವಾದವನ್ನು ಅರ್ಥ ಮಾಡಿಕೊಳ್ಳಲೂ ಅಥವಾ ಪರಿಹರಿಸಲು ಸಾಧ್ಯವಿಲ್ಲ. ಅಂತಹ ಕೆಲವು ಪ್ರಶ್ನೆಗಳಿಗೆ ಕಾ. ಜಿ.ಎನ್. ನಾಗರಾಜ್ 'ಗೌರಿ ಲಂಕೇಶ್ ಪತ್ರಿಕೆ'ಯಲ್ಲಿ ಬರೆದ ಲೇಖನದಲ್ಲಿ ಉತ್ತರಿಸಿದ್ದಾರೆ. ಆ ಲೇಖನದ ಕೆಲವು ಆಯ್ದ ಭಾಗಗಳು:

ನ್ಯಾಯಾಂಗ ನದಿ ನೀರಿನ ಹಂಚಿಕೆಯನ್ನು ಏಕೆ ಪರಿಹರಿಸಲು ಸಾಧ್ಯವಿಲ್ಲ?

ನದಿ ನೀರಿನ ಹಂಚಿಕೆ ನಿರ್ವಹಣೆ ಕಾರ್ಯಾಂಗದ ಜವಾಬ್ದಾರಿಯೇ ಹೊರತು ಶಾಸಕಾಂಗ, ನ್ಯಾಯಾಂಗಗಳ ಕೆಲಸವಲ್ಲ. ಏಕೆಂದ-ರೆ ಕಾರ್ಯಾಂಗದ ಪ್ರತಿ ವಿಭಾಗಗಳಲ್ಲಿ ಕಾಲಬದ್ಧ ವರದಿಗಳನ್ನು ತಮ್ಮ ಅಧೀನ ವಿಭಾಗಗಳಿಂದ ಪಡೆಯುವ, ಪರಿಶೀಲಿಸುವ ರೂಢಿಗತ ಪದ್ಧತಿಗಳು ಚಾಲ್ತಿಯಲ್ಲಿರುತ್ತವೆ. ನೂರಾರು ವರ್ಷಗಳ ಹಿಂದೆ ಈ ಪದ್ಧತಿಗಳಿಗೆ ಅಂಚೆಯ ಮೂಲಕ ತಿಂಗಳುಗಟ್ಟಲೇ, ವಾರಗಟ್ಟಲೆ ಸಮಯ ಹಿಡಿಯುವಂತಹ ಪರಿಸ್ಥಿತಿ ಇಂದಿಲ್ಲ. ಕೇವಲ ಸಂವಹನ ತಂತ್ರಜ್ಞಾನ ಮಾತ್ರವೇ ಅಲ್ಲದೆ ವಿವಿಧ ಇತರ ತಂತ್ರಜ್ಞಾನಗಳೂ ಇಂದು ವೇಗವಾಗಿ ತೀರ್ಮಾನವನ್ನು ಕೈಗೊಳ್ಳುವ ಅವಕಾಶವನ್ನು ಕಲ್ಪಿಸಿವೆ. ಅದರಲ್ಲಿ ಉಪಗ್ರಹಗಳ ಮೂಲಕ ಸಂಗ್ರಹಿಸುವ ರಿಮೋಟ್ ಸೆನ್ಸಿಂಗ್ ತಂತ್ರಜ್ಞಾನವೂ ಒಂದು. ಪ್ರತಿ ನಿಮಿಷಕ್ಕೆ ಸಾವಿರಾರು ಚಿತ್ರಗಳನ್ನು ತೆಗೆದು ತಮ್ಮ ಮಾಲೀಕರ ಮುಂದಿಡುವ ಉಪಗ್ರಹಗಳು ಕಾವೇರಿ ನದೀ ಬಯಲಿನ ಪ್ರದೇಶದ ಪ್ರತಿ ಸೂಕ್ಷ್ಮ ಅಂಶಗಳನ್ನು ಸಂಗ್ರಹಿಸಿರುತ್ತವೆ.

ಭಾರತ ಸರ್ಕಾರಕ್ಕೆ ಉಪಗ್ರಹಗಳು ನದಿಯಲ್ಲಿ ನಿಮಿಷಕ್ಕೆ ಬದಲಾಗುತ್ತಿರುವ ನೀರಿನ ಹರಿವು, ಮಳೆಯ ಪ್ರಮಾಣ, ಅಣೆಕಟ್ಟುಗಳ ನೀರಿನ ಸಂಗ್ರಹದ ಪ್ರಮಾಣ, ಅಚ್ಚುಕಟ್ಟುಗಳಲ್ಲಿ ಬೆಳೆಯ ಪ್ರಮಾಣ ಇತ್ಯಾದಿ ಅವಶ್ಯ ವಿಷಯಗಳ ಬಗ್ಗೆ ಅಂಕಿ ಅಂಶಗಳನ್ನು ಕ್ಷಣಕ್ಷಣಕ್ಕೂ ಒದಗಿಸುತ್ತಿರುತ್ತವೆ. ಇವುಗಳನ್ನು ಕಾಲಕಾಲಕ್ಕೆ ಕೇಂದ್ರ ಸರ್ಕಾರದ ಜಲ ಸಂಪನ್ಮೂಲ ವಿಭಾಗಗಳು. ರಾಜ್ಯಗಳು ನೀಡುವ ಮಾಹಿತಿಗಳ ಜೊತೆಗೆ ತುಲನೆ ಮಾಡಿ ಸರಿಸುಮಾರು ಕರಾರುವಾಕ್ಕಾದ ಮಾಹಿತಿ ಪಡೆಯುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಹೀಗಿರುವಾಗ ಪರಿಸ್ಥಿತಿ ವಿಕೋಪಕ್ಕೆ ಹೋಗುವ ಬಹಳ ಮೊದಲೇ ಮಾಹಿತಿಯಂತೂ ಲಭ್ಯ. ಈ ಬಗ್ಗೆ ತಕ್ಷಣವೇ ಕಾರ್ಯಪ್ರವೃತ್ತವಾಗಲು ಅಡ್ಡಿಯಾಗಿರುವುದು ಕೇಂದ್ರ ಸರ್ಕಾರದ ರಾಜಕೀಯ ಇಚ್ಛೆಯಷ್ಟೇ.

ಇಂತಹ ಕ್ಷಣಕ್ಷಣದ ಮಾಹಿತಿ ಮತ್ತು ನೀರಿನ ನಿರ್ವಹಣೆ ಮಾಡುವ ಆಡಳಿತ ಯಂತ್ರ ನ್ಯಾಯಾಂಗಕ್ಕೆ ಲಭ್ಯವಿಲ್ಲ. ಆದ್ದರಿಂದಲೇ ನ್ಯಾಯಾಂಗ ನದಿ ನೀರಿನ ಹಂಚಿಕೆಯಲ್ಲಿ ಮಧ್ಯ ಪ್ರವೇಶಿಸಬಾರದು ಎಂದು ಸಂವಿಧಾನ ವಿಧಿಸಿರುವುದು. ಕಾವೇರಿ ನ್ಯಾಯಾಧೀಕರಣದ ಮಧ್ಯಂತರ ತೀರ್ಪನ್ನು ನಿರ್ವಹಿಸುವ ಪ್ರಶ್ನೆ ಪದೇಪದೇ ಸುಪ್ರೀಂ ಕೋರ್ಟ್ ಮೆಟ್ಟಲು ಹತ್ತಿದಾಗ ಅಂದಿನ ಪೀಠ ತನ್ನ ಬುದ್ದಿಯನ್ನು ಸರಿಯಾಗಿ ಬಳಸಿ ಅಧಿಕಾರಿಗಳ ಮಟ್ಟದಲ್ಲಿ ಉಸ್ತುವಾರಿ ಸಮಿತಿ ಸಮಿತಿ ಮತ್ತು ರಾಜಕೀಯ ಮುಖ್ಯಸ್ಥರಾದ ಪ್ರಧಾನಿ ಮತ್ತು ಮುಖ್ಯಮಂತ್ರಿಗಳನ್ನು ಒಳಗೊಂಡು ಪ್ರಾಧಿಕಾರವನ್ನು ರಚಿಸಿತ್ತು. ಅವುಗಳನ್ನು ಕಾರ್ಯ ನಿರ್ವಹಿಸುವಂತೆ ನಿರ್ದೇಶನ ನೀಡಿತ್ತು. ಹಿಂದಿನ ಬಿಜೆಪಿ ಪಕ್ಷದವರೇ ಆದ ಪ್ರಧಾನಿ ವಾಜಪೇಯಿಯವರು ಇಂತಹ ಪ್ರಾಧಿಕಾರದ ಅಧ್ಯಕ್ಷರಾಗಿ ತೀರ್ಪು ನೀಡಿದ್ದರು. ಈ ಪ್ರಸಂಗಗಳು ಕೇಂದ್ರ ಸರ್ಕಾರದ ಪಾತ್ರವನ್ನು ಒತ್ತಿ ಹೇಳುತ್ತವೆ.

ಕಾವೇರಿ ಬಗ್ಗೆ ನ್ಯಾಯಾಧೀಕರಣದ ಮತ್ತು ಕೋರ್ಟುಗಳ ತೀರ್ಪುಗಳ ಸರಮಾಲೆ ಯಾಕೆ ಯಾವಾಗಲೂ ಕರ್ನಾಟಕದ ವಿರುದ್ಧ ಹೋಗುತ್ತಿವೆ?

ಇದಕ್ಕೆ ಇಂದು ನಮ್ಮ ದೇಶದಲ್ಲಿ ಕೋರ್ಟುಗಳು ಅನುಸರಿಸುತ್ತಿರುವ ನೀರಿನ ನ್ಯಾಯಶಾಸ್ತ್ರ ತತ್ವಗಳು ಮತ್ತು ಕಾನೂನಿನ ಚೌಕಟ್ಟುಗಳು ಕಾರಣವಾಗಿವೆ.

ನದಿ ನೀದಿನ ಬಳಕೆಯ ವಿಷಯದಲ್ಲಿ, ಹಿಂದಿನ ಕಾಲದಿಂದ ನದಿ ನೀರನ್ನು ಬಳಸುತ್ತಿರುವ ಪ್ರದೇಶಗಳು ಮತ್ತು ಇತ್ತೀಚೆಗೆ ಬಳಸುತ್ತಿರುವ ಪ್ರದೇಶಗಳ ನಡುವೆ, ಹಿಂದಿನಿಂದ ಬಳಸುತ್ತಿರುವ ಪ್ರದೇಶಗಳಿಗೆ ನೀರಿನ ಹಂಚಿಕೆಯಲ್ಲಿ ಆದ್ಯತೆ ನೀಡಲಾಗುತ್ತಿದೆ. ಕರ್ನಾಟಕ ಕೆಆರ್‌ಎಸ್ ನಿರ್ಮಾಣದ ನಂತರ ಮಾತ್ರವೇ ಗಣನೀಯವಾಗಿ ನೀರಿನ ಉಪಯೋಗ ಆರಂಭಿಸಿದ್ದು. ಹಾರಂಗಿ, ಹೇಮಾವತಿಯಂತೂ ಕೇವಲ ಮೂರು–ನಾಲ್ಕು ದಶಕಗಳ ಈಚೆಗಿನದು. ಆದ್ದರಿಂದ ಈ ಪ್ರದೇಶಗಳ ಉಪಯೋಗಕ್ಕೆ ಎರಡನೇ ಆದ್ಯತೆ. ತಮಿಳುನಾಡಿನ ನದೀ ಮುಖಜ ಪ್ರದೇಶಗಳದ್ದು ಸಾವಿರಾರು ವರ್ಷಗಳ ಹಿಂದಿನ

ಪುಟ 11 ಕ್ಕೆ

ರೈತರಿಗೆ ತಲಾ 50 ಸಾವಿರ ಮತ್ತು ಕೃಷಿಕೂಲಿಕಾರರಿಗೆ 25 ಸಾವಿರ ರೂಗಳ ಕನಿಷ್ಠ ಪರಿಹಾರವನ್ನು ಘೋಷಿಸಬೇಕು : ರೈತಸಂಘ

ಬರಗಾಲದ ಸಂದರ್ಭದ ನೀರಿನ ಕೊರತೆಯನ್ನು ಸಮರ್ಪಕವಾಗಿ ಹಂಚಿಕೊಳ್ಳುವ ಒಂದು ಶಾಶ್ವತ ಪರಿಹಾರವನ್ನು ಕಂಡುಕೊಳ್ಳಲಾಗದಿರುವುದೇ ಕಾವೇರಿ ಸಮಸ್ಯೆ ಇಂಥ ಎಲ್ಲಾ ಸಂದರ್ಭಗಳಲ್ಲೂ ಉಲ್ಬಣಗೊಳ್ಳಲು ಕಾರಣವಾಗಿದೆ. ಇದನ್ನು ಶಾಶ್ವತವಾಗಿ ಜನಪರವಾಗಿ ಇತ್ಯರ್ಥ ಪಡಿಸಿಕೊಳ್ಳಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮತ್ತು ಆಡಳಿತ ಪಕ್ಷಗಳು ರಾಜಕೀಯ ಇಚ್ಛಾಶಕ್ತಿ ತೋರದಿರುವುದೇ ಈ ಸಮಸ್ಯೆಯ ಮೂಲವಾಗಿದೆ. ಪರಿಣಾಮವಾಗಿ ಇಂಥ ಎಲ್ಲಾ ಸಂದರ್ಭಗಳಲ್ಲೂ ಎರಡೂ ರಾಜ್ಯಗಳ ರೈತರು ಮತ್ತು ನಾಗರೀಕರ ಸಾವಿರಾರು ಕೋಟಿರೂ. ಗಳ ಗಂಭೀರವಾದ ನಷ್ಟಕ್ಕೆ ಹಾಗೂ ಪ್ರಾಣ ಹಾನಿಗೊಳಗಾಗುವ ಪರಿಸ್ಥಿತಿ ಮುಂದುವರೆಯಲು ಕಾರಣವಾಗಿದೆ.

ಕಾವೇರಿ ನ್ಯಾಯ ಮಂಡಳಿ ವರದಿ ನೀಡಿ 11 ವರ್ಷ ಕಳೆಯುತ್ತಿದ್ದರೂ ಮತ್ತು ಈ ಅವದಿಯಲ್ಲಿ ಹಲವು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಇಂತಹ ನೀರಿನ ಕೊರತೆಯ ಸಮಸ್ಯೆಯನ್ನು ಎದುರಿಸಿದ್ದರೂ ಇದಕ್ಕೊಂದು ಶಾಶ್ವತ ಪರಿಹಾರ ಹುಡುಕುವಲ್ಲಿ ಮುತುವರ್ಜಿ ತೋರದಿರುವುದು ಖಂಡನೀಯವಾಗಿದೆ. ಗಡ್ಡಕ್ಕೆ ಬೆಂಕಿ ಹತ್ತಿದ್ದಾಗ ಬಾವಿ ತೋಡಲು ಮುಂದಾಗುವ ರಾಜಕೀಯ ಲಾಭದ ನಾಟಕ ನೀತಿಯನ್ನೇ ಅನುಸರಿಸುತ್ತಿರುವುದು ಖೇದಕರವಾಗಿದೆ.

ಈ ವಿಚಾರವನ್ನು ಎಷ್ಟು ಉಪೇಕ್ಷೆಗೆ ಒಳಪಡಿಸಲಾಗಿದೆಯೆಂದರೆ, ಜನತೆ ಹಾಗೂ ರಾಜ್ಯ ಸರಕಾರಗಳು ಎಷ್ಟೇ ಒತ್ತಾಯಿಸಿದರೂ ಕೇಂದ್ರ ಸರಕಾರ ಮತ್ತು ಪ್ರಧಾನ ಮಂತ್ರಿಗಳು ಮಧ್ಯ ಪ್ರವೇಶಿಸದಿರುವುದು ಕಂಡು ಬಂದಿದೆ. ಅದು ಸುಪ್ರಿಂ ಕೋರ್ಟ ಮದ್ಯ ಪ್ರವೇಶಿಸಿ ಸೂಚಿಸಿದ ನಂತರವಷ್ಟೇ ಕೇಂದ್ರ ಸರಕಾರ ಅದೂ ಕೂಡಾ ಜಲಸಂಪನ್ಮೂಲ ಸಚಿವರ ನೇತೃತ್ವದಲ್ಲಿ ಸಂಧಾನ ಸಬೆ ನಡೆಸಲಾಗುತ್ತಿದೆ. ಈ ವರ್ಷ ಮಳೆಯ ಕೊರತೆ ಕಳೆದ ಜೂನ್ ತಿಂಗಳಿನಿಂದಲೇ ಉದ್ಭವಿಸಿದ್ದರೂ ಈ ಕುರಿತು ಗಮನಹರಿಸದೇ ಉಪೇಕ್ಷೆ ಮಾಡಲಾಯಿತು.

ಇದೆಲ್ಲವೂ ಕೇವಲ ಈ ಸರಕಾರಗಳು ಮತ್ತು ಆಡಳಿತ ಪಕ್ಷಗಳು ತಮ್ಮ ರಾಜಕೀಯ ಪಕ್ಷಗಳ ಲೆಕ್ಕಾಚಾರದಿಂದ ಮಾತ್ರವೇ ಈ ರೀತಿ ವರ್ತಿಸುತ್ತಿಲ್ಲ. ಅವುಗಳೀಗ ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ ಜಾಗತೀಕರಣದ ನೀತಿಗಳನ್ನು ಗಂಭೀರವಾಗಿ ಜಾರಿಗೊಳಿಸಲು ರೈತರನ್ನು ಮತ್ತು ಕೃಷಿ ಅವಲಂಭಿತರನ್ನು ಕೃಷಿ ಹಾಗೂ ಗ್ರಾಮೀಣ ಪ್ರದೇಶದಿಂದ ಹೊಡೆದೋಡಿಸುವ ಮತ್ತು ಕುಡಿಯುವ ನೀರಿನ ಖಾಸಗೀಕರಿಸುವ ಮತ್ತು ಆ ಮೂಲಕ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ವ್ಯವಸಾಯ ಹಾಗೂ ಜಲಮೂಲಗಳನ್ನು ಒದಗಿಸುವ ಕುತಂತ್ರದಿಂದಲೇ ಈ ಉಪೇಕ್ಷೆಯನ್ನು ಮಾಡುತ್ತಿವೆ ಎಂಬುದನ್ನು ರಾಜ್ಯದ ಜನತೆ ಗಮನಿಸಬೇಕು.

ಎರಡು ರಾಜ್ಯಗಳಲಿ, ಕರ್ನಾಟಕದಲ್ಲಿ 11 ಲಕ್ಷ ಎಕರೆಗೂ ಅದಿಕ ಪ್ರದೇಶದ ರೈತಾಪಿ ಜನತೆ ಮತ್ತು ತಮಿಳ್ನಾಡಿನ ಲಕ್ಷಾಂತರ ಎಕರೆ ಪ್ರದೇಶದ ಸಾಂಬಾ ಎರಡು ಮತ್ತು ಮೂರನೇ ಬೆಳೆಯ ಪ್ರತಿ ಎಕರೆಗೆ ಕನಿಷ್ಟವೆಂದರೂ 50 ಸಾವಿರ ರೂಗಳಿಗೂ ಅಧಿಕ ನಷ್ಟವನ್ನು ಹೊಂದುತ್ತಿರುವ ಆತಂಕದಿಂದಿದ್ದಾರೆ. ಅದೇ ರೀತಿ ಎರಡೂ ರಾಜ್ಯಗಳ ಗ್ರಾಮೀಣ ಕೃಷಿ ಕೂಲಿಕಾರರು ಇತರೇ ದುಡಿಯುವ ಜನರು ಕೂಲಿ ಕೆಲಸವನ್ನು ಕಳೆದು ಕೊಂಡು ನಷ್ಟವನ್ನು ಅನುಭವಿಸಿದ್ದಾರೆ ಮತ್ತು ನಗರಗಳ ಜನತೆ ಕುಡಿಯುವ ನೀರಿನ ಭೀತಿಯನ್ನು ಹೊಂದಿದ್ದಾರೆ. ಒಟ್ಟಾರೆ ಇದೆಲ್ಲವೂ ಮುಖ್ಯವಾಗಿ ಗ್ರಾಮೀಣ ಜನತೆಯ ಮೇಲೆ ಸಾಲದ ದೊಡ್ಡ ಹೊರೆಯನ್ನು ಹೇರಿದೆ. ಈ ಕುರಿತು ಕರ್ನಾಟಕ ಹಾಗೂ ತಮಿಳ್ನಾಡು ರಾಜ್ಯ ಸರಕಾರಗಳಾಗಲೀ ಮತ್ತು ಈ ಎರಡು ಸರಕಾರಗಳ ಜೊತೆ ಕೇಂದ್ರ ಸರಕಾರವೂ ಸೇರಿ ಈ ಎಲ್ಲಾ ಜನತೆಯ ಆತಂಕವನ್ನು ಅಗತ್ಯ ನಷ್ಟ ಪರಿಹಾರವನ್ನು ನೆರವಿನ ಮೂಲಕ ಒದಗಿಸುವುದಾಗಿ ಘೋಷಿಸುವ ಮೂಲಕ

ಪುಟ 11 ಕ್ಕೆ

“ದಲಿತ ರಾಜಕಾರಣದ ಮುಂದಿರುವ ಸವಾಲು, ಸಾಮಾಜಿಕ ನ್ಯಾಯದೊಂದಿಗೆ ಆರ್ಥಿಕ ನ್ಯಾಯಕ್ಕೋಸ್ಕರವೂ ಹೋರಾಡೋದು”: ಮೆವಾನಿ

ಜಿಗ್ನೇಶ್ ಮೆವಾನಿ ಈಗ ಗುಜರಾತಿನ ದಲಿತರ ಭರವಸೆಯ ಹೊಸ ನಾಯಕ. ಕಳೆದ ಜುಲೈ ತಿಂಗಳಲ್ಲಿ ಗುಜರಾತಿನ ಊನಾದಲ್ಲಿ ಗೋರಕ್ಷಕರಿಂದ ದಲಿತರ ಮೇಲೆ ನಡೆದ ಅಮಾನವೀಯ ಹಲ್ಲೆಯನ್ನು ವಿರೋಧಿಸಿ ರಾಜ್ಯದಾದ್ಯಂತ ನಡೆದ ಚಳುವಳಿಗಳಲ್ಲಿ ಇವರದು ಸಕ್ರಿಯ ಪಾತ್ರ. ‘ಊನಾ ದಲಿತ ಅತ್ಯಾಚಾರ ಹೋರಾಟ ಸಮಿತಿ’ಯ ನಾಯಕರೂ ಆಗಿರುವ ಮೆವಾನಿ, ಇತ್ತೀಚೆಗೆ ಅಹಮದಾಬಾದ್‌ನಲ್ಲಿ ರಸ್ತೆತಡೆ ಚಳುವಳಿಯನ್ನು ಪ್ರಾರಂಭಿಸಿ ದಲಿತರಿಗೆ ಹಂಚಲಾದ ಭೂಮಿಯ ಖಾತೆ ಮಾಡಿಸಿಕೊಡುವ ಪ್ರಕ್ರಿಯೆಗೆ ಸರ್ಕಾರ ಚಾಲನೆ ನೀಡಲು ಕಾರಣರಾದರು. ‘ದಿ ಹಿಂದು’ ಪತ್ರಿಕೆಯ ಜಿ. ಸಂಪತ್, ಜಿಗ್ನೇಶ್ ಅವರೊಂದಿಗೆ ನಡೆಸಿದ ಮಾತುಕತೆ ಇಲ್ಲಿದೆ. ದಲಿತ ಮತ್ತು ಕಮ್ಯುನಿಸ್ಟ್ ಚಳುವಳಿಯ ಸಂಬಂಧಗಳ ಬಗೆಗ ಅವರ ಮಾತುಗಳು ಬಹಳ ಗಮನಾರ್ಹ.

(ಕೃಪೆ: ದಿ ಹಿಂದು, 23 ಸೆಪ್ಟೆಂಬರ್ 2016, ಅನುವಾದ ಕೃಪೆ: ಚಲೋ ಉಡುಪಿ ಬಳಗ)

ಪ್ರಶ್ನೆ : ಭೂರಹಿತ ದಲಿತರಿಗೆ ಸರ್ಕಾರ ತಲಾ ಐದು ಎಕರೆ ಭೂಮಿಯನ್ನು ಕೊಡಬೇಕು ಎಂಬುದು ನೀವು ಮತ್ತು ನಿಮ್ಮ ಚಳುವಳಿಯ ಮುಖ್ಯ ಬೇಡಿಕೆ. ಇದು ಆಗುಹೋಗುವ ಮಾತೇ? ದಲಿತರಿಗೆ ಕೊಡೋಕೆ ಭೂಮಿ ಎಲ್ಲಿದೆ?

ಮೆವಾನಿ: ಪ್ರತಿ ಜಿಲ್ಲೆ, ಪ್ರತಿ ತಾಲೂಕಿನಲ್ಲೂ ಸರ್ಕಾರದ ವಶದಲ್ಲಿ ಸಾಗುವಳಿ ಮಾಡದ ಭೂಮಿ ಇದೆ. ಅದನ್ನೆಲ್ಲ ಭೂರಹಿತರಿಗೆ ಹಂಚಬಹುದು. ಗುಜರಾತ್ ಭೂಸ್ವಾಧೀನ ಕಾಯ್ದೆಯನ್ನು ಜಾರಿ ಮಾಡಿದರೆ ಸಾವಿರಾರು ಎಕರೆ ಸರ್ಕಾರದ ವಶಕ್ಕೆ ಬರುತ್ತೆ. ಇದರ ಜೊತೆಗೆ ಸರ್ಕಾರ ಮನಸ್ಸು ಮಾಡಿದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಉಪ ಯೋಜನೆಯ ಪ್ರಕಾರ ಸರ್ಕಾರವೇ ಭೂಮಿಯನ್ನು ಖರೀದಿಸಿ ಭೂರಹಿತರಿಗೆ ಹಂಚಬಹುದು. ಟಾಟಾಗಳಿಗೆ, ಅಂಬಾನಿಗಳಿಗೆ, ಅದಾನಿಗಳಿಗೆ, ವಿಶೇಷ ಆರ್ಥಿಕ ವಲಯಗಳಿಗೆ ಕೊಡಲು ಸರ್ಕಾರದ ಹತ್ತಿರ ಭೂಮಿ ಇದ್ದಮೇಲೆ ದಲಿತರಿಗೆ ಆದಿವಾಸಿಗಳಿಗೆ ಹಿಂದುಳಿದವರಿಗೆ ಕೊಡಲು ಇರಲೇಬೇಕಲ್ಲವಾ?

ಪ್ರಶ್ನೆ : ಕಾರ್ಪೊರೇಟ್‌ನವರಿಗೆ ಸರ್ಕಾರ ಭೂಮಿ ಹಂಚೋದು ಆರ್ಥಿಕ ಅಭಿವೃದ್ಧಿಯ ಭಾಗವಾಗಿ. ದಲಿತರಿಗೆ ಐದು ಎಕರೆ ಭೂಮಿ ಕೊಡೋದರಿಂದ ಯಾವ ಅಭಿವೃದ್ಧಿ ಆಗುತ್ತೆ?

ಭೂಸುಧಾರಣೆ ಮೊದಲ ಪಂಚವಾರ್ಷಿಕ ಯೋಜನೆಯ ಭಾಗವಾಗಿತ್ತು. ಅದರ ಉದ್ದೇಶವೇ ಸಮ ಸಮಾಜವನ್ನು ದೇಶದಲ್ಲಿ ನಿರ್ಮಾಣ ಮಾಡುವ ಮತ್ತು ಭೂರಹಿತರಿಗೆ ಹಾಗೂ ನಿರ್ಗತಿಕರಿಗೆ ಕೃಷಿಭೂಮಿ ಕಲ್ಪಿಸುವುದಾಗಿತ್ತು. ಈಗಲೂ ದೇಶದಲ್ಲಿ ಬಹುಪಾಲು ಜನ ತಮ್ಮ ಜೀವನಾಧಾರಕ್ಕೆ ನಂಬಿರುವುದು ಕೃಷಿಯನ್ನೇ. ನಮ್ಮ ಬೇಡಿಕೆಯ ಮೂಲಕ ನಾವು ಅಭಿವೃದ್ಧಿಯ ಇನ್ನೊಂದು ಮಾದರಿಯನ್ನು ಮುಂದಿಡುತ್ತಿದ್ದೇವೆ ಅಷ್ಟೆ. ಸಂಪತ್ತು ಮತ್ತು ಉತ್ಪನ್ನಗಳ ಸರಿಯಾದ ವಿತರಣೆ, ಉಳುಮೆಗಾರರಿಗೆ ನೆಲ ಇವೆಲ್ಲ ಅಭಿವೃದ್ಧಿಯ ಭಾಗ.

ಪ್ರಶ್ನೆ : ನಿಮ್ಮ ಸರೋಡ ಭೂಹೋರಾಟದ ಗೆಲುವಿನ ಬಗ್ಗೆ ಸ್ವಲ್ಪ ಹೇಳಿ.

ಭೂಸುಧಾರಣೆ ಕಾಯ್ದೆ ಯಶಸ್ವಿಯಾಗಿ ಕಾಗದದ ಮೇಲೆ ಜಾರಿಯಾಗಿರುವ ಏಕೈಕ ರಾಜ್ಯವೆಂದರೆ ಗುಜರಾತ್! ಭೂ ಒಡೆತನದ ಬಗ್ಗೆ ಇಲ್ಲಿ ಸರಿಯಾದ ದಾಖಲೆಗಳನ್ನು ಯಾರೂ ಒದಗಿಸುವುದಿಲ್ಲ. ರೈತರೇನು ಕಾಗದದ ಮೇಲೆ ವ್ಯವಸಾಯ ಮಾಡೋಕೆ ಸಾಧ್ಯವಾ? ಸರೋಡದ ಕತೆಗೆ ಬಂದ–ರೆ, ಇಲ್ಲಿನ ನೂರ ಹದಿನೈದು ಕುಟುಂಬಗಳಿಗೆ ಇನ್ನೂರ ಇಪ್ಪತ್ತು ಭಿಗಾ ಭೂಮಿಯನ್ನು 2006ರಲ್ಲಿ ನೀಡಲಾಗಿತ್ತು. ತೊಂಬತ್ತು ದಿನಗಳೊಳಗೆ ಖಾತೆ ಪತ್ರವನ್ನು ಇವರಿಗೆಲ್ಲ ಕೊಡಬೇಕಾಗಿತ್ತು. ಆದರೆ 2016ರಲ್ಲೂ ಅವರಿಗೆ ಖಾತೆ ಮಾಡಿ ಕೊಟ್ಟಿರಲಿಲ್ಲ. ಈ ಕುಟುಂಬಗಳು ಸತತ ಒಂಬತ್ತು ವರ್ಷ ಧರಣಿ ಕೂರುವುದು, ಕಛೇರಿಗಳಿಗೆ ಮನವಿ ಕೊಡುವುದು ಇವನ್ನೆಲ್ಲ ಮಾಡುತ್ತಲೇ ಬಂದಿದ್ದರು. ಭೂಮಿ ಕೊಡಿ, ಇಲ್ಲವೇ ಈ ದೇಶದಿಂದ ನಮ್ಮನ್ನು ಹೊರದಬ್ಬಿ ಅಂತ ಇವರು ಸರ್ಕಾರಕ್ಕೂ ಮನವಿ ಕೊಟ್ಟಿದ್ದರು. ಈ ತಿಂಗಳು ನಾವು ಹೋರಾಟ ಕೈಗೆತ್ತಿಕೊಂಡು, ಅಹಮದಾಬಾದ್‌ನಲ್ಲಿ ರಸ್ತೆ ತಡೆ ಚಳುವಳಿ ಶುರುಮಾಡಿದೆವು. ಪೊಲೀಸರ ದೌರ್ಜನ್ಯಕ್ಕೂ ಹೆದರಲಿಲ್ಲ. ಕೊನೆಗೆ ಸರ್ಕಾರ ಮಣಿದು ಭೂಮಿಯ ಖಾತೆ ಪತ್ರಗಳನ್ನು ಸಂಬಂಧಪಟ್ಟವರಿಗೆ ಕೊಡಲು ಒಪ್ಪಿತು. ಈಗಾಗಲೇ ಜಮೀನನ್ನು ಅಳತೆ ಮಾಡಿ, ಖಾತೆ ಮಾಡಿ ಕೊಡುತ್ತಿದ್ದಾರೆ.

ಪ್ರಶ್ನೆ : ಸೆಪ್ಟೆಂಬರ್ ಹದಿನಾರನೇ ತಾರೀಖು ನೀವು ದೆಹಲಿಯಿಂದ ಅಹಮದಾಬಾದ್‌ಗೆ ಬರುವಾಗ ನಿಮ್ಮನ್ನ ಅರೆಸ್ಟ್ ಮಾಡಿದ್ದರಲ್ಲ, ಯಾಕೆ?

ನಾನು ಅರೆಸ್ಟ್ ಆಗಿದ್ದು ಗುಜರಾತ್ ಮಾದರಿಯ ಬಗ್ಗೆ ಮಣಗಟ್ಟಲೆ ವಿಷಯವನ್ನ ಹೇಳುತ್ತೆ. ಒಟ್ಟಿನಲ್ಲಿ ಸರ್ಕಾರ ಗುಜರಾತ್ ದಲಿತರ ಪ್ರತಿಭಟನೆಯಿಂದ ಎಷ್ಟೊಂದು ಬೆಚ್ಚಿದೆ ಅನ್ನೋದಕ್ಕೆ ಸಾಕ್ಷಿ ಇದು.

ಪ್ರಶ್ನೆ : ನಿಮಗನಿಸುವಂತೆ ಇವತ್ತು ದಲಿತ ರಾಜ–ಕಾರಣ ಎದುರಿಸುತ್ತಿರುವ ದೊಡ್ಡ ಸವಾಲು ಯಾವುದು?

ಮನುವಾದಕ್ಕೆಧಿಕ್ಕಾರ ಅನ್ನೋ ತರದ ಘೋಷಣೆಗಳಲ್ಲೇ ದಲಿತ ರಾಜಕಾರಣ ಸಿಕ್ಕಿಹಾಕಿಕೊಂಡು ಬಿಟ್ಟಿತು ಅಂತ ಒಮ್ಮೊಮ್ಮೆ ಅನಿಸುತ್ತದೆ. ಅದು ಸೀಮಿತ ಮಟ್ಟವನ್ನು ಮೀರಿ ಮುಂದಕ್ಕೆ ಹೋಗಬೇಕಿತ್ತು; ಆದರೆ ಐಡೆಂಟಿಟಿ ಪಾಲಿಟಿಕ್ಸ್‌ನ ಹುದುಲಿನೊಳಕ್ಕೆ ಸಿಕ್ಕಿಬಿತ್ತು. ಈಗ ದಲಿತ ರಾಜಕಾರಣದ ಮುಂದಿರುವ ಸವಾಲೆಂದರೆ, ತನ್ನತನವನ್ನು ಹುಡುಕಿಕೊಳ್ಳೋದು ಮತ್ತು ದಲಿತರ ನಿತ್ಯದ ಬದುಕಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳೋದು. ಜೊತೆಗೆ ಸಾಮಾಜಿಕ ನ್ಯಾಯದೊಂದಿಗೆ ಆರ್ಥಿಕ ನ್ಯಾಯಕ್ಕೋಸ್ಕರವೂ ಹೋರಾಡೋದು.

ಪ್ರಶ್ನೆ : ದಲಿತರಲ್ಲಿ ಒಗ್ಗಟ್ಟು ಮೂಡುವುದು ಕಷ್ಟವೆನ್ನುತ್ತೀರಾ? ಹೌದೆನ್ನುವುದಾದರೆ, ನೀವು ಅದನ್ನು ಎದುರಿಸಲು ಮಾಡಿಕೊಂಡಿರುವ ಸಿದ್ಧತೆ ಏನು?

ದಲಿತರಲ್ಲಿ ಒಗ್ಗಟ್ಟು ಮೂಡುವುದು ಕಷ್ಟ ಅನ್ನೋದು ನಿಜ. ಜಗತ್ತಿನ ದಲಿತರೆಲ್ಲ ಒಂದಾಗಿ ಅನ್ನೋದನ್ನ ನಾವು ನಮ್ಮ ಘೋಷಣೆಯಾಗಿ ಮಾಡಿಕೊಂಡಿದ್ದೇವೆ. ಆದರೆ ಇತ್ತೀಚಿನ ಎನ್‌ಜಿಓ ಸಮೀಕ್ಷೆಯೊಂದು ದಲಿತರಲ್ಲೇ ಸಣ್ಣಪುಟ್ಟ ಜಾತಿಗಳ ಮೇಲೆ ‘ಮುಂದುವರಿದ’ ದಲಿತರ ತಾರತಮ್ಯ ಧೋರಣೆ ವ್ಯಾಪಕವಾಗಿರುವುದನ್ನು ಹೇಳುತ್ತಿದೆ. ಈ ಆಂತರಿಕ ಬಿಕ್ಕಟ್ಟನ್ನೂ ಜರೂರಾಗಿ ಪರಿಹರಿಸಬೇಕಿದೆ. ಇದಾಗದೆ ದಲಿತ ವಿಮೋಚನೆಗೆ ಅರ್ಥ ಇಲ್ಲ. ಮುಂದಿನ ದಿನಗಳಲ್ಲಿ ಬೇರೆ ಬೇರೆ ತರದ ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಳ್ಳಲಿದ್ದೇವೆ. ಅಂತರ್ಜಾತಿ ಮದುವೆಯಂತಹ ಕಾರ್ಯಕ್ರಮಗಳಿಗೆ ಹೆಚ್ಚು ಆದ್ಯತೆ ಕೊಡುತ್ತೇವೆ. ಫೆಬ್ರುವರಿ ತಿಂಗಳ ಪ್ರೇಮಿಗಳ ದಿನವನ್ನು ಅಂತರ್ಜಾತಿ ಮದುವೆಗಳಿಗೆ ಉತ್ತೇಜನ ಕೊಡಲು ಬಳಸಿಕೊಳ್ಳುತ್ತೇವೆ. ಇದು ಜಾತಿವಿರೋಧಿ ರಾಜಕಾರಣಕ್ಕೂ ನೆರವಾಗಲಿದೆ ಅಂದುಕೊಳ್ಳುತ್ತೇನೆ.

ಪ್ರಶ್ನೆ : ವೈಯಕ್ತಿಕ ಪ್ರಗತಿಯೇ ಒಂದು ಹಂತದಲ್ಲಿ ಸಮುದಾಯದ ಪ್ರಗತಿಗೆ ತೊಡರುಗಾಲಾಗುತ್ತಿದೆ ಅನ್ನೋದು ದಲಿತ ರಾಜಕಾರಣದ ಬಗ್ಗೆ ಇರುವ ಟೀಕೆ. ದಲಿತನೊಬ್ಬ ಅಧಿಕಾರಕ್ಕೆ ಬಂದರೆ ದಮನಿತರ ಪರವಾದ ದನಿಗೆ ಸೋಲು ಕೂಡಿತು ಅಂತ ಜನ ಭಾವಿಸುತ್ತಿದ್ದರೆ, ಅಧಿಕಾರದಿಂದ ದಕ್ಕುವ ಸವಲತ್ತುಗಳು ಸಮುದಾಯದ ತನಕ ತಲುಪದೆ ಹೋಗುವುದೂ ಇದೆಯಲ್ಲ?

ಇದನ್ನು ನಾನೂ ಒಪ್ಪುತ್ತೇನೆ. ಆದರೆ ಭೂರಹಿತರ ಪರವಾಗಿ ನಡೆಯುತ್ತಿರುವ ರಾಜಕಾರಣ ಹೀಗೆ ವೈಯಕ್ತಿಕ ಮಟ್ಟದಲ್ಲಿಲ್ಲ; ಅದು ಹೆಚ್ಚು ಸಮುದಾಯ ಕೇಂದ್ರಿತವಾಗಿದೆ. ದಲಿತ ರಾಜಕಾರಣಿಗಳೂ ಬುದ್ಧಿಜೀವಿಗಳೂ ಅಧಿಕಾರಕ್ಕೆ ಬಂದ ಮೇಲೆ ಸಮುದಾಯದ ಏಳಿಗೆಯನ್ನು ಮರೆತಿದ್ದನ್ನು ಈ ತನಕ ನೋಡಿದ್ದೇವೆ. ಆದರೆ ಹೋರಾಟಗಳು ಸಮುದಾಯದ ಏಳಿಗೆಯನ್ನೇ ಗಮನದಲ್ಲಿಟ್ಟುಕೊಂಡು ರೂಪುಗೊಳ್ಳಬೇಕು ಮತ್ತು ಅದಕ್ಕೆ ಬದ್ಧವಾಗಿರಬೇಕು ಅಂತ ದಲಿತರಿಗೀಗ ಮನವರಿಕೆಯಾಗುತ್ತಿದೆ. ಅಲ್ಲದೆ ರಾಜಕಾರಣಿಗಳಿಂದಲೇ ಎಲ್ಲವೂ ಸಾಧ್ಯ ಅಂತ ದಲಿತ ಚಳುವಳಿ ಯಾವತ್ತೂ ನಂಬಿಕೊಂಡು ಕುಳಿತಿಲ್ಲ.

ಪ್ರಶ್ನೆ : ಇದು ಐಡೆಂಟಿಟಿ ಪಾಲಿಟಿಕ್ಸ್‌ನ ಮಿತಿ ಅಲ್ಲವೇ?

ಒಂದು ಮಟ್ಟಿಗೆ ಹೌದು. ಐಡೆಂಟಿಟಿ ಪಾಲಿಟಿಕ್ಸ್‌ನಲ್ಲಿ ಕೆಲವು ದೋಷಗಳಿವೆ. ಒಳ್ಳೆಯ ಕೆಟ್ಟ ಕೆಲವು ಆಯಾಮಗಳೂ ಇವೆ. ರಾಜಕೀಯ ಮಾಡುವಾಗ ಅವನ್ನೆಲ್ಲ ನಾವು ಪರಿಶೀಲಿಸಿಯೇ ಮುಂದುವರೆಯಬೇಕಾಗುತ್ತದೆ.

ಪ್ರಶ್ನೆ : ಕಮ್ಯುನಿಸ್ಟರ ಬಗ್ಗೆ ದಲಿತರಲ್ಲಿ ಭಿನ್ನಾಭಿಪ್ರಾಯ ಇರುವಂತಿದೆ. ಕಮ್ಯುನಿಸ್ಟರು ಜಾತಿ ಪ್ರಶ್ನೆಯನ್ನ ಹಿನ್ನೆಲೆಗೆ ದೂಡಿಬಿಟ್ಟಿದ್ದಾರೆ ಅನ್ನೋದು ಅಂಬೇಡ್ಕರ್‌ವಾದಿಗಳ ಆರೋಪ. ಕಮ್ಯುನಿಸ್ಟರ ಬಗ್ಗೆ ನಿಮ್ಮ ನಿಲುವೇನು?

ಕಮ್ಯುನಿಸ್ಟರನ್ನು ನಮ್ಮ ಹೋರಾಟದ ಜೊತೆ–ಗಾರರು ಎಂದು ನಾನಾದರೂ ಭಾವಿಸುತ್ತೇನೆ. ಇದು ಕಮ್ಯುನಿಸ್ಟರು ದಲಿತರ ಜೊತೆ ಸೇರುವ ಅಥವಾ ದಲಿತರು ಕಮ್ಯುನಿಸ್ಟರೊಂದಿಗೆ ಹೋಗುವ ಪ್ರಶ್ನೆ ಅಲ್ಲ. ಇದನ್ನು ದಲಿತರ ಎಡಪಂಥೀಯತೆಯ ವಿಸ್ತರಣೆ ಅಂತ ಬೇಕಾದರೆ ಕರೆಯಿರಿ. ಅಂ–ದರೆ ವರ್ಗ ಹೋರಾಟವನ್ನು ಅರ್ಥೈಸಿಕೊಳ್ಳುವ ತೀಕ್ಷ್ಣ ವಿಧಾನ ಇದು. ವರ್ಗರಹಿತ ಸಮಾಜವನ್ನು ಸೃಷ್ಟಿಸುವುದರಲ್ಲಿ ನಾವು ಸೋತರೂ ಕೊನೇಪಕ್ಷ ಈಗ ಇರುವುದಕ್ಕಿಂತ ಕಡಿಮೆ ಅಸಮಾನತೆಯಿರುವ ಸಮಾಜವನ್ನು ಸೃಷ್ಟಿಸುವ ಗುರಿಯನ್ನಾದರೂ ಇಟ್ಟುಕೊಳ್ಳಬೇಕಾಗುತ್ತದೆ. ‘ದನದ ಬಾಲ ನೀವೇ ಇಟ್ಟುಕೊಳ್ಳಿ, ನಮಗೆ ಭೂಮಿ ಕೊಡಿ’ ಎನ್ನುವ ನಮ್ಮ ಘೋಷಣೆ ಮತೀಯವಾದಿ ರಾಜಕಾರಣಕ್ಕೆ ವಿರುದ್ಧವಾಗಿರುವಂತೆ ನಮ್ಮ ಬದುಕಿನ ಪ್ರಶ್ನೆಗಳನ್ನೂ ಮುಂದಕ್ಕೆ ಒಡ್ಡುತ್ತಿದೆಯಲ್ಲ...

ಹಾಗೆ ನೋಡುವುದಾದರೆ, ಭಾರತದ ಕಮ್ಯುನಿಸ್ಟರೂ ಕಡೆಗಣಿಸಲಾಗದ ತಪ್ಪುಗಳನ್ನು ಮಾಡಿದ್ದಾರೆ. ಅಂಬೇಡ್ಕರ್‌ವಾದಿ ರಾಜಕಾರಣವೂ ಕೆಲವು ತಪ್ಪುಗಳನ್ನು ಮಾಡಿದೆ. ನಾವು ಕಮ್ಯುನಿಸ್ಟರನ್ನು ಅವರ ತಪ್ಪುಗಳಿಗೆ ಟೀಕೆ ಮಾಡೋರೇ. ಆದರೆ ಅವರು ನಮ್ಮ ಜೊತೆ ಬರುವುದಾದರೆ ಅವರನ್ನು ತಿರಸ್ಕರಿಸುವ ಮಟ್ಟಕ್ಕೆ ನಾನಂತೂ ಹೋಗುವುದಿಲ್ಲ. ಯಾವುದೇ ಜನಪರ ಚಳುವಳಿಗೆ ಅಷ್ಟರ ಮಟ್ಟಿಗಿನ ಮುಕ್ತ ಮನಸ್ಸು ಇರಬೇಕು. ನಮಗಂತೂ ಇದೆ. ದಲಿತರ ಸಮಸ್ಯೆಗಳನ್ನು ಗಂಭೀರವಾಗಿ ಮತ್ತು ನಿರಂತರವಾಗಿ ಕೈಗೆತ್ತಿಕೊಂಡು ಹೋರಾಟ ಮಾಡಿದಾಗ ಮಾತ್ರ ದಲಿತರು ಕಮ್ಯುನಿಸ್ಟರನ್ನು ನಂಬಲು ಶುರುಮಾಡಬಹುದು. ಇದಕ್ಕೆ ಸ್ವಲ್ಪ ಕಾಲ ಹಿಡಿಯಬಹುದು.

ಪ್ರಶ್ನೆ : ಇದೆಲ್ಲ ಸೈದ್ಧಾಂತಿಕವಾಗಿ ಚೆನ್ನಾಗಿಯೇನೋ ಕಾಣುತ್ತಿದೆ. ಆದರೆ ಪ್ರಯೋಗವಾಗಿ ಯಶಸ್ವಿಯಾಗೋದು ಕಷ್ಟ ಅನಿಸುತ್ತೆ. ನಾಯಕತ್ವ ತಮ್ಮ ಕೈಯಲ್ಲಿದ್ದಾಗ ಮಾತ್ರ ಕಮ್ಯುನಿಸ್ಟರು ನಿರಾತಂಕವಾಗಿರುತ್ತಾರೆ ಅಂತ ಇಲ್ಲಿ ಚರಿತ್ರೆ ಹೇಳುತ್ತಿದೆಯಲ್ಲ?

ಇರಬಹುದು. ಆದರೆ ನಮ್ಮ ವಿಷಯದಲ್ಲಿ ಹಾಗಿಲ್ಲವಲ್ಲ! ಊನಾ ದಲಿತ ದೌರ್ಜನ್ಯ ಹೋರಾಟ ಸಮಿತಿಗೆ ಸಂಬಂಧಪಟ್ಟಂತೆ ಇಲ್ಲಿ ನಾಯಕತ್ವ ನಮ್ಮದೇ, ಕಮ್ಯುನಿಸ್ಟರು ನಮ್ಮ ಜೊತೆಗಿದ್ದಾ–ರೆ ಅಷ್ಟೆ. ನನಗನ್ನಿಸುವುದೇನೆಂದರೆ, ಯಾವುದೇ ಚಳುವಳಿಯಿರಲಿ, ಸಾಮಾಜಿಕ ನ್ಯಾಯದ ಪರವಾಗಿ ಬಹಳ ತೀವ್ರವಾದ ಬದ್ಧತೆ ನಮಗಿದ್ದರೆ ಜನ ನಮ್ಮೊಟ್ಟಿಗೆ ಬಂದೇ ಬರುತ್ತಾರೆ. ಅಲ್ಲದೆ ಇನ್ನೊಬ್ಬರನ್ನು ಅರ್ಥ ಮಾಡಿಕೊಳ್ಳುವ ನಮ್ಮ ಸಾಮರ್ಥ್ಯ, ತಿಳುವಳಿಕೆ, ನಮಗಿರುವ ಸ್ಪಷ್ಟತೆ, ಚಳುವಳಿಗಳನ್ನ ರೂಪಿಸುವ ಕ್ಷಮತೆ ಇವೆಲ್ಲ ಬಹಳ ದೊಡ್ಡ ಪಾತ್ರ ವಹಿಸುತ್ತವೆ.

ಪ್ರಶ್ನೆ : ದಲಿತರು ಮುಸ್ಲಿಮರು ಒಂದಾಗುವುದು ಮುಖ್ಯ ಅಂತ ನೀವು ಪದೇ ಪದೇ ಹೇಳುತ್ತಿದ್ದೀರಿ. ಅದಷ್ಟು ಸುಲಭವೇ?

ರಾಜಕಾರಣದಲ್ಲಿ ಅದಷ್ಟು ಸುಲಭವಲ್ಲ ಅಂತ ನಾನೂ ಒಪ್ಪುತ್ತೇನೆ. ಆದರೆ ಸದ್ಯಕ್ಕಂತೂ ಅದೊಂದು ಸಾ ಧ್ಯತೆಯಾಗಿ ತೋರುತ್ತಿದೆ. 2002ರ ಗುಜರಾತ್ ಗಲಭೆಗಳಲ್ಲಿ ದಲಿತರೂ ಭಾಗಿಗಳಾಗಿದ್ದರು. ಸಂಖ್ಯೆ ತೀರಾ ಕಡಿಮೆ ಇರಬಹುದು, ಆದರೆ ದಲಿತರೂ ಭಾಗವಹಿಸಿದ್ದರು ಅನ್ನೋ ಸಂಗತಿ ಇವತ್ತಿಗೂ ನಮ್ಮನ್ನು ನಾಚಿಕೆಯಿಂದ ತಲೆ ತಗ್ಗಿಸುವಂತೆ ಮಾಡಿದೆ. ದಲಿತರ ಈ ಕೇಸರೀಕರಣವನ್ನೂ ಎದುರಿಸಬೇಕಾದ ಸವಾಲು ಈಗ ನಮ್ಮ ಮುಂದಿದೆ. ಇದನ್ನು ತಡೆಗಟ್ಟಲು ದಲಿತರು ಮುಸ್ಲಿಮರು ಒಂದಾಗುವುದು ಮುಖ್ಯ. ಇದರಲ್ಲೇ ಮುಸ್ಲಿಮರ ಒಳಿತಿದೆ; ದಲಿತರದೂ. ನನಗಿಬ್ಬರು ತಂಗಿಯರಿದ್ದರೆ ನಾನು ಒಬ್ಬಳನ್ನು ವಾಲ್ಮೀಕಿ ಜಾತಿಯವನಿಗೆ, ಇನ್ನೊಬ್ಬಾಕೆಯನ್ನು ಮುಸಲ್ಮಾನನಿಗೆ ಮದುವೆ ಕೊಡುತ್ತಿದ್ದೆ ಅಂತ ನಾನೊಮ್ಮೆ ಹೇಳಿದ್ದೆ. ಅಂತರ್ಜಾತೀಯ, ಅಂತರ್ಧರ್ಮೀಯ ಮದುವೆಗಳು ದಲಿತರಲ್ಲಿ ಸಾಮಾನ್ಯವಾಗಬೇಕು. ಈಗ ಕಲ್ಪನೆಯಂತೆ ಕಾಣುತ್ತಿರುವುದು ಮುಂದೊಂದು ದಿನ ವಾಸ್ತವವಾಗಬಾರದು ಎಂದೇನಿಲ್ಲವಲ್ಲ?

ಪ್ರಶ್ನೆ : ದಲಿತರು ಸಂಘ ಪರಿವಾರದೊಂದಿಗೆ →

“ಕಮ್ಯುನಿಸ್ಟರನ್ನು ನಮ್ಮ ಹೋರಾಟದ ಜೊತೆಗಾರರು ಎಂದು ನಾನಾದರೂ ಭಾವಿಸುತ್ತೇನೆ. ಇದು ಕಮ್ಯುನಿಸ್ಟರು ದಲಿತರ ಜೊತೆ ಸೇರುವ ಅಥವಾ ದಲಿತರು ಕಮ್ಯುನಿಸ್ಟರೊಂದಿಗೆ ಹೋಗುವ ಪ್ರಶ್ನೆ ಅಲ್ಲ. ಇದನ್ನು ದಲಿತರ ಎಡಪಂಥೀಯತೆಯ ವಿಸ್ತರಣೆ ಅಂತ ಬೇಕಾದರೆ ಕರೆಯಿರಿ. ಅಂದರೆ ವರ್ಗ ಹೋರಾಟವನ್ನು ಅರ್ಥೈಸಿಕೊಳ್ಳುವ ತೀಕ್ಷ್ಣ ವಿಧಾನ ಇದು... ದಲಿತರ ಸಮಸ್ಯೆಗಳನ್ನು ಗಂಭೀರವಾಗಿ ಮತ್ತು ನಿರಂತರವಾಗಿ ಕೈಗೆತ್ತಿಕೊಂಡು ಹೋರಾಟ ಮಾಡಿದಾಗ ಮಾತ್ರ ದಲಿತರು ಕಮ್ಯುನಿಸ್ಟರನ್ನು ನಂಬಲು ಶುರು ಮಾಡಬಹುದು. ಇದಕ್ಕೆ ಸ್ವಲ್ಪ ಕಾಲ ಹಿಡಿಯಬಹುದು.”



ಕಾವೇರಿ ವಿವಾದ : ಕೆಲವು ಪ್ರಶ್ನೆಗಳು... ಪುಟ 9 ರಿಂದ

ಉಪಯೋಗ. ಚೋಳ ಸಾಮ್ರಾಜ್ಯಗಳಿಗಿಂತ ಹಿಂದಿನದು. ನದಿ ಅಲ್ಲಿ ಸಮತಲವಾಗಿ, ಅನೇಕ ಕವಲುಗಳಾಗಿ ಹರಿಯುವುದರಿಂದ ಅಣೆಕಟ್ಟುಗಳಿಲ್ಲದೆ ಕಾಲುವೆಗಳ ಮೂಲಕ ನೀರಾವರಿ ಮಾಡಬಹುದಾದ ಅನುಕೂಲವಿತ್ತು. ಆದರೆ ಕರ್ನಾಟಕದ ಮೇಲ್ಕಣಿವೆಯಲ್ಲಿ ನೀರು ನೆಲಮಟ್ಟದಿಂದ ಹಲವು ಹತ್ತು ಅಡಿಗಳ ಆಳದಲ್ಲಿ ಹರಿಯುವುದರಿಂದ ತಲಕಾಡಿನಂತಹ ಕೆಲಭಾಗ ಬಿಟ್ಟರೆ ನೀರಾವರಿ ಬಹಳ ಕಡಿಮೆ. ದೊಡ್ಡ ಅಣೆಕಟ್ಟುಗಳನ್ನು ಕಟ್ಟುವ ತಂತ್ರಜ್ಞಾನ ಇತ್ತೀಚಿಗೆ ಲಭ್ಯವಾದ ಮೇಲೆಯೇ ಇಲ್ಲಿ ನೀರಾವರಿ ಸಾಧ್ಯವಾಗಿದ್ದು. ಇದೇ ಎಲ್ಲ ನ್ಯಾಯಾಂಗದ ತೀರ್ಪುಗಳಲ್ಲಿ ಕರ್ನಾಟಕದ ನೀರಿನ ಪಾಲಿನ ಬಗ್ಗೆ ಬರುವ ನಿರ್ದೇಶನಗಳ ಮೂಲ. ಈ ನ್ಯಾಯಶಾಸ್ತ್ರದ ಮತ್ತು ಅದನ್ನು ಆಧರಿಸಿದ ಕಾನೂನುಗಳಲ್ಲಿಯೇ ಮೂಲಭೂತ ಬದಲಾವಣೆಯಾಗಬೇಕು. ಅದು ನಮ್ಮೆಲ್ಲರ ಒತ್ತಾಯವಾಗಬೇಕು. ಅದನ್ನು ಬಿಟ್ಟು ವಕೀಲರುಗಳನ್ನು ದೂರಿ ಪ್ರಯೋಜನವಿಲ್ಲ. ಈ ತತ್ವದ ಆಧಾರದಲ್ಲಿಯೇ ಕಾವೇರಿ ನದಿ ನಿರ್ವಹಣಾ ಸಂಸ್ಥೆಯನ್ನು ಅಸ್ತಿತ್ವಕ್ಕೆ ತರುವ ತೀರ್ಪು ಬಂದಿದೆ. ಹುತ್ತವ ಬಡಿದರೆ ಹಾವು ಸಾಯುವುದಿಲ್ಲ ಎಂಬುದನ್ನು ಅರಿಯಬೇಕು.

ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಬಾರದಂತೆ ಅಂತರ–ರಾಜ್ಯ ವಿವಾದ ಪರಿಹರಿಸುವುದು ಹೇಗೆ?

ನಮ್ಮ ಸಂವಿಧಾನದಲ್ಲಿ ಭಾರತವೊಂದು ಒಕ್ಕೂಟ ಎಂದು ಹೇಳಲಾಗಿದ್ದರೂ ಅತಿ ಕೇಂದ್ರೀಕೃತ ವ್ಯವಸ್ಥೆಯನ್ನೇ ರೂಪಿಸಿದೆ. ಸ್ವಾತಂತ್ರ್ಯಾನಂತರ ಆಳಿದ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಒಕ್ಕೂಟ ವ್ಯವಸ್ಥೆಯನ್ನು ದುರ್ಬಲಗೊಳಿಸಿವೆ. ಈಗಿನ ಮೋದಿ ಸರ್ಕಾರವಂತೂ ರಾಜ್ಯ ಸರ್ಕಾರಗಳನ್ನು ಕೇಂದ್ರದ ಬಾಲಂಗೋಚಿಯಾಗಿಸ ಬಯಸುತ್ತಿದೆ. ಇದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಆದರೆ ಇಲ್ಲಿ ಅದಕ್ಕೆ ಅವಕಾಶವಿಲ್ಲ. ಆದರೆ ಸಂವಿಧಾನ ನಮ್ಮ ಒಕ್ಕೂಟ ವ್ಯವಸ್ಥೆಯನ್ನು ಕಾಯ್ದುಕೊಳ್ಳಲು ರೂಪಿಸಿದ ಕೆಲ ಸಾಂವಿಧಾನಿಕ ಸಂಸ್ಥೆಗಳಿವೆ. ರಾಜ್ಯ ಸಭೆಯೇ ಅಂತಹದೊಂದು ಸಂಸ್ಥೆ. ಅಂತರ–ರಾಜ್ಯ ಪರಿಷತ್ತು (ಸಂವಿಧಾನ ಬದ್ಧವಾದ ಇಂಟರ್ ಸ್ಟೇಟ್ ಕೌನ್ಸಿಲ್), ರಾಷ್ಟ್ರೀಯ ಸಮಗ್ರತಾ ಪರಿಷತ್ತು, ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತು ಇಂತಹವು. ಇದರಲ್ಲಿ ಮುಖ್ಯವಾಗಿ ಅಂತರ–ರಾಜ್ಯ ಪರಿಷತ್ತು ರಾಜ್ಯಗಳ ನಡುವಣ ವಿವಾದಗಳನ್ನು ನಿರ್ವಹಿಸುವ ಕರ್ತವ್ಯಬದ್ಧವಾದ ಸಂಸ್ಥೆ. ಆದರೆ ಇದನ್ನು ಕಾಂಗ್ರೆಸ್, ಬಿಜೆಪಿ ಎರಡೂ ನಿಷ್ಕ್ರಿಯಗೊಳಿಸಿವೆ. ಅಂತಹದೊಂದು ಇದೆಯೇ ಎಂದು ಕೇಳುವಂತಾಗಿದೆ. ಇಂತಹ ಸಂಸ್ಥೆಗಳನ್ನು ಕ್ರಿಯಾಶೀಲಗೊಳಿಸಬೇಕು. ಇವುಗಳಿಗೆ ಖಾಯಂರೂಪ ನೀಡಿ ಅದರ ಅಡಿಯಲ್ಲಿ ನದಿ ವಿವಾದಗಳಿಗೆ ಸಂಬಂಧಿಸಿದ ಖಾಯಂ ಸಮಿತಿಯನ್ನು ರಚಿಸಬೇಕು. ●

ರೈತರಿಗೆ ತಲಾ 50 ಸಾವಿರ ಮತ್ತು ಕೃಷಿಕೂಲಿಕಾರರಿಗೆ... ಪುಟ 9 ರಿಂದ

ಜನತೆಯ ಭಾವೋದ್ವೇಗ ಮತ್ತು ಆತಂಕವನ್ನು ನಿವಾರಿಸಲು ಯತ್ನಿಸದಿರುವುದು ಅವುಗಳ ದುರುದ್ದೇಶವನ್ನು ಬಯಲಿಗಿಡುತ್ತದೆ.

ಆದ್ದರಿಂದ ತಕ್ಷಣವೇ ಕಾವೇರಿಯ ಈ ವಿವಾದವನ್ನು ಶಾಶತವಾಗಿ ಇತ್ಯರ್ಥ ಪಡಿಸಲು ಮತ್ತು ಅದು ಸಂಧಾನದ ಮೂಲಕ ಇತ್ಯರ್ಥವಾಗುವವರೆಗೆ ಕೇಂದ್ರ ಸರಕಾರ ಮತ್ತು ಪ್ರಧಾನ ಮಂತ್ರಿಗಳು ನಿರಂತರವಾಗಿ ಕಾವೇರಿ ಕೊಳ್ಳದ ಮುಖ್ಯ ಮಂತ್ರಿಗಳು ಸರಕಾರಗಳ ಜೊತೆಯಲ್ಲಿ ಮಾತುಕತೆಯನ್ನು ಮುಂದುವರೆಸಬೇಕು. ಸಮಸ್ಯೆ ಉಲ್ಬಣಿಸಿದಾಗಲಷ್ಟೇ ರಾಜಕೀಯ ಲಾಭದ ನಾಟಕವಾಡುವುದನ್ನು ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಕೃಷಿ ಮತ್ತು ಜಲಸಂಪನ್ಮೂಲಗಳನ್ನು ಒದಗಿಸುವ ನೀತಿಗಳನ್ನು ಕೈ ಬಿಡಬೇಕು. ಅದೇ ರೀತಿ, ನದಿ ಹಾಗೂ ಭಾಷೆ ಆಧಾರದಲ್ಲಿ ಒಡೆದಾಳುವ ನೀತಿಯನ್ನು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮತ್ತು ಅವುಗಳ ಆಡಳಿತ ಮತ್ತು ವಿರೋಧ ಪಕ್ಷಗಳು ಕೈ ಬಿಡಬೇಕು.

ರೈತರು ಹಾಗೂ ಕೃಷಿ ಕೂಲಿಕಾರರ ಸಾಂಸ್ಥಿಕ ಹಾಗೂ ಖಾಸಗಿಯ ಎಲ್ಲಾ ಸಾಲವನ್ನು ಮನ್ನಾ ಮಾಡಲು ಮತ್ತು ರೈತರು ಹಾಗೂ ಗುತ್ತಿಗೆ ಆಧಾರದ ಬೆಲೆಗಾರರಿಗೆ ತಲ 50 ಸಾವಿರ ಪರಿಹಾರವನ್ನು ಮತ್ತು ಕೃಷಿಕೂಲಿಕಾರರಿಗೆ ಕನಿಷ್ಠ 25 ಸಾವಿರ ರೂಗಳ ಪರಿಹಾರವನ್ನು ಘೋಷಿಸಬೇಕು.

ಸುಪ್ರಿಂ ಕೋರ್ಟ ಮುಂದೆ ಪೆಂಡಿಂಗ್ ಇರುವ ಕಾವೇರಿ ನದಿ ನೀರು ಹಂಚಿಕೆಯ ಕೇಸನ್ನು ತ್ವರಿತವಾಗಿ ಮುಗಿಸಲು ಅಗತ್ಯ ಕ್ರಮಗಳನ್ನು ವಹಿಸಬೇಕು. ●

➔ **ಕೈಜೋಡಿಸುತ್ತಿರುವ ವಿದ್ಯಮಾನದ ಬಗ್ಗೆ ಏನು ಹೇಳುತ್ತೀರಾ?*–**

ಕ್ಷಮಿಸಿ, ಮುಟ್ಠಾಳತನದ ನಡೆಗಳನ್ನು ವಿವರಿಸೋಕೆ ನನಗೆ ಕಷ್ಟವಾಗುತ್ತೆ.

ಪ್ರಶ್ನೆ : ನಿಮ್ಮ ಮುಂದಿನ ಯೋಜನೆಗಳು?

ಸಂಘ ಪರಿವಾರ ವಿರೋಧಿ ರಾಜಕಾರಣವನ್ನ ಗುಜರಾತಿನಲ್ಲಿ ಬೆಳೆಸುವುದರ ಬಗ್ಗೆ ನಮಗೆ ಸ್ಪಷ್ಟ ನಿಲುವುಗಳಿವೆ. ಗುಜರಾತಿನ ಆಚೆಗೂ ಇದನ್ನ ಒಯ್ಯುವ ಗುರಿ ಇದೆ. ನೋಡಬೇಕು ಏನಾಗುತ್ತೆ ಅಂತ. ಈ ತಿಂಗಳ ಇಪ್ಪತ್ತೇಳಕ್ಕೆ ಗುಜರಾತಿನ ದಲಿತರನ್ನೆಲ್ಲ ದೊಡ್ಡಮಟ್ಟದಲ್ಲಿ ಸೇರಿಸೋಕೆ ಪ್ರಯತ್ನಿಸುತ್ತಿದ್ದೇವೆ. ಹಿಂದುಳಿದವರು, ಆದಿವಾಸಿಗಳು, ಮುಸ್ಲಿಮರು, ರೈತರು, ಕಾರ್ಮಿಕ ಸಂಘಟನೆಗಳು ದಲಿತರ ಜೊತೆಯಲ್ಲಿ ಬಂದರೆ ಸಂಘ ಪರಿವಾರ ಮತ್ತು ಬಿಜೆಪಿಯ ವಿರುದ್ಧ ದೊಡ್ಡ ಮೈತ್ರಿಕೂಟ ರಚನೆಯಾಗಬಹುದು. ಈ ಸಮ್ಮೇಳನದಲ್ಲಿ ಸಾಂಸ್ಕೃತಿಕ ಪ್ರಶ್ನೆಗಳನ್ನು, ಜೊತೆಗೆ ಜನರ ದಿನನಿತ್ಯದ ಬದುಕಿಗೆ, ಅವರ ಜೀವನಾಧಾರಕ್ಕೆ ಪೂರಕವಾದ ಪ್ರಶ್ನೆಗಳನ್ನು ಮುನ್ನೆಲೆಗೆ ತರಲಿದ್ದೇವೆ. ಗುಜರಾತ್ ಮಾದರಿಯ ಪೊಳ್ಳುತನವನ್ನು ಬಯಲಿಗೆಳೆಯಲಿದ್ದೇವೆ. ಅಕ್ಟೋಬರ್ ಒಂದನೇ ತಾರೀಖು, ಭೂರಹಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಐದು ಎಕರೆ ಭೂಮಿಯನ್ನು ನೀಡಬೇಕೆಂಬ ನಮ್ಮ ಬೇಡಿಕೆಯ ಭಾಗವಾಗಿ ನರೇಂದ್ರ ಮೋದಿಯವರ ವಿಧಾನಸಭಾ ಕ್ಷೇತ್ರವಾಗಿದ್ದ ಅಹಮದಾಬಾದ್‌ನ ಮಣಿನಗರ್‌ನಲ್ಲಿ ರೈಲುತಡೆ ಚಳುವಳಿಯನ್ನು ಹಮ್ಮಿಕೊಂಡಿದ್ದೇವೆ. ●

ಪರಂಪರೆಯ ವೈಭವೀಕರಣ ಮತ್ತು ಲಿಂಗ ಸಮಾನತೆ... ಪುಟ 6 ರಿಂದ

ಬಗೆಯ ತಾರತಮ್ಯಗಳನ್ನು ಎದುರಿಸುತ್ತಿದ್ದಾರೆ ಮತ್ತು ಹಿಂಸೆಯನ್ನು ಅನುಭವಿಸುತ್ತಿದ್ದಾರೆ.

ಪರಂಪರೆಯ ವೈಭವೀಕರಣ

ಈಗಾಗಲೆ ಹೇಳಿರುವಂತೆ ನಮ್ಮ ಸಮಾಜದಲ್ಲಿ ಹಕ್ಕುಗಳನ್ನು, ಅದರಲ್ಲೂ ಮಹಿಳೆಯರ ಹಕ್ಕುಗಳನ್ನು ಶಾಸನಗಳು ನಿಯಂತ್ರಿಸುವುದಕ್ಕೆ ಬದಲಾಗಿ ಸಂಪ್ರದಾಯ–ಪರಂಪರೆ ನಿಯಂತ್ರಿಸುತ್ತಿವೆ. ಇಂದು ನಮ್ಮ ದೇಶದಲ್ಲಿ ಪರಂಪರೆಯ–ಸಂಪ್ರದಾಯದ ಸಂಗತಿಗಳನ್ನು ಪೋಷಿಸುವ, ಊರ್ಜಿತಗೊಳಿಸುವ ಮತ್ತು ಸಮಾಜದ ಮೇಲೆ ಹೇರುವ ಕ್ರಮಗಳು ನಡೆಯುತ್ತಿವೆ. ಇವು ಮಹಿಳೆಯರಿಗೆ ಹೆಚ್ಚಿನ ಹಾನಿ ಉಂಟು ಮಾಡುತ್ತಿವೆ. ಲಿಂಗ ಅಸಮಾನತೆಯ ಪರಿಣಾಮವಾಗಿ ನಮ್ಮಲ್ಲಿ ಲಿಂಗ ಅನುಪಾತ ಕೆಳಮಟ್ಟದಲ್ಲಿದೆ ಮತ್ತು 0–6 ವಯೋಮಾನದ ಮಕ್ಕಳ ಲಿಂಗ ಅನುಪಾತ ಕುಸಿಯುತ್ತಿದೆ. ಅನೇಕ ಬಗೆಯ ಸಾಂಪ್ರದಾಯಿಕ ಆಚರಣೆ, ನಂಬಿಕೆಗಳಿಂದಾಗಿ ನಮ್ಮ ಸಮಾಜದಲ್ಲಿ ಅರ್ಧದಷ್ಟು ಮಹಿಳೆಯರು ರಕ್ತಹೀನತೆಯಿಂದ(ಅನಿಮಿಯ) ನರಳುತ್ತಿದ್ದಾರೆ, ಅಪೌಷ್ಟಿಕತೆಯನ್ನು ಎದುರಿಸುತ್ತಿದ್ದಾರೆ. ಅದನ್ನು ಮಹಿಳೆಯರಿಗೆ 'ಸಹಜ'ವಾದುದು ಎಂದು ನಿರ್ಲಕ್ಷ್ಯ ಮಾಡಲಾಗುತ್ತಿದೆ.

ನಮ್ಮದು ಪ್ರಧಾನವಾಗಿ ಶ್ರೇಣೀಕರಣದಿಂದ ಕೂಡಿದ ಸಮಾಜ. ಮಹಿಳೆಯರನ್ನು ಅಖಂಡ ವರ್ಗವನ್ನಾಗಿ ಪರಿಭಾವಿಸಿಕೊಳ್ಳುವುದು ಸಾಧ್ಯವಿಲ್ಲ. ಆದರೆ ಇಂದು ಮಹಿಳೆಯರನ್ನು ಒಂದು ಅಖಂಡ ವರ್ಗವನ್ನಾಗಿ ನೋಡುವ ಕ್ರಮವನ್ನು ಒತ್ತಾಯಿಸಲಾಗುತ್ತಿದೆ.

ಪರಂಪರೆಯನ್ನು ಗೌರವಿಸಬೇಕು. ಅದರಿಂದ ನಾವು ಅನೇಕ ಪಾಠ ಕಲಿಯಬಹುದಾಗಿದೆ. ಆದರೆ ಪರಂಪರೆಯ ಎಲ್ಲ ಸಂಗತಿಗಳೂ ಇಂದು ಪ್ರಸ್ತುತವಾಗುವುದಿಲ್ಲ. ಅದರಲ್ಲಿ ಅನೇಕ ನಕಾರಾತ್ಮಕ ಸಂಗತಿಗಳಿರುತ್ತವೆ. ಅದರಲ್ಲಿ ಸಕಾರಾತ್ಮಕ ಸಂಗತಿಗಳಿದ್ದರೆ ಅವುಗಳನ್ನು ಅನುಸರಿಸಬಹುದು. ಪರಂಪರೆ ಅನ್ನುವ ಕಾರಣಕ್ಕೆ ಅಲ್ಲಿನ ಎಲ್ಲ ಸಂಗತಿಗಳನ್ನು ಕುರುಡು ಕುರುಡಾಗಿ ಅನುಸರಿಸುವುದು ಸರಿಯಲ್ಲ. ಉದಾಹರಣೆಗೆ ನಮ್ಮಲ್ಲಿ ಕೆಲವು ಧಾರ್ಮಿಕ ಸಂಸ್ಥೆಗಳು ಮಹಿಳೆಯರಿಗೆ 'ಉಡಿ' ತುಂಬುವ ಕಾರ್ಯಕ್ರಮಗಳನ್ನು ನಡೆಸುತ್ತವೆ. ಈ ಉಡಿ ತುಂಬುವ ಕಾರ್ಯಕ್ರಮಗಳಲ್ಲಿ ಉಡಿಯನ್ನು ಕೇವಲ 'ಮುತ್ತೈದೆ'ಯರಿಗೆ ಮಾತ್ರ ನೀಡಲಾಗುತ್ತದೆ. ಇದನ್ನು ವಿಧವೆಯರಿಗೆ ನೀಡುವುದಿಲ್ಲ. ಅವರನ್ನು 'ಅಶುದ್ಧ', 'ಸೂತಕ' ಎಂದು ಪರಿಗಣಿಸಲಾಗುತ್ತದೆ. ಇದು ಮಹಿಳೆಯರ ನಡುವೆ ಅಸಮಾನತೆಯನ್ನು ಹುಟ್ಟು ಹಾಕುತ್ತದೆ. ಮುತ್ತೈದೆಯರನ್ನು ಸುಮಂಗಲಿಯರೆಂದು ಮತ್ತು ವಿಧವೆಯರನ್ನು ಅಮಂಗಳೆಯರೆಂದು ವರ್ಗೀಕರಿಸುವ ಕ್ರಮವೇನಿದೆ ಅದು ಸಮಾನತೆಯ ಮೌಲ್ಯಕ್ಕೆ ವಿರುದ್ಧವಾದುದು.

ಪರಂಪರೆಯ ಹೆಸರಿನಲ್ಲಿ ಮೌಢ್ಯಾಚರಣೆಗಳನ್ನು ಇಂದು ಪ್ರೋತ್ಸಾಹಿಸಲಾಗುತ್ತಿದೆ. ಅವುಗಳ ನಿಷೇಧವನ್ನು ಪ್ರತಿಭಟಿಸಲಾಗುತ್ತಿದೆ. ಪರಂಪರೆಯ ಹೆಸರಿನಲ್ಲಿ ಅಸಮಾನತೆಗೆ ಕುಮ್ಮಕ್ಕು ನೀಡಲಾಗುತ್ತಿದೆ. ಅನೇಕ ಸಾಂಪ್ರದಾಯಿಕ ನಂಬಿಕೆಗಳು, ಆಚರಣೆಗಳು, ಮೌಲ್ಯಗಳು ಮಹಿಳೆಯರಿಗೆ ಅಪಾಯಕಾರಿಯಾಗಿ ಪರಿಣಮಿಸಿವೆ. ಈ ಮೌಢ್ಯಾಚರಣೆಗಳು ಬಡವರಿಗೆ ಹೆಚ್ಚಿನ ಹಾನಿಯುಂಟು ಮಾಡುತ್ತಿವೆ. ಈ ಸಾಂಪ್ರದಾಯಿಕ ಆಚರಣೆಗಳು ಪುರೋಹಿತ ವರ್ಗಕ್ಕೆ ಸಂಪಾದನೆಯ ಸಂಗತಿಗಳಾಗಿ ಬಿಟ್ಟಿವೆ. ಪರಂಪರೆಯ ಹೆಸರಿನಲ್ಲಿ ಇಂದಿಗೂ ಮಹಿಳೆಯರನ್ನು ಅಶುದ್ಧ, ಸೂತಕ ಎಂದು ನೋಡುವ ಕ್ರಮ ವಾಡಿಕೆಯಲ್ಲಿದೆ. ಇದು ಮಹಿಳೆಯರ ಮುಕ್ತ ಬೆಳವಣಿಗೆಗೆ ಅಡ್ಡಿಯಾಗಿ ಬಿಟ್ಟಿದೆ. ಅವರಲ್ಲಿ ಇದು ಕೀಳರಿಮೆಯನ್ನು ಹುಟ್ಟು ಹಾಕುತ್ತಿದೆ. ಮಹಿಳೆಯರನ್ನು 'ಬೇರೆ' ಎಂಬ ವರ್ಗೀಕರಿಸುವ ಕ್ರಮಕ್ಕೆ ಇವು ಕಾರಣವಾಗುತ್ತಿವೆ.

ಮಹಿಳೆಯರಿಗೆ ಸಂಬಂಧಿಸಿದ ಅನೇಕ ಸಂಗತಿಗಳನ್ನು 'ಖಾಸಗಿ' ಎಂದು ಶಾಸನಗಳ ಚೌಕಟ್ಟಿನಿಂದ ಹೊರಗಿಡುವ ಪ್ರಯತ್ನ ನಡೆಯುತ್ತಿದೆ. ಇಂದು ಸಾರ್ವಜನಿಕ(ಪಬ್ಲಿಕ್) ಮತ್ತು ಖಾಸಗಿ(ಪ್ರೈವೇಟ್) ಅನ್ನುವ ಭಿನ್ನತೆ ಅಳಿಸಿ ಹೋಗಿದೆ. ಆದರೂ ಕೌಟುಂಬಿಕ ಸಂಗತಿಗಳನ್ನು ಶಾಸನಗಳ ವ್ಯಾಪ್ತಿಯಿಂದ ಅಲಾಯದವಾಗಿಡಲಾಗುತ್ತಿದೆ. ಪರಂಪರೆಯನ್ನು ಕುರುಡು ಕುರುಡಾಗಿ ವೈಭವೀಕರಿಸುವ ಕ್ರಮಗಳನ್ನು ಕೈಬಿಡಬೇಕು. ಪರಂಪರೆಯಲ್ಲಿ ಯಾವುದು ಅನುಕರಣೀಯ, ಯಾವುದು ಅಸಮಾನತೆಯನ್ನು ಪೋಷಿಸುತ್ತದೆ, ಮಹಿಳೆಯರ ಹಕ್ಕುಗಳಿಗೆ ಚ್ಯುತಿ ತರುತ್ತವೆ ಎಂಬುದರ ಬಗ್ಗೆ ಆಯ್ಕೆಯ ಸ್ವಾತಂತ್ರ್ಯವನ್ನು ಪ್ರೋತ್ಸಾಹಿಸಬೇಕು.

ಸಂಪುಟದ ವಿಸ್ತರಣೆ: ಬದಲಾಗದ... ಪುಟ 3 ರಿಂದ

ಸ್ಪಷ್ಟ ಬಹುಮತ ಯಾರಿಗೂ ಸಿಗದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳ ನಡುವಿನ ಒಪ್ಪಂದವು ಬಿಜೆಪಿಯ ತಂತ್ರಗಳನ್ನೂ ಸೋಲಿಸಿ, ಅಧಿಕಾರ ಹಂಚಿಕೊಳ್ಳುವಲ್ಲಿ ಯಶಸ್ವಿಯಾಗಿತ್ತು. ಈಗಲೂ ಕಾವೇರಿ ನೀರಿನ ವಿವಾದದಲ್ಲಿ ಕಾಂಗ್ರೆಸ್ ಸರಕಾರವನ್ನೂ 'ಅಧಿಕಾರದಿಂದ ಮುಕ್ತ'ಗೊಳಿಸುವ ಹಲವಾರು ತಂತ್ರ–ಕುತಂತ್ರಗಳನ್ನು ಬಿಜೆಪಿಯ ಕೇಂದ್ರ–ರಾಜ್ಯ ನಾಯಕತ್ವ ಹೆಣೆದಿತ್ತು. ಚಳುವಳಿ ಬಿರುಸಾಗಿರುವ ಮಂಡ್ಯ, ಮೈಸೂರು ಪ್ರದೇಶದಲ್ಲಿ ಜೆಡಿಎಸ್ ಸಹ ತನ್ನ ಪ್ರಾಬಲ್ಯ ಉಳಿಸಿಕೊಳ್ಳುವ (ಒಕ್ಕಲಿಗರ ನಡುವೆ) ಮತ್ತು ಗಳಿಸಿಕೊಳ್ಳುವ ಕಸರತ್ತಿನಲ್ಲಿ ಮಗ್ನವಾಗಿತ್ತು. ಮೇಲಾಗಿ ಜೆಡಿಎಸ್ ನ ಪ್ರಮುಖ ನಾಯಕರು–ಶಾಸಕರು ಕಾಂಗ್ರೆಸ್ ಪಕ್ಷದತ್ತ ಸರಿದಿದ್ದು ತರುವ ಹಾನಿಯನ್ನೂ ಸರಿದೂಗಿಸುವ ಒತ್ತಡದಲ್ಲಿಯೂ ಜೆಡಿಎಸ್ ಸಿಲುಕಿದೆ.

ಹೀಗೆ ರಾಜಕೀಯವಾಗಿ, ಸಂಘಟನಾತ್ಮಕವಾಗಿ ಕಾಂಗ್ರೆಸ್‌ನೊಂದಿಗೆ ಜೆಡಿಎಸ್‌ಗೆ ತಿಕ್ಕಾಟ ಸಹಜವಿತ್ತು. ಇಂತಹ ಸಂದರ್ಭದಲ್ಲಿ ಬಿಜೆಪಿ–ಜೆಡಿಎಸ್‌ನೊಂದಿಗೆ ಸಂಬಂಧ ಕುದುರಿಸಿಕೊಂಡರೆ ಕಾಂಗ್ರೆಸ್‌ನ್ನೂ ಮೂಲೆಗೆ ತಳ್ಳಿದಂತಾಗುತ್ತದೆ ಜೊತೆಗೆ ಇಂದಿನ ಮತ್ತು ಮುಂದಿನ ಚುನಾವಣೆಗಳಲ್ಲಿ ರಾಜಕೀಯ ಮೈತ್ರಿ ಮಾಡಿಕೊಂಡರೆ ಅಧಿಕಾರ ಸುಲಭ ಎಂಬ ಲೆಕ್ಕಾಚಾರವೂ ಇತ್ತು. ಜೆಡಿಎಸ್ ಸಹ ಬಿಜೆಪಿಯ ಜೊತೆಗಿನ ಇಂತಹ ಮೈತ್ರಿ ಸಾಧ್ಯತೆಗಳನ್ನು ಸ್ಪಷ್ಟವಾಗಿ ನಿರಾಕರಿಸಲೂ ಇಲ್ಲ. ಅಧಿಕಾರದ ಕುರ್ಚಿಗಾಗಿ ಆಗಾಗ ಚಾಚುತ್ತಾ ಬಂದ ಕೈಯನ್ನೂ ಹಿಂತೆಗೆಯಲೂ ಇಲ್ಲ.

ಹೀಗಾಗಿ ಬಿಬಿಎಂಪಿಯಲ್ಲಿ ಮೇಯರ್, ಉಪಮೇಯರ್‌ಗಳ ಆಯ್ಕೆಯೂ ಹಲವು ಹೊಸ ರಾಜಕೀಯ ಸಮೀಕರಣ ತರುವ ಸಾಧ್ಯತೆಗಳನ್ನೂ ಹೊಂದಿತ್ತು. ಆದರೆ ಮೈತ್ರಿಯ ನವೀಕರಣ ಮತ್ತು ಅಧಿಕಾರ ಹಂಚಿಕೆಯ ಸೂತ್ರಗಳಿಂದ ಸದ್ಯ ಇಂತಹದ್ದು ತಪ್ಪಿದೆ. ಇದೀಗ ಕಾಂಗ್ರೆಸ್‌ನ ಜಿ.ಪದ್ಮಾವತಿ ಮೇಯರ್ ಸ್ಥಾನದಲ್ಲಿ ಜೆಡಿಎಸ್‌ನ ಆನಂದ್‌ರವರು ಉಪಮೇಯರ್ ಸ್ಥಾನದಲ್ಲಿಯೂ ಆಯ್ಕೆಯಾಗಿದ್ದಾರೆ. ಇಷ್ಟರ ಮಟ್ಟಿಗೆ ಕೋಮುವಾದಿ ಬಿಜೆಪಿ ಬೆಂಗಳೂರು ಮಹಾ ನಗರ ಪಾಲಿಕೆಯ ಆಡಳಿತ ಹಿಡಿಯುವುದು ತಪ್ಪಿದೆ.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರ ಹಿಡಿಯಲು ಬಿಜೆಪಿ ಉತ್ಸುಕವಾಗಿದ್ದು ತೀವ್ರ ಕಾರ್ಯಾಚರಣೆಗೆ ಇಳಿದಿದೆ. ನಿತ್ಯವೂ ಕೋಮುಗಲಭೆ ಹಬ್ಬಿಸುವ ಪ್ರಯತ್ನಗಳಲ್ಲಿ, ಅಲ್ಪಸಂಖ್ಯಾತರು, ಪ್ರಗತಿಪರರ ಮೇಲೆ ಧಾಳಿಗಳನ್ನು ಹೆಚ್ಚಿಸುತ್ತಾ, ಸಾರ್ವಜನಿಕರಲ್ಲಿ ದ್ವೇಷ ಹುಟ್ಟು ಹಾಕುತ್ತಿದೆ. ಬಿಬಿಎಂಪಿಯ ಚುಕ್ಕಾಣಿ ತಪ್ಪಿರುವುದು ಅಧಿಕಾರದ ದುರ್ಬಳಕೆಯ ತಡೆಯುವಲ್ಲಿ ಒಂದು ಮಟ್ಟಿಗೆ ಸ್ವಾಗತಾರ್ಹ ಕ್ರಮ. ಆದರೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಕೋಮುವಾದಿಗಳನ್ನು ಎದುರಿಸುವಲ್ಲಿ ಬಹುತೇಕ ನಿಷ್ಕ್ರೀಯವಾಗಿರುವಾಗ ಈ ಅಧಿಕಾರಕ್ಕಾಗಿ ಮೇಲ್ ಹಂತದಲ್ಲಿ ನಡೆಯುವ ಹೊಂದಾಣಿಕೆಗಳು ಎಷ್ಟರ ಮಟ್ಟಿನ ಫಲ ತರಬಹುದು ? ಹಾಗೇ ಅಧಿಕಾರವೇ ಅಸ್ತಿತ್ವದ ಮೂಲ ಎಂದೇ ಬಗೆದಿರುವ ಜೆಡಿಎಸ್‌ನ ಸಂದರ್ಭಗಳನ್ನು ಬಳಸುವ ರಾಜಕೀಯ ಆಟವೂ ಕರ್ನಾಟಕದಲ್ಲಿ ಜಾತ್ಯಾತೀತ ವಾತಾವರಣವನ್ನೂ ಎಷ್ಟರ ಮಟ್ಟಿಗೆ ಕಾಪಾಡಬಲ್ಲದು ? ಇದು ಹಿಂದೆ ಮತ್ತು ಈಗ ಉಳಿದಿರುವ ಪ್ರಶ್ನೆ ! ●

ದೇಶದ ಆಸ್ತಿಗಳ ಮಾರಾಟ: ಭದ್ರಾವತಿ ಉಕ್ಕು ಸೇರಿದಂತೆ 22 ಘಟಕಗಳ ಖಾಸಗೀಕರಣದ ನಿರ್ಧಾರ

ಮೋದಿ ಸರಕಾರದ ‘ಆಯಕಟ್ಟಿನ ಮಾರಾಟ’ದ ಅಡಿಯಲ್ಲಿ 22 ಸಾರ್ವಜನಿಕ ವಲಯುದ ಘಟಕಗಳನ್ನು ಖಾಸಗೀಕರಿಸಲು ನಿರ್ಧರಿಸಿರುವುದಾಗಿ ವರದಿಯಾಗಿದೆ. ಇದರಲ್ಲಿ ‘ಮಹಾರತ್ನ’ವೆನಿಸಿರುವ ಉಕ್ಕು ಪ್ರಾಧಿಕಾರ(ಎಸ್ಎಐಎಲ್)ನ ಭದ್ರಾವತಿ, ಸೇಲಂ ಮತ್ತು ದುರ್ಗಾಪುರ ಘಟಕಗಳೂ ಸೇರಿವೆ. ಇವಲ್ಲದೆ ಇಂಡಿಯನ್ ಆಯಿಲ್ ಕಾರ್ಪೊರೇಶನ್‌ನ ಉಪಘಟಕಗಳು, ಹೆಲಿಕಾಪ್ಟರ್ ಕಾರ್ಪೊರೇಶನ್, ಸಿಮೆಂಟ್ ಕಾರ್ಪೊರೇಶನ್, ರಾಷ್ಟ್ರೀಯ ಸಣಬು ಕಾರ್ಪೊರೇಶನ್, ಸೆಂಟ್ರಲ್ ಇಲೆಕ್ಟ್ರಾನಿಕ್ ಕಾರ್ಪೊರೇಶನ್, ಹೆವಿ ಇಂಜಿನಿಯರಿಂಗ್ ಕಾರ್ಪೊರೇಶನ್ ಮುಂತಾದ ಘಟಕಗಳು ಈ ಪಟ್ಟಿಯಲ್ಲಿವೆ. ಒಎನ್‌ಜಿಸಿ ಮತ್ತು ಆಯಿಲ್ ಇಂಡಿಯಾ ಶೋಧಿಸಿರುವ 67 ತೈಲಕ್ಷೇತ್ರಗಳ ಖಾಸಗೀಕರಣದ ಕ್ರಮಗಳನ್ನೂ ಕೈಗೊಳ್ಳುತ್ತಿದೆ.

ಈ ಸರಕಾರ ವರ್ಷದ ಬಜೆಟಿನಲ್ಲಿ ಇಂತಹ ರಾಷ್ಟ್ರೀಯ ಆಸ್ತಿಗಳನ್ನು ಮಾರಿ 56,500 ಕೋಟಿ ರೂ.ಗಳನ್ನು ಸಂಗ್ರಹಿಸುವ ಯೋಜನೆ ಹಾಕಿಕೊಂಡಿದೆ , ಜತೆಗೆ ರಕ್ಷಣೆ, ಕಲ್ಲಿದ್ದಲು, ಪೆಟ್ರೋಲಿಯಂ, ವಿದ್ಯುತ್, ಟೆಲಿಕಾಂ, ನಾಗರಿಕ ವಿಮಾನಯಾನ, ಕಟ್ಟಡ ನಿರ್ಮಾಣ, ವಿಮೆ, ಬ್ಯಾಂಕಿಂಗ್, ರೈಲ್ವೆ ಮುಂತಾದ ಮಹತ್ವದ ಕ್ಷೇತ್ರಗಳಲ್ಲಿ 100ಶೇ.ದ ವರೆಗೂ ವಿದೇಶಿ ಹೂಡಿಕೆಗಳಿಗೆ ಅವಕಾಶ ಕಲ್ಪಿಸಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇದರರ್ಥ ದೇಶದ, ಅಂದರೆ ಜನಗಳ ಆಸ್ತಿಗಳನ್ನೆಲ್ಲ ದೇಶಿ–ವಿದೇಶಿ ಖಾಸಗಿ ಕೈಗಳಿಗೆ ಮಾರಿ ಬಿಡುವ ಹುನ್ನಾರ.

ಇದು ರಾಷ್ಟ್ರೀಯ ಆರ್ಥಿಕದ ಆಯಕಟ್ಟಿನ ಹತೋಟಿಯನ್ನು ದೇಶಿ ಮತ್ತಿ ವಿದೇಶಿ ಬಂಡವಾಳಿಗರ ಅಪಾಯಕಾರಿ ಹಿಡಿತಕ್ಕೆ ಒಪ್ಪಿಸುವ ಕ್ರಿಯೆ ಎಂದು ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಇದನ್ನು ಖಂಡಿಸಿದೆ.

ಕಾರ್ಮಿಕರಿಂದಲೂ ಇದಕ್ಕೆ ಪ್ರಬಲ ಪ್ರತಿರೋಧ ಬರುತ್ತಿದೆ. ಭದ್ರಾವತಿ ಉಕ್ಕಿನ ಕಾರ್ಖಾನೆಯ ಕಾರ್ಮಿಕರಯ ಪ್ರತಿಭಟನೆ ನಡೆಸುತ್ತಿದ್ದಾರೆ. ಸಏಲಂ ಉಕ್ಕು ಸ್ಥಾವರದ ಕಾರ್ಮಿಕರು ಸಪ್ಟಂಬರ್ 22ರಂದು ಮುಷ್ಕರ ನಡೆಸಿದ್ದಾರೆ. ದುರ್ಗಾಪುರದ ಮಿಶ್ರ ಉಕ್ಕು ಸ್ಥಾವರದ ಕಾರ್ಮಿಕರು ಮತ್ತು ಒಡಿಶಾದ ರೂರ್ಕೆಲಾ ಉಕ್ಕು ಕಾರ್ಮಿಕರೂ ಕೂಡ ಪ್ರತಿಭಟನಾ ಪ್ರದರ್ಶನ ನಡೆಸಿದ್ದಾರೆ.

ಬಿಎಂಎಸ್ ನಿಂದಲೂ ಈಗ ಪ್ರತಿಭಟನೆಯ ಮಾತು!

ಕೇವಲ ಒಂದು ತಿಂಗಳ ಹಿಂದೆ ಮೋದಿ ಸರಕಾರ ದೇಶದ ಕಾರ್ಮಿಕರಿಗೆ ನಿಜಕ್ಕೂ ಒಳ್ಳೆಯ ದಿನಗಳನ್ನು ತರುತ್ತಿದೆ ಎಂದು ತಾನುಕ ಕರೆ ಕೊಡದ ಮುಷ್ಕರವನ್ನು ಹಿಂತೆಗೆದುಕೊಮಡಿರುವುದಾಗಿ ಹೇಳಿದ್ದ, ಕನಿಷ್ಟ ಕೂಲಿಯ ಪ್ರಕಟಣೆಯ ಬಗ್ಗೆ ವಿಯಯೋತ್ಸವ ಆಚರಣೆಗೂ ಮುಂದಾಗಿದ್ದ ಸಂಘ ಪರಿವಾರಕ್ಕೆ ಸೇರಿದ ಬಿಎಂಎಸ್‌ಗೆ ಕೂಡ ಮೋದಿ ಸರಕಾರದ ಈ ನಿರ್ಧಾರ ಮುಜುಗರ ತಂದಿದೆ.

ಸಾರ್ವನಿಕ ವಲಯದ ಘಟಕಗಳ ಶೇರು ಮಾರಾಟ ನಿಲ್ಲಿಸಬೇಕು ಎಂಬುದು ಸಪ್ಟಂಬರ್ 2ರ ಸಾರ್ವತ್ರಿಕ ಮುಷ್ಕರದ ಒಂದು ಪ್ರಮುಖ ಬೇಡಿಕೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

“ಈ ಕಂಪನಿಗಳ ಮಾರಾಟದ ಅಗತ್ಯವಿಲ್ಲ, ಸರಕಾರ ಇಂತಹ ಏಕಪಕ್ಷೀಯ ನಿರ್ಧಾರಗಳನ್ನು ಕೈಗೊಳ್ಳುವುದು ಸಆಧ್ಯವಿಲ್ಲ, ಸರಕಾರ ಪ್ರತಿಯೊಂದು ಇಂಯಹ ಮಾರಾಟದ ಪ್ರಸ್ತಾವವನ್ನು ನಮಗೆ ವಿವರಿಸಬೇಕು, ಚರ್ಚಿಸಬೇಕು, ಇಲ್ಲವಾದರೆ ಮುಂಬರುವ ವಾರಗಳಲ್ಲಿ ಬಲವಾದ ಪ್ರತಿಭಟನೆಗಳನ್ನು ಸಂಘಟಿಸಬೇಕಾಗುತ್ತದೆ” ಎಂದು ಬಿಎಂಎಸ್‌ನ ಪ್ರಧಾನ ಕಾರ್ಯದರ್ಶಿ ವೃಜೇಶ್ ಉಪಾಧ್ಯಾಯ ‘ಎಚ್ಚರಿಸ’ಬೇಕಾಗಿ ಬಂದಿದೆ!

ಮುಸ್ಲಿಮರನ್ನು “ಪರಿಷ್ಕರಿಸಿ”–ಪ್ರಧಾನಿಗಳ ಸಲಹೆ!!

“ಮುಸ್ಲಿಮರನ್ನು ಪುರಸ್ಕರಿಸಬೇಡಿ, ತಿರಸ್ಕರಿಸಬೇಡಿ, ಪರಿಷ್ಕರಿಸಿ” ಎಂದು ಪ್ರಧಾನಮಂತ್ರಿಗಳು ಸಪ್ಟಂಬರ್25 ರಂದು ಕೋಝಿಕ್ಕೋಡ್‌ನಲ್ಲಿ ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯ ಸಂದರ್ಭದಲ್ಲಿ ಮಾತಾಡುತ್ತ ತಮ್ಮ ಪಕ್ಷದ ಸದಸ್ಯರಿಗೆ ಕಿವಿಮಾತು ಹೇಳಿರುವುದಾಗಿ ವರದಿಯಾಗಿದೆ. ಅವರನ್ನು ವೋಟಿನ ಸಂತೆಯ ಸರಕು ಎಂದು ಪರಿಗಣಿಸಬೇಡಿ, ತಿರಸ್ಕಾರದ ವಸ್ತು ಎಂದು ಕಾಣಬೇಡಿ, ನಮ್ಮವರೆಂದು ತಿಳಿಯಿರಿ ಎಂದು ಮುಂದುವರೆದು ಅವರು ಹೇಳಿದರು ಎಂದು ವರದಿಯಾಗಿದೆ.

ಮುಸ್ಲಿಮರನ್ನು ಪರಿಷ್ಕರಿಸಿ ಎಂಬ ಮಾತಿನ ಬಗ್ಗೆ ಭಾರೀ ವಿವಾದ ಎದ್ದಾಗ ಮುಜುಗರಗೊಂಡ ಬಿಜೆಪಿ ಮುಖಂಡರುಗಳು ‘ಪರಿಷ್ಕರಿಸ’ ಎಂದರೆ ಅವರನ್ನು ‘ಸಬಲೀಕರಿಸಿ’ ಎಂದರ್ಥ ಎಂದು ಸಮಜಾಯಿಷಿ ಕೊಡಲು ಪ್ರಯತ್ನಿಸಿದ್ದಾರೆ. ಆದರೆ ‘ಪರಿಷ್ಕಾರ’ ಎಂಬ ಸಂಸ್ಕೃತದ ಪದದ ಬಗ್ಗೆ ಅರ್ಥಕೋಶ ಕೊಡುವ ಅರ್ಥವೆಂದರೆ ಉತ್ತಮಗೊಳಿಸುವುದು, ಸ್ವಚ್ಛಗೊಳಿಸುವುದು, ಅಥವ ಶುದ್ಧೀಕರಿಸುವುದು, ಎಂದು ಟ್ರಿಬ್ಯೂನ್ ನ್ಯೂಸ್ ಸರ್ವಿಸ್‌'ನ ಪತ್ರಕರ್ತರಾದ ವಿಭಾ ಶರ್ಮ ಹೇಳುತ್ತಾರೆ. ಸಬಲೀಕರಿಸುವುದು ಎಂಬ ಅರ್ಥವಂತೂ ಇಲ್ಲ

ಅದೇನೇ ಇರಲಿ, ತಮ್ಮ ಪಕ್ಷದವರಿಗೆ ಈಗ ಪ್ರಧಾನಿಗಳು ಈ ಕಿವಿಮಾತು ಹೇಳುತ್ತಿದ್ದಾರೆಂದರೆ ಇದುವರೆಗೆ ಅವರು ಮುಸ್ಲಿಮರನ್ನು ತಿರಸ್ಕರಿಸುತ್ತಿದ್ದಾರೆ ವೋಟಿನ ಸಂತೆಯಲ್ಲಿ ಸರಕಾಗಿ ಮಾತ್ರ ಕಾಣುತ್ತಿದ್ದಾರೆ, ತಮ್ಮವರೆಂದು ಕಾಣುತ್ತಿಲ್ಲ ಎಂದು ಭಾವಿಸುವುದು ತಪ್ಪಾಗುತ್ತದೆಯೇ?

ವಾಸ್ತವವಾಗಿ ಇದು ಬಿಜೆಪಿಯು ಹಿಂದಿನ ಅವತಾರವಾದ ಭಾರತೀಯ ಜನಸಂಘದ ಅಧ್ಯಕ್ಷರಾಗಿದ್ದ, ಸಿದ್ಧಾಂತಿ ಎಂದೂ ಹೆಸರಾಗಿರುವ ದೀನ ದಯಾಳ್ ಉಪಾಧ್ಯಾಯ 50ವರ್ಷಗಳ ಹಿಂದೆ ಕೊಟ್ಟ ಸಲಹೆ ಎನ್ನಲಾಗಿದೆ. ನಮ್ಮ ನೆರೆಕರೆಯ ಮುಸ್ಲಿಮರು ಮೊದಲು ಹಿಂದುಗಳೇ ಆಗಿದ್ದರು, ಆದ್ದರಿಂದ ಅವರನ್ನು ‘ಶುದ್ಧೀಕರಿಸಿ ಮತ್ತೆ ಮನೆಗೆ ಸೇರಿಸಬೇಕು’ ಎಂಬುದು ಈ ‘ಪರಿಷ್ಕಾರ’ದ ನಿಜಾರ್ಥ ಎನ್ನಲಾಗಿದೆ. ಆದ್ದರಿಂದಲೇ ತಾನೇ ಪರಿವಾರದ ಮಂದಿ “ಘರ್ ವಾಪಸೀ’ ಧಾಂಧಲೆ ನಡೆಸುತ್ತಿದ್ದಾಗ ಪ್ರಧಾನಿಗಳು ದಿವ್ಯಮೌನ ತಳೆದದ್ದು ಎಂದು ಇನ್ನು ಕೆಲವರು ನೆನಪಿಸುತ್ತಾರೆ.

ಭಾರತದ ಪ್ರಧಾನ ಮಂತ್ರಿಗಳು ಒಂದು ಸಾರ್ವಜನಿಕ ವೇದಿಕೆಯಲ್ಲಿ ಭಾರತೀಯ ಮುಸ್ಲಿಮರನ್ನು ‘ಶುದ್ಧೀಕರಿಸುವ’ ಬಗ್ಗೆ ಹೇಳಿರುವುದು ಆಘಾತಕಾರಿ ಸಂಗತಿ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಅಭಿಪ್ರಾಯ ಪಟ್ಟಿದ್ದಾರೆ.

ಈ ದುಷ್ಟ ನಿರೂಪಣೆ ಭಾರತೀಯ ಬಹುತ್ವದ ತುಚ್ಛೀಕಾರ ಮಾತ್ರವೇ ಅಲ್ಲ, ನಮ್ಮ ಮೂಲಭೂತ ಸಂವಿಧಾನಿಕ ಮೌಲ್ಯಗಳಿಗೂ ವಿರುದ್ಧವಾದದ್ದು. ಈ ಹಿಂದೆ ಅವರು ಏನೇನು ಹೇಳಿದ್ದರೋ ಅವನ್ನು ಉಪೇಕ್ಷಿಸಿದರೂ ಕೂಡ, ಅವರು ಪ್ರಧಾನ ಮಂತ್ರಿಯಾಗಿ ತೆಗೆದುಕೊಂಡಿರುವ ಶಪಥ ಅವರ ಮೇಲೆ ಭಾರತೀಯ ಸಂವಿಧಾನವನ್ನು ರಕ್ಷಿಸುವ ಹೊಣೆ ಹಾಕಿದೆ ಎಂದು ಅವರು ನೆನಪಿಸಿಕೊಳ್ಳಬೇಕು ಎಂದು ನಿರೀಕ್ಷಿಸುವುದು ಅತಿಯೆನಿಸುತ್ತದೆಯೇ ಎಂದು ಯೆಚೂರಿ ಪ್ರಶ್ನಿಸಿದ್ದಾರೆ.

ಈಗ ಹರಿಯಾಣ ಕೇಂದ್ರೀಯ ವಿವಿಗೆ ಹರಡಿದ ‘ರಾಜದ್ರೋಹ’ದ ಕಾಯಿಲೆ


‘ರಾಜದ್ರೋಹ’ದ ಬಗ್ಗೆ ದೇಶದ ಸರ್ವೋಚ್ಚ ನ್ಯಾಯಾಲಯ ಸ್ಪಷ್ಟಪಡಿಸಿದ ಮೇಲೂ ಸಂಘ ಪರಿವಾರದ ವಿ.ವಿ. ಪೋಲಿಸ್ ಎಂದು ವಿದ್ಯಾರ್ಥಿಗಳ ನಡುವೆ ಕುಪ್ರಸಿದ್ಧವಾಗುತ್ತಿರುವ ಎಬಿವಿಪಿ ಈ ಕುರಿತ ಧಾಂದಲೆಯನ್ನು ಇನ್ನೊಂದು ಕೇಂದ್ರೀಯ ವಿಶ್ವವಿದ್ಯಾಲಯಕ್ಕೆ ವಿಸ್ತರಿಸಿದೆ.

‘ಹಿಂದುತ್ವ’ದ ಹೊಸ ಪ್ರಯೋಗಶಾಲೆಯಾಗಿ ಗುಜರಾತಿನ ಸ್ಥಾನಕ್ಕೆ ಸವಾಲು ಹಾಕುತ್ತಿರುವ ಹರಿಯಾಣದ ಕೇಂದ್ರೀಯ ವಿಶ್ವವಿದ್ಯಾಲಯ ಈಗ ಅವರ ‘ರಾಜದ್ರೋಹ’ದ ಆಪಾದನೆಗೆ ಗುರಿಯಾಗಿದೆ. ಈ ವಿವಿಯ ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ವಿಭಾಗದ ವಿದ್ಯಾರ್ಥಿಗಳು ಇತ್ತೀಚೆಗೆ ನಿಧನರಾದ ಪ್ರಖ್ಯಾತ ಬಂಗಾಳೀ ಲೇಖಕಿ ಮಹಾಶ್ವೇತಾದೇವಿ ಅವರಿಗೆ ಶ್ರದ್ಧಾಂಜಲಿಯಾಗಿ ಅವರ ಪ್ರಖ್ಯಾತ ‘ದ್ರೌಪದಿ’ ಕತೆಯನ್ನು ಆಧರಿಸಿದ ನಾಟಕವನ್ನು ಪ್ರಸ್ತುತ ಪಡಿಸಿದ್ದರು. ಭೂಮಾಲಕರ ಶೋಷಣೆಯ ವಿರುದ್ಧ ಬುಡಕಟ್ಟು ಜನಗಳ ಪ್ರತಿರೋಧವನ್ನು ಪ್ರಸ್ತುತ ಪಡಿಸಿರುವ ಈ ಕತೆಯಲ್ಲಿ ಬುಡಕಟ್ಟು ಮಹಿಳೆಯರ ಪ್ರತಿರೋಧದ ಪ್ರತೀಕವಾಗಿ ಬಿಟ್ಟ ‘ದೋಪದಿ ಮೆಜ್ಜೆನ್’ ಪೋಲೀಸ್ ಕಸ್ಟಡಿಯಲ್ಲಿ ತನ್ನ ಮೇಲೆ ನಡೆದ ಸಾಮೂಹಿಕ ಅತ್ಯಾಚಾರಕ್ಕೆ ಸವಾಲು ಹಾಕುತ್ತಾಳೆ, ಇದನ್ನು ಬಿಂಬಿಸಿದ ಬಗೆ ಭಾರತೀಯ ಸೈನಿಕರನ್ನು ಕೆಟ್ಟದಾಗಿ ತೋರಿಸಿದೆ, ಅದ್ದರಿಂದ ಈ ಪ್ರದರ್ಶನ ‘ರಾಷ್ಟ್ರ–ವಿರೋಧಿ’ ಎಂದು ಎಬಿವಿಪಿ ಈ ನಾಟಕ ಪ್ರಸ್ತುತ ಪಡಿಸಿದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ವಿರುದ್ಧ ‘ರಾಜದ್ರೋಹ’ದ ಕೇಸ್ ಹಾಕಿ ಅವರನ್ನು ಬಂಧಿಸುವಂತೆ ಆಗ್ರಹಿಸಿದೆ ಎಂದು ವರದಿಯಾಗಿದೆ. ಈ ನಾಟಕದ ಪ್ರದರ್ಶನ ವಿದ್ಯಾರ್ಥಿಗಳ ಒಂದು ವಿಭಾಗದ ‘ಭಾವನೆಗಳಿಗೆ ನೋವುಂಟು ಮಾಡಿದೆ’ ಎಂಬ ಈಗ ನಗೆಪಾಟಲಾಗುತ್ತಿರುವ ಮಾತು ಸಹಜವಾಗಿಯೇ ಕೇಳಬಂದಿದೆ.

ಯಥಾಪ್ರಕಾರ ವಿಶ್ವವಿದ್ಯಾಲಯದ ಅಧಿಕಾರಿಗಳು ಈ ಪ್ರದರ್ಶನಕ್ಕೆ ಎಲ್ಲ ತರಹದ ಅನುಮತಿಗಳನ್ನು ಕೊಟ್ಟಿದ್ದರೂ ಆಳುವ ಪಕ್ಷದ ಒತ್ತಡದಿಂದಾಗಿ ಈ ನಾಟಕ ಏರ್ಪಡಿಸಿದವರಿಗೆ ವಿವರಣೆ ಕೇಳಿ ನೋಟೀಸ್ ಕಳಿಸಿದ್ದಾರೆ! ಒಂದು ಆರು ಸದಸ್ಯರ ತನಿಖಾ ಸಮಿತಿಯನ್ನೂ ನೇಮಿಸಲಾಗಿದೆ!

ಮಹಾಶ್ವೇತಾದೇವಿಯವರಿಗೆ ಇತ್ತೀಚೆಗೆ ಶ್ರದ್ಧಾಂಜಲಿ ಅರ್ಪಿಸಿದವರಲ್ಲಿ ಸ್ವತಃ ಬಿಜೆಪಿಯ ಘಟಾನುಘಟಿಗಳೂ ಸೇರಿದ್ದರು ಎಂಬುದು ಈ ‘ವಿದ್ಯಾರ್ಥಿ’ಗಳಿಗೆ ತಿಳಿದಿದೆಯೋ ಇಲ್ಲವೋ ಎಂದು ಈ ಕೇಂದ್ರೀಯ ವಿಶ್ವವಿದ್ಯಾಲಯದ ಕೆಲವು ನಿಜವಾದ ವಿದ್ಯಾರ್ಥಿಗಳು ಕೇಳುತ್ತಿದ್ದಾರಂತೆ.

ಈ ನಡುವೆ ಉರಿ ಭಯೋತಾದನೆಗೆ ‘ಪ್ರತೀಕಾರ’ವಾಗಿ ಭಾರತೀಯ ಸೇನೆ ಸಪ್ಟಂಬರ್ 28–29ರ ನಡುರಾತ್ರಿ ನಡೆಸಿದ ಯಶಸ್ವಿ ಕಾರ್ಯಾಚರಣೆಯ ಬಗ್ಗೆ ಭಾರತೀಯ ಸೇನೆಯ ಅಧಿಕಾರಿಗಳು ಪ್ರಕಟಿಸುತ್ತಿದ್ದಂತೆ ಮುಂಬೈ ಶೇರು ಮಾರುಕಟ್ಟೆ 2.13% ಕುಸಿತ ಕಂಡಿದೆ, ಇದು ಬ್ರೆಕ್ಸಿಟ್ ನಂತರದ ದೊಡ್ಡ ಕುಸಿತ ಎನ್ನಲಾಗಿದೆ. ಭಾರತದ ರೂಪಾಯಿ ಬೆಲೆ ಡಾಲರಿಗೆ ಎದುರಾಗಿ 39ಪೈಸೆಯಷ್ಟು ಇಳಿದಿದೆ ಎಂದು ವರದಿಯಾಗಿದೆ. ಬಹುಶಃ ಶೇರು ವ್ಯಾಪಾರಿಗಳು ಎಬಿವಿಪಿ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಅವರ ಮೇಲೆ ‘ರಾಜದ್ರೋಹ’ದ ಕೇಸಿನ ಪ್ರಶ್ನೆ ಏಳುವುದಿಲ್ಲ! ಅತ್ತ ಪಾಕಿಸ್ತಾನದಲ್ಲೂ ಕರಾಚಿಶೇರು ಮಾರುಕಟ್ಟೆ ಕುಸಿದಿದೆ, ಆದರೆ 0.2% ಮಾತ್ರ, ಅಲ್ಲಿಯ ರೂಪಾಯಿ ಬೆಲೆ ಮಾತ್ರ 54ಪೈಸೆಯಷ್ಟು ಏರಿದೆ ಎಂಬುದು ಗಮನಾರ್ಹ!



ಸ್ಪರ್ಧಾತ್ಮಕತೆಯಲ್ಲಿ ಜಿಗಿತ ಎಂದರೆ ನಿರುದ್ಯೋಗದಲ್ಲಿಯೂ ಜಿಗಿತ ಎಂದರ್ಥವೇ?

ವಿಶ್ವ ಬಂಡವಾಳಶಾಹಿಗಳ ವೇದಿಕೆಯಾದ ಡಬ್ಲ್ಯುಇಎಫ್ ಪ್ರತಿವರ್ಷ ಪ್ರಕಟಿಸುವ ಆರ್ಥಿಕ ವಯವಸ್ಥೆಯ ಸ್ಪರ್ಧಾತ್ಮಕತೆಯ ಸೂಚ್ಯಂಕದಲ್ಲಿ ಭಾರತ 55ನೇ ಸ್ಥಾನದಿಂದ 39ನೇ ಸ್ಥಾನಕ್ಕೆ ಏರಿದೆ, ಇದಕ್ಕಾಗಿ ಮೋದಿ ಸರಕಾರವನ್ನು ಅಭಿನಂದಿಸಲಾಗುತ್ತಿದೆ.

ಇದರೊಂದಿಗೆ ದೇಶದಲ್ಲಿ ನಿರುದ್ಯೋಗ ಕಳೆದ ಐದು ವರ್ಷಗಳಲ್ಲೇ ಅತಿ ಹೆಚ್ಚಿನ ಮಟ್ಟ ತಲುಪಿದೆ ಎಂಬ ಸುದ್ದಿಯೂ ಬಂದಿದೆ. ಭಾರತದ ಕಾರ್ಮಿಕ ಇಲಾಖೆಯ ಕಚೇರಿ ಲೇಬರ್ ಬ್ಯುರೊ ಪ್ರಕಟಿಸಿರುವ ಅಂಕಿ–ಅಂಶಗಳ ಪ್ರಕಾರ 2015–16ರಲ್ಲಿ ನಿರುದ್ಯೋಗ ದರ 5ಶೇ.ಕ್ಕೇರಿದೆ. 2011–12ರಲ್ಲಿ ಇದು 3.8ಶೇ. ಇತ್ತು. ಅದರಲ್ಲೂ ಮಹಿಳೆಯರ ನಿರುದ್ಯೋಗ ದರ ಇನ್ನೂ ಹೆಚ್ಚು, ಅಂದರೆ 8.7ಶೇ. 2011–12ರಲ್ಲಿ ಇದು 6.9% ಇತ್ತು. ಈ ಅಂಕಿ–ಅಂಶಗಳನ್ನು ನೋಡಿ:

ವರ್ಷ	ಒಟ್ಟು ನಿರುದ್ಯೋಗ ದರ	ಮಹಿಳೆಯರಲ್ಲಿ
2011–12	3.8%	6.9%
2012–13	4.7%	7.2%
2013–14	4.9%	7.7%
2015–16	5.0%	8.7%

ಸ್ವ–ಉದ್ಯೋಗ ಮತ್ತು ಸಂಬಳದ ಉದ್ಯೋಗಗಳ ಪ್ರಮಾಣ ಇಳಿಯುತ್ತಿದೆ, ಗುತ್ತಿಗೆ ಕೆಲಸದ ಪ್ರಮಾಣ ಹೆಚ್ಚುತ್ತಿದೆ, ಕಾರ್ಪೊರೇಟ್ ವಲಯದಲ್ಲಿ ಕಾರ್ಮಿಕರ ನೇಮಕಾತಿ ಇಳಿಯುತ್ತಿದೆ ಎಂದು ಲೇಬರ್ ಬ್ಯುರೋದ ಈ ಸರ್ವೆಯಲ್ಲಿ ಕಂಡು ಬರುತ್ತಿದೆಯಂತೆ. ಇದು ಕಳವಳಕಾರಿ ಎಂದು ಪರಿಣಿತರು ಹೇಳುತ್ತಿದ್ದಾರೆ. ನವ–ಉದಾರವಾದಿ ದಾರಿ ಕಾರ್ಮಿಕರಿಗೆ ಒಳ್ಳೆಯ ದಿನಗಳನ್ನು ತರಲಾರದು ಎನ್ನುವುದು ಇದಕ್ಕೇ ತಾನೇ?

ಮೋದಿ ಸರಕಾರ ಅಂಬಾನಿ ಕಂಪನಿಯಿಂದ 11 ಸಾವಿರಕೋಟಿ ರೂ. ವಸೂಲಿ ಮಾಡುತ್ತದೆಯೇ?

ಗೋದಾವರಿ–ಕೆಜಿ ಕಣಿವೆ ನೈಸರ್ಗಿಕ ಅನಿಲದ ವಿಷಯದಲ್ಲಿ ಅಂಬಾನಿ ಒಡೆತನದ ರಿಲಯಂಸ್ ಇಂಡಸ್ಟ್ರೀಸ್ ಲಿಮಿಟೆಡ್(ಆರ್‌ಐಎಲ್) ಭಾರತ ಸರಕಾರಕ್ಕೆ ವಂಚನೆ ಮಾಡಿದೆ ಎಂಬ ಆಪಾದನೆಯ ತನಿಖೆ ಮಾಡಿದ ಎ ಪಿ ಶಾಹ ಸಮಿತಿಯ ತನ್ನ ವರದಿಯನ್ನು ಅಗಸ್ಟ್ 30ರಂದು ಸಲ್ಲಿಸಿದೆ. ಈ ವರದಿಯ ಪ್ರಕಾರ ಆರ್‌ಐಎಲ್ ತಾನು ವಹಿಸಿಕೊಂಡ ಕೆಜಿ–ಡಿ6 ಬ್ಲಾಕಿಗೆ ಪಕ್ಕದ ಒಎನ್‌ಜಿಸಿಯ ಗೋದಾವರಿ ಬ್ಲಾಕಿನಿಂದ ಎಪ್ರಿಲ್ 1, 2009ರಿಂದ ಮಾರ್ಚ್ 31, 2015ರ ನಡುವೆ 11.2 ಮಿಲಿಯ ಘನಮೀಟರ್ ನೈಸರ್ಗಿಕ ಅನಿಲವನ್ನು ಬಳಸಿಕೊಂಡಿದೆ. ಇದರ ಮೌಲ್ಯ 11,000 ಕೋಟಿ ರೂ.ಗಳು.

ತನ್ನದಲ್ಲದ ಪಾಲನ್ನು ಕಾನೂನುಬಾಹಿರವಾಗಿ ವ್ಯಾಪಾರೀ ಲಾಭಕ್ಕೆ ಬಳಸಿಕೊಂಡಿರುವ ಆರ್‌ಐಎಲ್ ಅದರ ಬೆಲೆಯುನ್ನು ಮತ್ತು ಅದಕ್ಕೆ ದಂಡವನ್ನೂ ಭಾರತ ಸರಕಾರಕ್ಕೆ ತೆರಬೇಕಾಗಿದೆ.

ಎ ಪಿ ಶಹಾ ಸಮಿತಿಯ ವರದಿಯ ಪ್ರಕಾರ ಈ ಮೊತ್ತ ದೇಶದ ಖಜಾನೆಗೆ ಸೇರಬೇಕಾದ್ದು. ಇದನ್ನು ಆರ್‌ಐಎಲ್‌ನಿಂದ ಪೂರ್ಣವಾಗಿ ವಸೂಲಿ ಮಾಡಬೇಕು, ಅಲ್ಲದೆ ಈ ಕಾನುನುಬಾಹಿರ ಕೃತ್ಯಕ್ಕೆ ನಮ್ಮ್ ದಏಶದ ಕಾನೂನಿನ ಪ್ರಕಾರ ದಂಡನೆಯಾಗಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

‘ಒಳ್ಳೆಯ ದಿನಗಳ’ ಭರವಸೆ ನಿಡಿರುವ ಸರಕಾರ ಇದನ್ನು ವಸೂಲಿ ಮಾಡುತ್ತದೆಯೇ? ದೇಶದ ಜನಸಾಮಾನ್ಯರು ನಿರೀಕ್ಷೆಯಿಂದ ಕಾಯುತ್ತಿದ್ದಾರೆ.



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ



ಕೆ.ಎಂ.ನಾಗರಾಜ್

ಟಿ ಪಿ ಪಿ: ಅಮೆರಿಕಾದ ಚುನಾವಣಾ ರಂಗದಲ್ಲೀಗ ಕಪಟ ನಾಟಕದ ವಸ್ತು



'ರಾಷ್ಟ್ರ'ದ ಹಿತಾಸಕ್ತಿಗಳು ಮತ್ತು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಹಿತಾಸಕ್ತಿಗಳು ಬೇರೆ ಬೇರೆಯಲ್ಲ, ಅವು ಸಮಾನ 'ಅರ್ಥ ಹೊಂದಿವೆ ಎಂಬ ಪುರಾಣವನ್ನು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಪ್ರತಿಪಾದಕರು ಮತ್ತು ಅದರ ವಕ್ತಾರರು ಎಲ್ಲೆಡೆ ಹರಡುತ್ತಿದ್ದಾರೆ. ಆದರೆ ಅಮೆರಿಕಾದ ಕಾರ್ಮಿಕ ವರ್ಗವೂ ಅದನ್ನು ಒಪ್ಪುತ್ತಿಲ್ಲ. ಆದ್ದರಿಂದ ಚುನಾವಣೆಯಲ್ಲಿ ಹಿಲರಿ ಕ್ಲಿಂಟನ್ ಮತ್ತು ಡೊನಾಲ್ಡ್ ಟ್ರಂಪ್ ಇಬ್ಬರಿಗೂ ಕಾರ್ಮಿಕ ವರ್ಗದ ವಿಶ್ವಾಸ ಪಡೆಯಲು ಟಿಪಿಪಿ ಬಗ್ಗೆ ಕಪಟ ನಾಟಕವಾಡಬೇಕಾಗಿದೆ ಎನ್ನುತ್ತಾರೆ ಪ್ರೊ.ಪ್ರಭಾತ ಪಟ್ನಾಯಕ್

ಮುಂಬರುವ ನಾಲ್ಕು ವರ್ಷಗಳ ಅವಧಿಗೆ ಅಧ್ಯಕ್ಷರನ್ನು ಆಯ್ಕೆ ಮಾಡಲು ಅಮೆರಿಕದಲ್ಲಿ ನಡೆಯುತ್ತಿರುವ ಚುನಾವಣಾ ಪ್ರಚಾರದಲ್ಲಿ, ಒಂದು ಸಂಗತಿಯ ಬಗ್ಗೆ ಇಬ್ಬರು ಪ್ರತಿಸ್ಪರ್ಧಿಗಳೂ – ಹಿಲರಿ ಕ್ಲಿಂಟನ್ ಮತ್ತು ಡೊನಾಲ್ಡ್ ಟ್ರಂಪ್– ಕಪಟ ನಾಟಕವಾಡುತ್ತಿರುವುದು ಸ್ಪಷ್ಟವಾಗಿದೆ.

ಈ ವರ್ಷದ ಫೆಬ್ರವರಿಯಲ್ಲಿ, ಅಮೆರಿಕ ಮತ್ತು ಶಾಂತ ಸಾಗರದ ಹನ್ನೊಂದು ದೇಶಗಳ ನಡುವೆ ಟಿಪಿಪಿ – Trans-Pacific Partnership (TPP) ಹೆಸರಿನ ಒಂದು ವ್ಯಾಪಾರ ಒಪ್ಪಂದ ಏರ್ಪಟ್ಟಿದೆ. ಈ ಒಪ್ಪಂದ ಕುದುರಿಸಲು ಎಂಟು ವರ್ಷ ಹಿಡಿದಿದೆ. ಅದರಲ್ಲಿ, ಮೊದಲ ನಾಲ್ಕು ವರ್ಷಗಳ ಕಾಲ ಹಿಲರಿ ಕ್ಲಿಂಟನ್ ಅಮೆರಿಕದ ವಿದೇಶ ವ್ಯವಹಾರಗಳ ಸಚಿವೆಯಾಗಿ ಟಿಪಿಪಿ ಮಾತುಕತೆಗಳ ನೇತೃತ್ವ ವಹಿಸಿದ್ದರು .ಹಿಲರಿಯವರ ಅವಧಿಯ ನಂತರ, ವಿದೇಶ ವ್ಯವಹಾರಗಳ ಹಾಲಿ ಸಚಿವ ಜಾನ್ ಕೆರ್ರಿಯವರ ನೇತೃತ್ವದಲ್ಲಿ ಒಪ್ಪಂದ ಏರ್ಪಟ್ಟಿದೆ. ಹಿಲರಿಯವರು ಅಧಿಕಾರದಲ್ಲಿಲ್ಲದಿದ್ದರೂ ಒಬಾಮ ಆಡಳಿತದಲ್ಲಿ ಪ್ರಭಾವ ಹೊಂದಿದ್ದಾರೆ. ಅಷ್ಟಾಗಿಯೂ, ಶಕುಂತಳೆ ಹುಟ್ಟಿದ ನಂತರ ವಿಶ್ವಾಮಿತ್ರ ಮೇನಕೆಯನ್ನು ತ್ಯಜಿಸಿದಂತೆ, ಟಿಪಿಪಿ ಒಪ್ಪಂದಕ್ಕೂ ತನಗೂ ಸಂಬಂಧವಿಲ್ಲ ಎಂಬಂತೆ ಹಿಲರಿ ಸೋಗು ಹಾಕುತ್ತಿದ್ದಾರೆ. ಇನ್ನು, ಡೊನಾಲ್ಡ್ ಟ್ರಂಪ್ ಅದರ ಬಗ್ಗೆ ನಿರ್ದಿಷ್ಟವಾಗಿ ಏನನ್ನೂ ಹೇಳಲು ತಯಾರಿಲ್ಲ. ಈ ಒಪ್ಪಂದವು ಇಬ್ಬರನ್ನೂ ಇಕ್ಕಟ್ಟಿಗೆ ಸಿಲುಕಿಸಿದೆ!

ಮಹತ್ವಪೂರ್ಣ ವ್ಯತ್ಯಾಸ

ಅಮೆರಿಕದ ಏಕಸ್ವಾಮ್ಯ ಬಂಡವಾಳದ ಹಿತ ಕಾಪಾಡುವುನ್ನೇ ಮುಖ್ಯ ಉದ್ದೇಶವಾಗಿ ಹೊಂದಿರುವ ಈ ಒಪ್ಪಂದವು ಅಮೆರಿಕದ ರಾಷ್ಟ್ರೀಯ ಅರ್ಥವ್ಯವಸ್ಥೆಯ ಹಿತಕಾಯುವ ದೃಷ್ಟಿ ಹೊಂದಿಲ್ಲ ಎಂಬುದೇ ಇಲ್ಲಿರುವ ಮಹತ್ವಪೂರ್ಣ ವ್ಯತ್ಯಾಸ. ಇದುವೇ ಜಾಗತೀಕರಣ ಯುಗದ ವಿಶೇಷ. ಈ ವಿಶೇಷವನ್ನು ಹೀಗೆ ವಿವರಿಸಬಹುದು: ಅಮೆರಿಕದ ಬಹುರಾಷ್ಟ್ರೀಯ ಕಂಪೆನಿಗಳು ಕೂಲಿ ಕಡಿಮೆ ಇರುವ ಏಷಿಯಾದ ದೇಶಗಳಲ್ಲಿ ತಮ್ಮ ಕಾರ್ಖಾನೆಗಳನ್ನು ಸ್ಥಾಪಿಸಿ, ಅಮೆರಿಕ ದೇಶಕ್ಕೆ ಬೇಕಾದ ಸರಕು ಸರಂಜಾಮುಗಳನ್ನು ತಯಾರಿಸಿ ಅವುಗಳನ್ನುಅಮೆರಿಕ ಮಾರುಕಟ್ಟೆಯಲ್ಲಿ ಮಾರುವ ಮೂಲಕ ತಮ್ಮ ಲಾಭ ಹೆಚ್ಚಿಸಿಕೊಳ್ಳುತ್ತಿವೆ. ಇದು ಬಹುರಾಷ್ಟ್ರೀಯ ಕಂಪೆನಿಗಳ ಅವಶ್ಯಕತೆ. ಆದರೆ, ಬಹು ರಾಷ್ಟ್ರೀಯ ಕಂಪೆನಿಗಳು ಈ ವಿಧಾನ ಅನುಸರಿಸುತ್ತಿರುವುದರಿಂದ ಅಮೆರಿಕದಲ್ಲಿ ನಿರುದ್ಯೋಗ ಉಂಟಾಗುತ್ತದೆ ಮತ್ತು ಅದರ ಚಾಲ್ತಿ ಖಾತೆಯಲ್ಲಿ ಕೊರತೆ ಬೀಳುತ್ತದೆ. ಅದರಿಂದಾಗಿ ಅಮೆರಿಕದ ವಿದೇಶಿ ವ್ಯಾಪಾರ ಶಿಲ್ಕು ಪಾವತಿಯ ಸಮಸ್ಯೆ ಉಂಟಾಗುತ್ತದೆ. ಅದಕ್ಕಾಗಿ ಸಾಲ ಮಾಡಬೇಕಾಗುತ್ತದೆ. ಅಂದರೆ, ಬಹುರಾಷ್ಟ್ರೀಯ ಕಂಪೆನಿಗಳ ಲಾಭದ ಸಲುವಾಗಿ ದೇಶದ ಕೈಗಾರಿಕೆಗಳನ್ನು ಹಾಳುಮಾಡಿಕೊಳ್ಳಲು ಅಮೆರಿಕ ಸಾಲ ಮಾಡಿದಂತಾಗುತ್ತದೆ. ಹಾಗಾಗಿ, ಬಹುರಾಷ್ಟ್ರೀಯ ಕಂಪೆನಿಗಳ ಹಿತಾಸಕ್ತಿಗಳಿಗೂ ಮತ್ತು ಅವರದೇ ದೇಶದ ಹಿತಾಸಕ್ತಿಗಳಿಗೂ ವೈರುಧ್ಯ ಏರ್ಪಡುವುದರ ಜೊತೆಗೆ ರಾಜಕೀಯ ಕ್ಷೋಭೆಯೂ ಉಂಟಾಗಿದೆ.

ಅಮೆರಿಕದ ಏಕಸ್ವಾಮ್ಯ ಬಂಡವಾಳದ ಹಿತ ಕಾಪಾಡುವುದೇ ಟಿಪಿಪಿಯ ಪ್ರಮುಖ ಅಂಶ. ಟಿಪಿಪಿ ಒಪ್ಪಂದದ ಏರ್ಪಾಟುಗಳು, ಅಮೆರಿಕವೂ ಸೇರಿದಂತೆ ಅದರಲ್ಲಿ ಭಾಗವಹಿಸುವ ದೇಶಗಳ ಸಾರ್ವಭೌಮತೆಯ ಹರಣಮಾಡುತ್ತವೆ. ಹಾಗೆ ಮಾಡುವುದರಿಂದಲೇ ಜಾಗತೀಕರಣಗೊಂಡ ಬಂಡವಾಳದ ಬಲ ಹೆಚ್ಚಾಗುತ್ತಿರುವುದು. ಒಂದೆ–ರಡು ಉದಾಹರಣೆಗಳ ಮೂಲಕ ಈ ಅಂಶವನ್ನು ಸ್ಪಷ್ಟಪಡಿಸಬಹುದು. (1) ತಾವು ಹೊಸದಾಗಿ ಕಂಡುಹಿಡಿದ ವಸ್ತುಗಳ ತಯಾರಿಕೆ ಮತ್ತು ಮಾರಾಟದ ಮೇಲೆ ಬಹು ರಾಷ್ಟ್ರೀಯ ಕಂಪೆನಿಗಳು ಸ್ವಾಮ್ಯ (patent) ಹೊಂದಿರುತ್ತವೆ. ಅವು, ತಮ್ಮ ಸ್ವಾಮ್ಯದ ಹಕ್ಕುಗಳನ್ನು ಮತ್ತು ಈ ಒಪ್ಪಂದವನ್ನು ಬಳಸಿಕೊಂಡು, ಅಮೆರಿಕ ಮತ್ತು ಅದರ ಪಾಲುದಾರಿಕೆಯ ದೇಶಗಳಲ್ಲಿ ಔಷಧಿಗಳು ಮತ್ತು ಇತರ ವಸ್ತುಗಳ ಬೆಲೆಗಳನ್ನು ವಿಪರೀತವಾಗಿ ಏರಿಸುತ್ತವೆ. ಈ ಕ್ರಮದಿಂದಾಗಿ, ಬಹುರಾಷ್ಟ್ರೀಯ ಕಂಪೆನಿಗಳಿಗೆ ಹೇರಳವಾದ ಲಾಭ ಸಿಗುತ್ತದೆ. ಅದೇ ಸಮಯದಲ್ಲಿ, ಅಮೆರಿಕದ ಮತ್ತು ಅದರ ಪಾಲುದಾರಿಕೆಯ ದೇಶಗಳ ಜನರ ಆರ್ಥಿಕ ಪರಿಸ್ಥಿತಿ ಹದಗೆಡುವುದಲ್ಲದೆ, ಅಗತ್ಯ ವಸ್ತುಗಳ ಮೇಲೆ ಆ ದೇಶಗಳು ಸ್ವಾವಲಂಬನೆ ಸಾಧಿಸುವುದು ಸಾಧ್ಯವಾಗುವುದಿಲ್ಲ. (2) ಇನ್ನೊಂದು ಅಂಶವು ಟಿಪಿಪಿ ಒಪ್ಪಂದದಲ್ಲಿರುವ ಒಂದು ನಿಬಂಧನೆಗೆ ಸಂಬಂಧಿಸಿದೆ. ಹೂಡಿಕೆದಾರರು ಮತ್ತು ಹೂಡಿಕೆಯಾದ ದೇಶಗಳ ನಡುವಿನ ವಿವಾದ ಬಗೆಹರಿಸಿಕೊಳ್ಳುವ ಟ್ರಿಬ್ಯೂನಲ್‌ಗಳ ಕಾರ್ಯವೈಖರಿಗೆ ಸಂಬಂಧಿಸಿದ ಈ ನಿಬಂಧನೆ ಭಾರೀ ಚರ್ಚೆಗೆ ಮತ್ತು ವಿವಾದಕ್ಕೆ ಒಳಪಟ್ಟಿದೆ. ಒಂದು ವೇಳೆ, ವಿದೇಶಿ ಹೂಡಿಕೆದಾರನಿಗೂ ಮತ್ತು ಹಣ ಹೂಡಿಕೆಯಾದ ದೇಶದ ನಡುವೆಯೂ ಒಂದು ವಿವಾದ ಉಂಟಾದರೆ, ಅದನ್ನು ಆ ದೇಶದ ಕಾನೂನು ಚೌಕಟ್ಟು ಮತ್ತು ಅಲ್ಲಿನ ಕೋರ್ಟ್‌ಗಳ ಮೂಲಕ ಬಗೆಹರಿಸುವುದರ ಬದಲಾಗಿ, ಈ ಉದ್ದೇಶಕ್ಕಾಗಿಯೇ ರಚಿತವಾದ ಒಂದು ಟ್ರಿಬ್ಯೂನಲ್‌ಅದನ್ನು ಬಗೆಹರಿಸುತ್ತದೆ. ಅಂದರೆ, ಜಾಗತೀಕರಣಗೊಂಡ ಬಂಡವಾಳದ ಹಿತರಕ್ಷಣೆ ಮಾಡುವ ಸಲುವಾಗಿ ದೇಶದ ಪ್ರಭುತ್ವಕ್ಕಿಂತಲೂ ಮೇಲಿರುವ ಸಂಸ್ಥೆಗಳನ್ನು ರೂಪಿಸಲಾಗುತ್ತದೆ.

ಅಂತರಾಷ್ಟ್ರೀಯ ಬಂಡವಾಳವು ರಾಷ್ಟ್ರ–ಪ್ರಭುತ್ವಗಳನ್ನು ಮೂಲೆಗೆ ಸರಿಸಿ, ಅವುಗಳ ವ್ಯಾಪ್ತಿಯನ್ನೂ ಮೀರಿ, ಜಾಗತಿಕ ಆಡಳಿತವನ್ನು ತನ್ನ ಕೈ ವಶಪಡಿಸಿಕೊಳ್ಳುವ ವಿನೂತನ ಪ್ರಯೋಗ ಇದಾಗಿದೆ.ಇಂತಹ ನಿಬಂಧನೆಗಳಿಂದಾಗಿ, ಅಮೆರಿಕದ ಏಕಸ್ವಾಮ್ಯ ಬಂಡವಾಳವು ಹೂಡಿಕೆ ಮಾಡಿದ ದೇಶದ ಪ್ರಭುತ್ವದ ನಿಯಂತ್ರಣಗಳಿಂದ ತಪ್ಪಿಸಿಕೊಂಡು ಪ್ರಯೋಜನ ಪಡೆಯುತ್ತದೆ. ಅಷ್ಟೇ ಅಲ್ಲದೆ, ಅದು ಅಮೆರಿಕದ ಕಾನೂನುಗಳನ್ನೂ ಮಾನ್ಯಮಾಡುವುದಿಲ್ಲ ಎಂಬುದನ್ನೂ ಸೂಚಿಸುತ್ತದೆ.

ಅಮೆರಿಕದ ರಾಷ್ಟ್ರೀಯ ಅರ್ಥವ್ಯವಸ್ಥೆಯ ವಿರುದ್ಧ ಸ್ವತಃ ಅಮೆರಿಕದ ಪ್ರಭುತ್ವ!

ಟಿಪಿಪಿ ಒಪ್ಪಂದ ನೆರವೇರುವಂತಾಗಲು ಮುತುವರ್ಜಿ ವಹಿಸಿರುವ ಅಮೆರಿಕವು, ಜಾಗತೀಕರ–ಣಗೊಂಡ ಬಂಡವಾಳದ ಹಿತಕಾಪಾಡುವ ಸಲುವಾಗಿ, ಅಮೆರಿಕವೂ ಸೇರಿದಂತೆ, ರಾಷ್ಟ್ರ–ಪ್ರಭುತ್ವಗಳ ಕಾರ್ಯಕ್ಷೇತ್ರಗಳ ವ್ಯಾಪ್ತಿಯನ್ನು ಮೀರಿದ ಜಾಗತಿಕ ಕಾರ್ಪೊರೇಟ್ ಆಡಳಿತ ಸಂಸ್ಥೆಗಳನ್ನು ಹುಟ್ಟುಹಾಕಲು ಪ್ರಯತ್ನಿಸುತ್ತಿದೆ. ಅಮೆರಿಕದ ಪ್ರಭುತ್ವವು, ಅಮೆರಿಕದ ರಾಷ್ಟ್ರೀಯ ಅರ್ಥವ್ಯವಸ್ಥೆಯ ವಿರುದ್ಧವಾಗಿ ಮತ್ತು ಅಮೆರಿಕದ ಕಾರ್ಮಿಕ ವರ್ಗದ ವಿರುದ್ಧವಾಗಿ, ಬಂಡವಾಳಶಾಹಿಯೊಂದಿಗೆ ನಿಂತಿದೆ.

ಚುನಾವಣೆಗಳ ಸಮಯದಲ್ಲಿ ರಾಜಕೀಯ ಪಕ್ಷಗಳು ಪರೀಕ್ಷೆಗೊಳಗಾಗುತ್ತವೆ. ಅದರಲ್ಲೂ ಅಮೆರಿಕದ ಬಂಡವಾಳಶಾಹಿಯ ಪಾಲಿಗೆ ಈ ಹೊತ್ತಿನ ಚುನಾವಣೆಯು ಅಗ್ನಿ ಪರೀಕ್ಷೆಯಂತಾಗಿದೆ. ಏಕೆಂದರೆ, ಟಿಪಿಪಿ ಒಪ್ಪಂದದ ಆಗು ಹೋಗುಗಳ ಬಗ್ಗೆ ದುಡಿಯುವ ಎಲ್ಲ ಜನರೂ ತಮ್ಮ ಅಭಿಪ್ರಾಯಗಳನ್ನು ತಿಳಿಸುವ ಮತ್ತು ವ್ಯಕ್ತಪಡಿಸುವ ಅವಕಾಶ ಪಡೆಯುತ್ತಾ–ರೆ. ಅಮೆರಿಕದ ಅರ್ಥವ್ಯವಸ್ಥೆಯು ಬಿಕ್ಕಟ್ಟಿಗೆ ಒಳಗಾಗಿದೆ. ನಿರುದ್ಯೋಗ ಸಮಸ್ಯೆ ಉಲ್ಬಣಗೊಂಡಿದೆ. ದುಡಿಯುವ ಬಿಳಿಯ ಗಂಡಸರ ಮರಣ ಪ್ರಮಾಣ ಏರುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ, ಹಿಲರಿ ಕ್ಲಿಂಟನ್ ಮತ್ತು ಡೊನಾಲ್ಡ್ ಟ್ರಂಪ್ ಇಬ್ಬರಿಗೂ ಕಾರ್ಮಿಕ ವರ್ಗದ ವಿಶ್ವಾಸ ಪಡೆಯುವ ಅನಿವಾರ್ಯತೆ ಉಂಟಾಗಿದೆ.

ಕಾರ್ಮಿಕರು ಅನುಭವಿಸುತ್ತಿರುವ ಕಷ್ಟ ಕೋಟಲೆಗಳಿಗೆ ವ್ಯವಸ್ಥೆ ಕಾರಣವಲ್ಲ; ಬದಲಿಗೆ, ಅದೇನಿದ್ದರೂ ವಲಸೆಗಾರರು, ಮುಸ್ಲಿಮರು, ಅಲ್ಪಸಂಖ್ಯಾತರು ಮತ್ತು ಅಮೆರಿಕದ ಕೆಲಸಗಳನ್ನು ಕದಿಯುವ ಏಷ್ಯಾದ ಕೆಲಸಗಾರರಿಂದ ಉಂಟಾದ ಸಮಸ್ಯೆ ಎಂದು ಹೇಳುವ ಡೊನಾಲ್ಡ್ ಟ್ರಂಪ್, ಟಿಪಿಪಿ ಒಪ್ಪಂದದ ವಿರುದ್ಧ ಮಾತನಾಡುವುದು ಸ್ವಾಭಾವಿಕ. ಬಂಡವಾಳಶಾಹಿ ಆರ್ಥಿಕ ಪದ್ಧತಿಯ ಆರಾಧಕ ಟ್ರಂಪ್ ಅವರಿಗೆ ಅಮೆರಿಕದ ಬಂಡವಾಳಶಾಹಿಯ ಇಂಗದ ಲಾಭದಾಹದಿಂದಾಗಿ ಅಮೆರಿಕದ ಕೆಲಸಗಳು ಹೊರಹೋಗುತ್ತಿವೆ ಎಂಬುದು ಗೊತ್ತಿದೆ. ಒಂದುವೇಳೆ ಚುನಾಯಿತನಾದರೆ ಡೊನಾಲ್ಡ್ ಟ್ರಂಪ್ ಕೂಡ ಒಬಾಮ ಅವರಷ್ಟೇ ತೀವ್ರವಾಗಿ ಟಿಪಿಪಿಯನ್ನು ಪ್ರೋತ್ಸಾಹಿಸುತ್ತಾರೆ. ಆದರೆ, ಅವರ ಆಯ್ಕೆಯ ಸಾಧ್ಯತೆಯು ಅವರೆಷ್ಟು ಜೋರಾಗಿ ಟಿಪಿಪಿಯನ್ನು ವಿರೋಧಿಸುತ್ತಾರೆ ಎಂಬುದರ ಮೇಲೆ ನಿಂತಿದೆ.

ಹಿಲರಿ ಕ್ಲಿಂಟನ್ ಅವರಿಗೂ ಇದೇ ಮಾತು ಅನ್ವಯವಾಗುತ್ತದೆ. ಅವರ ರಾಜಕೀಯ ಸಿದ್ಧಾಂತವು ಟ್ರಂಪ್ ಅವರದ್ದಕ್ಕಿಂತ ಭಿನ್ನ. ಅಮೆರಿಕದ ಬಿಳಿಯ ಕಾರ್ಮಿಕರ ಸಂಕಷ್ಟಗಳಿಗೆ, ಟ್ರಂಪ್ ಹೇಳುವ ಕಾರಣಗಳನ್ನು ಇವರು ಒಪ್ಪುವುದಿಲ್ಲ.

ವಲಸೆಗಾರರು, ಮುಸ್ಲಿಮರು, ಅಲ್ಪಸಂಖ್ಯಾತರು ಮತ್ತು ಅಮೆರಿಕದ ಕೆಲಸಗಳನ್ನು ಕದಿಯುವ ಏಷ್ಯಾದ ಕೆಲಸಗಾರರ ಮೇಲೆ ಇವರು ಗೂಬೆ ಕೂರಿಸುತ್ತಿಲ್ಲ. ಆದರೂ, ಚುನಾವಣೆಯಲ್ಲಿ ಗೆಲ್ಲುವ ಸಲುವಾಗಿ, ಟಿಪಿಪಿ ಮಾತುಕತೆಗಳ ನೇತೃತ್ವ ವಹಿಸಿದ್ದ ಹಿಲರಿ, ಗತ್ಯಂತರವಿಲ್ಲದೆ ಅದನ್ನು ವಿರೋಧಿಸುವ ಸೋಗು ಹಾಕುತ್ತಿದ್ದಾರೆ.

ಹೊಸ ಕಾರ್ಯ ವ್ಯೂಹ

ಒಬಾಮ ಆಡಳಿತವು ಟಿಪಿಪಿ ಒಪ್ಪಂದಕ್ಕೆ ಅಮೆರಿಕದ ಕಾಂಗ್ರೆಸ್‌ನ ಸಮ್ಮತಿಕೋರಿದೆ. ಕಾಂಗ್ರೆಸ್‌ನ ಸಮ್ಮತಿ ದೊರಕಿಸಿಕೊಳ್ಳಲು ಒಬಾಮ ಒಂದು ಹೊಸ ಕಾರ್ಯವ್ಯೂಹದ ಮೊರೆ ಹೋಗಿದ್ದಾರೆ. ಅದು ಯಶಸ್ವಿಯಾಗುತ್ತದೆಯೋ ಇಲ್ಲವೋ ಎಂಬುದಕ್ಕಿಂತ ಮುಖ್ಯವಾಗಿ, ಈ ಹೊಸ ಕಾರ್ಯ ವ್ಯೂಹದಿಂದಾಗಿ, ಟಿಪಿಪಿಯ ವಿರುದ್ಧವಾಗಿ ಮಾತನಾಡುತ್ತಿರುವ ಹಿಲರಿ ಕ್ಲಿಂಟನ್ ಮತ್ತು ಡೊನಾಲ್ಡ್ ಟ್ರಂಪ್ ಇವರಲ್ಲಿ ಯಾರು ಅಧ್ಯಕ್ಷರಾಗಿ ಆಯ್ಕೆಯಾದರೂ, ತಿರುಗು ಮುರುಗು ಹೊಡೆದು, ಟಿಪಿಪಿ ಕಾರ್ಯಗತಗೊಳಿಸುವ ಅವರ ದಾರಿ ಸುಗಮವಾಗುತ್ತದೆ.


ಈ ಹೊಸ ಕಾರ್ಯ ವ್ಯೂಹದಡಿಯಲ್ಲಿ, ಟಿಪಿಪಿಯು ಅಮೆರಿಕದ ಪ್ರಯೋಜನಕ್ಕೆ ಬರುವ ಒಂದು ಆರ್ಥಿಕ ಏರ್ಪಾಟಿಗಿಂತಲೂ ಮುಖ್ಯವಾಗಿ ಅದು ಅಮೆರಿಕದ 'ಭದ್ರತೆ'ಗೆ ಅವಶ್ಯವಾಗಿರುವ ಏರ್ಪಾಟಿನ ಮಹತ್ವದ ಒಂದು ಭಾಗ ಎಂಬಂತೆ ಅದನ್ನು ಎತ್ತಿ ಹಿಡಿದು ಸಮರ್ಥಿಸಲಾಗುತ್ತದೆ. ಈ ಸಮರ್ಥನೆಗೆ ಇರುವ 'ಕಾರಣವೆಂದರೆ, ಆರ್ಥಿಕವಾಗಿ ತನಗೆ ಪ್ರಯೋಜನವಾಗದೆಂಬ ಕಾರಣ ಮುಂದೊಡ್ಡಿ ಅಮೆರಿಕ 'ಒಂದು ವೇಳೆ ಟಿಪಿಪಿಯಿಂದ ಹಿಂದೆ ಸರಿದರೆ, ಅಮೆರಿಕ 'ಒಂದು 'ವಿಶ್ವಾಸಾರ್ಹ ಭದ್ರತಾ ಪಾಲುಗಾರ' ಎಂಬ ನಂಬಿಕೆ ಇಲ್ಲವಾಗುತ್ತದೆ. ಟಿಪಿಪಿಯ ಸಹಯೋಗಿ ದೇಶಗಳೂ ನಾಳೆ ಹೀಗೆ ಹೇಳಬಹುದು: ಹಣ ಕಾಸಿನ ಹೊರೆಯಾಗುತ್ತದೆ ಎಂಬ ಲೆಕ್ಕಾಚಾರದ ಮೇಲೆ, ಒಂದು ಭದ್ರತಾ ಪಾಲುಗಾರ ದೇಶದೊಂದಿಗೆ ಮಾಡಿಕೊಂಡಿರುವ ಮಿಲಿಟರಿ ಸಹಾಯದ ಒಪ್ಪಂದದಿಂದ ಅಮೆರಿಕ ಹಿಂದೆ ಸರಿಯಬಹುದು, ಟಿಪಿಪಿಯಿಂದ ಹಿಂದೆ ಸರಿದಂತೆ.

ಸಿಂಗಪುರದ ಪ್ರಧಾನ ಮಂತ್ರಿ ಮತ್ತು ಟಿಪಿಪಿಯ ಸಹಯೋಗಿ ದೇಶಗಳ ಕೆಲವು ನಾಯಕರು ಇಂತಹ ಅನುಮಾನಗಳನ್ನು ವ್ಯಕ್ತಪಡಿಸುವಂತೆ ಒಬಾಮ ಅವರನ್ನು ಪುಸಲಾಯಿಸಿದ್ದಾರೆ ಮತ್ತು ಅದನ್ನು ಟಿಪಿಪಿ ಒಪ್ಪಂದಕ್ಕೆ ಸಮ್ಮತಿ ಪಡೆಯುವ ಸಲುವಾಗಿ ಅಮೆರಿಕದ ಕಾಂಗ್ರೆಸ್‌ನ ಮೇಲೆ ಒತ್ತಡ ತರಲು ಬಳಸಿಕೊಳ್ಳುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಈ ಒತ್ತಡ ಫಲಕಾರಿಯಾಗುತ್ತದೋ ಇಲ್ಲವೋ, ಯಾರು ಅಧ್ಯಕ್ಷರಾಗಿ ಆಯ್ಕೆಯಾದರೂ ಅವರು ಟಿಪಿಪಿ ವಿರೋಧದಿಂದ ಸಲೀಸಾಗಿ ಹಿಂದೆ ಸರಿಯಲು ಅದು ಸಹಾಯವಾಗುತ್ತದೆ. ಏನಾದರೂ, 'ರಾಷ್ಟ್ರೀಯ' ಭದ್ರತೆಗೆ ಯಾರಾದರೂ ವಿಮುಖರಾಗಲು ಸಾಧ್ಯವೇ?

'ರಾಷ್ಟ್ರ'ದ ಹಿತಾಸಕ್ತಿಗಳು ಮತ್ತು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಹಿತಾಸಕ್ತಿಗಳು ಬೇರೆ ಬೇರೆಯಲ್ಲ, ಅವು ಸಮಾನ 'ಅರ್ಥ ಹೊಂದಿವೆ ಎಂಬ ಪುರಾಣವನ್ನು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಪ್ರತಿಪಾದಕರು ಮತ್ತು ಅದರ ವಕ್ತಾರರು ಎಲ್ಲೆಡೆ ಹರಡುತ್ತಿದ್ದಾರೆ. ಒಂದು ಆರ್ಥಿಕ ಬಿಕ್ಕಟ್ಟು ನೆಲಗೊಂಡಿರುವ ಸಂದರ್ಭದಲ್ಲಿ, ಇಂತಹ 'ಒಂದುಅರ್ಥಿಕ ವಾದ–ವಿವರಣೆಗೆ ಯಾವ ವಿಶ್ವಾಸಾರ್ಹತೆಯೂ ಉಳಿದಿಲ್ಲ. ಜಾಗತೀಕರಣವು ಹಣಕಾಸು ಬಂಡವಾಳದ ಹಿತಾಸಕ್ತಿಗಳನ್ನು ಪೂರೈಸುತ್ತಿರುವ ಸಮಯದಲ್ಲೇ ದುಡಿಯುವ ಜನತೆಯ ಹಿತಾಸಕ್ತಿಗಳನ್ನು ನುಚ್ಚು ನೂರು ಮಾಡಿದೆ ಎಂಬುದೂ ಮತ್ತು ಜಾಗತೀಕರಣವು ಪ್ರಭುತ್ವವನ್ನು ನಿತ್ರಾಣಗೊಳಿಸುತ್ತಿರುವುದೂ ಹಾಗೂ ಅದು ಹಣಕಾಸು ಬಂಡವಾಳದ ಕೈಗೊಂಬೆಯಾಗಿ ಉಳಿದಿರುವುದೂ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ, ಒಂದು ಬಿಕ್ಕಟ್ಟಿನ ಸಂದರ್ಭದಲ್ಲಿ ಪ್ರಭುತ್ವವು ಮಧ್ಯಪ್ರವೇಶ ಮಾಡಲು ಬಳಸುವ ಅಸ್ತ್ರವನ್ನೇ ಅದು ಕಸಿದುಕೊಂಡಿದೆ ಎಂಬುದೂ ಈಗ ಎಲ್ಲರಿಗೂ ತಿಳಿದ ವಿಷಯವೇ. ತಮ್ಮ ದೇಶವು ಐರೋಪ್ಯ ಒಕ್ಕೂಟದಿಂದ ಹೊರ ಬರುವುದರ ಪರವಾಗಿ ಬ್ರಿಟಿಷ್ ಜನತೆ ಜನಮತಗಣನೆಯಲ್ಲಿ ವ್ಯಕ್ತಪಡಿಸಿರುವ ಬಹುಮತದ ತೀರ್ಮಾನ ಮತ್ತು ಟಿಪಿಪಿಯ ವಿರುದ್ಧವಾಗಿ ಅಮೆರಿಕದ ಜನತೆ ವ್ಯಕ್ತಪಡಿಸುತ್ತಿರುವ ವಿರೋಧ, ಇವು 'ರಾಷ್ಟ್ರ'ದ ಹಿತಾಸಕ್ತಿಗಳು ಮತ್ತು ಕಾರ್ಪೊರೇಟ್–ಹಣಕಾಸು ಬಂಡವಾಳದ ಹಿತಾಸಕ್ತಿಗಳು ಒಂದೇ ಅಲ್ಲ, ಅವು ಬೇರೆ ಬೇರೆಯೇ ಎಂಬುದನ್ನು ಸೂಚಿಸುತ್ತವೆ. ಇಂತಹ ಪರಿಸ್ಥಿತಿಯಲ್ಲಿ, ರಾಷ್ಟ್ರದ 'ಭದ್ರತೆ'ಯ ದೃಷ್ಟಿಯಿಂದ ಕಾರ್ಪೊರೇಟ್–ಹಣಕಾಸು ಬಂಡವಾಳದ ಆರ್ಥಿಕ ಹಿತಾಸಕ್ತಿಗಳನ್ನು ಉತ್ತೇಜಿಸುವ ಅಂತಾರಾಷ್ಟ್ರೀಯ ಏರ್ಪಾಟುಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ ಎಂಬ ಒಂದು ಹೊಸ ವಾದವನ್ನು ಮುಂದೊಡ್ಡಲಾಗುತ್ತಿದೆ.

(ಇದು 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆ ಪ್ರಕಟಿಸಿರುವ ಪ್ರೊ. ಪ್ರಭಾತ್ ಪಟ್ನಾಯಕ್ ಅವರ TheTPP and US Politics ಲೇಖನದ ಭಾವಾನುವಾದ.)

ಟಿ ಪಿ ಪಿ ಎಂದರೇನು?



ಈ ವರ್ಷದ ಫೆಬ್ರವರಿಯಲ್ಲಿ, ಅಮೆರಿಕ ಮತ್ತು ಶಾಂತ ಸಾಗರದ ಹನ್ನೊಂದು ದೇಶಗಳ ನಡುವೆ ಏರ್ಪಟ್ಟಿರುವ ಒಂದು ವ್ಯಾಪಾರ ಒಪ್ಪಂದ.

ವಿಶ್ವ ಜಿಡಿಪಿಯ 40%ರಷ್ಟು ವಹಿವಾಟನ್ನು ಒಳಗೊಂಡಿರುವ ಈ ಒಪ್ಪಂದವನ್ನು ಚರಿತ್ರೆಯಲ್ಲೇ ಅತಿದೊಡ್ಡ ವ್ಯಾಪಾರ 'ಒಪ್ಪಂದವೆಂದು ಹೇಳಲಾಗಿದೆ.

ಪ್ರಾದೇಶಿಕ ಮಟ್ಟದಲ್ಲಿ ಹೆಚ್ಚುತ್ತಿರುವ ಚೀನಾದ ಪ್ರಭಾವವನ್ನು ತಗ್ಗಿಸುವುದೇ ಈ ಒಪ್ಪಂದದ ಒಳಗುಟ್ಟು.

ಜಪಾನ್, ಆಸ್ಟ್ರೇಲಿಯಾ, ವಿಯಟ್ನಾಂ, ನ್ಯೂಝಿಲ್ಯಾಂಡ್, ಸಿಂಗಪುರ, ಮಲೇಷಿಯಾ, ಬ್ರೂನೈ, ಪೆರು, ಮೆಕ್ಸಿಕೊ, ಚಿಲಿ ಮತ್ತು ಕೆನಡಾ ದೇಶಗಳು ಈ ಒಪ್ಪಂದದಲ್ಲಿ ಸೇರಿವೆ.

ಅಮೆರಿಕಾದ ಕಾರ್ಮಿಕರೂ ಸೇರಿದಂತೆ ಈ ಎಲ್ಲ ದೇಶಗಳ ಕಾರ್ಮಿಕರು ಇದನ್ನು ವಿರೋಧಿಸುತ್ತಿದ್ದಾರೆ.

ತಮಿಳುನಾಡು: ಕೊಯಮತ್ತೂರಿನಲ್ಲಿ ಕೋಮುವಾದಿಗಳ ಅಟ್ಟಹಾಸ

ತಮಿಳುನಾಡಿನ ಪ್ರಮುಖ ಕೈಗಾರಿಕಾ ಕೇಂದ್ರವಾಗಿರುವ ಕೊಯಮತ್ತೂರು ಮತ್ತು ಸುತ್ತಲಿನ ಸ್ಥಳಗಳಲ್ಲಿ ಕಳೆದ ಕೆಲವು ದಿನಗಳಿಂದ ಹಿಂಸಾಚರ ಭುಗಿಲೆದ್ದಿದೆ. ಹಿಂದು ಮುನ್ನಣಿ(ಸಂಘ ಪರಿವಾರದ ಒಂದು ಭಾಗ) ಭಯೋತ್ಪಾದನೆಯನ್ನು ಹರಿಯಬಿಟ್ಟಿದೆ. ಆ ಸಂಘಟನೆಯ ಮುಖಂಡ ಶಶಿಕುಮಾರ್ ಕೊಲೆ ಮತ್ತು ಅದಕ್ಕೆ ಆ ಸಂಘಟನೆ ನಡೆಸಿದ ಬಂದ್‌ನೊಂದಿಗೆ ಹಿಂಸಾಚಾರ ಆರಂಭವಾಯಿತು. ಶಶಿಕುಮಾರ್ ಅವರನ್ನು ದಾಖಲಿಸಿದ್ದ ಆಸ್ಪತ್ರೆಯ ಹೊರಗೆ ನೆರೆದಿದ್ದ ಮುನ್ನಣಿ ಮತ್ತು ಅದರ ಸಹಯೋಗಿ ಸಂಘಟನೆಗಳ ಕಾರ್ಯಕರ್ತರು ಈ ಹಿಂಸಾಚಾರವನ್ನು ಅಲ್ಲೇ ಯೋಜಿಸಿದ್ದರು ಎಂದು ಹೇಳಲಾಗಿದೆ. ಮುಸ್ಲಿಮರ ಒಡೆತನದ ಅಂಗಡಿಗಳ ಮೇಲೆ ದಾಳಿ, ಬೆಂಕಿ ಹಚ್ಚುವ ಘಟನೆಗಳು ನಡೆದವು. ನೆರೆಯ ತಿರುಪುರ್‌ನಲ್ಲೂ ಆಗಾಗ ಹಿಂಸಾಚಾರ ನಡೆಯಲಾರಂಭಿಸಿತು.

ಸಿಪಿಐ(ಎಂ) ತಮಿಳುನಾಡು ರಾಜ್ಯಸಮಿತಿ ಶಶಿಕುಮಾರ್ ಕೊಲೆಯನ್ನೂ, ನಂತರ ಸಂಘ ಪರಿವಾರದ ಸಂಘಟನೆಗಳು ನಡೆಸಿದ ಹಿಂಸಾಚಾರವನ್ನೂ ಖಂಡಿಸಿದೆ. ಗಲಭೆಕೋರರು ಸಾಮಾನ್ಯವಾಗಿ ಕೊಲೆಯ ಘಟನೆಗಳನ್ನು ನೆವವಾಗಿ ಇಟ್ಟುಕೊಂಡು ಹಿಂಸಾಚಾರ ನಡೆಸುತ್ತಾರೆ, ಪೋಲೀಸರು ಇದನ್ನು ನಿರೀಕ್ಷಿಸಿ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು, ಆಸ್ಪತ್ರೆಯ ಮುಂದೆ ಸಾವಿರಾರು ಜನ ಸೇರಲು ಬಿಡಬಾರದಿತ್ತು, ಪೋಲೀಸರು ಮೂಕ ಪ್ರೇಕ್ಷಕರಾಗಿದ್ದರು ಎಂದು ಸಿಪಿಐ(ಎಂ) ರಾಜ್ಯ, ಕಾರ್ಯದರ್ಶಿ ಜಿ.ರಾಮಕೃಷ್ಣನ್‌ಹೇಳಿಕೆಯೊಂದರಲಿ ತಿಳಿಸಿದ್ದಾರೆ.

ತಮಿಳುನಾಡು ಪೋಲೀಸ್ ಮಹಾನಿರ್ದೇಶಕರಿಗೆ ಬರೆದ ಪತ್ರದಲ್ಲಿ ಅವರು ಗಲಭೆ ಪೀಡಿತ ಪ್ರದೇಶಗಳ ಮತ್ತು ಹಾನಿಗೊಳಗಾದ ಸಾರ್ವಜನಿಕ ಮತ್ತು ಖಾಸಗಿ ಆಸ್ತಿಗಳ ಪಟ್ಟಿಯನ್ನು ಸಲ್ಲಿಸಿದ್ದಾರೆ. ಮುಸ್ಲಿಂ ಜನಸಂಖ್ಯೆ ಹೆಚ್ಚಿರುವ ಪ್ರದೇಶಗಳಲ್ಲಿ ನಡೆಸಿರುವ ದಾಳಿ, ಲೂಟಿಯ ವೀಡಿಯೋ ರೆಕಾರ್ಡಿಂಗ್‌ಗಳು ಬಹಳಷ್ಟು ಹರಿದಾಡುತ್ತಿವೆ. ಸಿಪಿಐ(ಎಂ) ಮತ್ತು ಡಿವೈಎಫ್‌ಐ ಕಚೇರಿ ಮೇಲೂ ದಾಳಿ ನಡೆದಿದೆ.

ಕೆಲವು ಪೋಲಿಸ್ ಸಿಬ್ಬಂದಿಯೇ ಮುಸ್ಲಿಮರು ಶಶಿಕುಮಾರ್ ಅವರನ್ನು ಕೊಂದಿದ್ದಾರೆ, ಇದೀಗ ಮುಸ್ಲಿಮರ ಮೇಲೆ ದಾಳಿ ಮಾಡಲು ಸರಿಯಾದ ಸಮಯ ಎಂದು ಸಾರ್ವಜನಿಕವಾಗಿ ಹೇಳಿ ರುವುದು ಪರಿಸ್ಥಿತಿ ಹದಗೆಡುವಂತೆ ಮಾಡಿತು ಎಂದು ಹೇಳಲಾಗಿದೆ. ಮುನ್ನಣಿಯ ರ್‍ಯಾಲಿಯನ್ನು ಹೆಸರಿಗೇನೋ ನಿಷೇಧಿಸಲಾಯಿತು, ಆದರೆ ಅದು ಸುಮಾರು 10 ಕಿ.ಮೀ. ಕ್ರಮಿಸಲು ಬಿಡಲಾಯಿತು.



ಸಿಪಿಐ(ಎಂ) ಮುಖಂಡರು ತಕ್ಷಣವೇ ಜಿಲ್ಲಾ ಕಲೆಕ್ಟರನ್ನು ಭೇಟಿ ಮಾಡಿ ನಗರದಲ್ಲಿ ಶಾಂತಿ ಕಾಪಾಡುವಂತೆ ಆಗ್ರಹಿಸಿದರು. ಡಿಎಂಕೆ, ಡಿಡಿಎಂಕೆ, ಟಿಎಂಸಿ, ಟಿಪಿಡಿಕೆ, ಸಿಪಿಐ ಮತ್ತಿತರ ಪಕ್ಷಗಳವರನ್ನು ಭೇಟಿ ಮಾಡಿ ಕಲೆಕ್ಟರ್‌ಗೆ ಒಂದು ಮನವಿಯನ್ನೂ ಸಲ್ಲಿಸಿದರು.

ನಗರದ ರೇಸ್‌ಕೋರ್ಸ್ ರಸ್ತೆಯ ಪೋಲಿಸ್ ಠಾಣೆಯ ಎದುರು ಐಕ್ಯತೆ ಮತ್ತು ಶಾಂತಿಗಾಗಿ ಒಂದು ಪ್ರದರ್ಶನ ನಡೆಸಲಾಯಿತು. ಅದರಲ್ಲಿ ಸೇರಿದ್ದ ಸಾವಿರಾರು ಮಂದಿ ಕೋಮು ಸೌಹಾರ್ದವನ್ನು ಕಾಪಾಡುವ ಪ್ರತಿಜ್ಞೆ ಕೈಗೊಂಡರು. ನಂತರ ಟಿ.ಕೆ. ರಂಗರಾಜನ್ ನೇತೃತ್ವದ ಸಿಪಿಐ(ಎಂ) ತಂಡ ಗಲಭೆ ಸಂತ್ರಸ್ತರನ್ನು ಭೇಟಿ ಮಾಡಿತು.

ಸಿ.ಪಿ.ಐ (ಎಂ)ನ ಪ್ರತಿನಿಧಿಗಳಿಂದ ಬಿಜ್ನೋರ್‌ಗೆ ಭೇಟಿ ಕ್ಷಿಪ್ರಕ್ರಮ ಮತ್ತು ಸೂಕ್ತ ಪರಿಹಾರಕ್ಕಾಗಿ ಆಗ್ರಹ

ಉತ್ತರ ಪ್ರದೇಶದ ಬಿಜ್ನೋರ್‌ನಲ್ಲಿ ಸಪ್ಟೆಂಬರ್16ರಂದು ಯಾಸೀಮ್ ಎಂಬ ಬಾಲಕಿಗೆ ಶಾಲೆಗೆ ಹೋಗುತ್ತಿರುವ ಸಂದರ್ಭದಲ್ಲಿ ಕೆಲವು ಜಾಟ್ ಸಮುದಾಯದ ಯುವಕರು ಕಿರುಕುಳ ನೀಡುತ್ತಿದ್ದರು, ಆಕೆಯ ಸಹೋದರ ಮಧ್ಯಪ್ರವೇಶಿಸಿದ್ದರ ಪರಿಣಾಮ ಪರಿಸ್ಥಿತಿ ಸರಿಹೋಗಿ ಇಬ್ಬರೂ ಪೇಡಾ ಹಳ್ಳಿಯಲ್ಲಿರುವ ತಮ್ಮ ಮನೆಗೆ ತೆರಳಿದರು. ಮುಂದಿನ 20 ನಿಮಿಷದ ಒಳಗೆ ಸುಮಾರು 100 ಜಾಟ್‌ಯುವಕರು ಮನೆ ಮೇಲೆ ಏರಿ ಅಲ್ಲಿಂದ ಕೆಳಗೆ ಕಾಣುತ್ತಿದ್ದ ಯಾಸೀಮ್ ಮತ್ತು ಆಕೆಯ ಬಂಧುಗಳ ಮೇಲೆ ಸಿಕ್ಕ ಸಿಕ್ಕಂತೆ ಗುಂಡು ಹಾರಿಸಿದ್ದಾರೆ.

ಅಮೀನುದ್ದೀನ್ ಎಹಸಾನ್(ಸಹೋದರ) ಮತ್ತು ಸರ್ಫರಾಜ್‌ಇವರೆಲ್ಲ ಸ್ಥಳದಲ್ಲೆ ಮೃತಪಟ್ಟರೆ ಕುಟುಂಬದ 14 ಜನ ತೀವ್ರಗಾಯಕ್ಕೀಡಾಗಿದ್ದರು. ಗಾಯಾಳುಗಳನ್ನು ಬಲವಂತವಾಗಿ ಆಸ್ಪತ್ರೆಯಿಂದ ಹೊರಹಾಕಲು ಪ್ರಯತ್ನಿಸುತ್ತಿದ್ದ ಸಂದರ್ಭದಲ್ಲಿ ಸಿ.ಪಿ.ಐ (ಎಂ) ನ ಮಧ್ಯಪ್ರವೇಶದಿಂದಾಗಿ ತಡೆಯಲು ಸಾಧ್ಯವಾಯಿತು.

6 ಜನ ಆರೋಪಿಗಳನ್ನು ಬಂಧಿಸಲಾಗಿದೆ, ಮುಂದಿನ ಮೂರು ದಿನಗಳಲ್ಲಿ ಇನ್ನು ಇಬ್ಬರ ಹೆಸರುಗಳು ಬಯಲಾಗಿದೆ. ಜಿಲ್ಲಾ ನ್ಯಾಯಾಧೀಶರು ಈ ಘಟನೆಯನ್ನುಗಂಭೀರವಾಗಿ ಪರಿಗಣಿಸಲಾಗುವದು ಎಂದು ಹೇಳಿದ್ದಾರೆ.

ಅದೃಷ್ಟವಶಾತ್ ಈ ಘಟನೆ ದೊಡ್ಡ ಕೋಮುಗಲಭೆ ಸ್ವರೂಪವನ್ನು ಪಡೆದು ಕೊಳ್ಳಲಿಲ್ಲ. ಆದರೆ ಹಲವಾರು ಬಾಲಕ ಬಾಲಕಿಯರು ಮತ್ತು ಮಹಿಳೆಯರು ಗಾಯಗೊಂಡಿದ್ದಾರೆ

ಪೊಲಿಟ್‌ಬ್ಯೂರೋ ಸದಸ್ಯರಾದ ಸುಭಾಶಿಣಿ ಅಲಿ, ಜಿಲ್ಲಾ ಕಾರ್ಯದರ್ಶಿ ಬಲವಂತ್ ಸಿಂಘ್, ಉತ್ತರಪ್ರದೇಶ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಡಿ.ಪಿ. ಸಿಂಗ್ ಅವರು ಪ್ರತಿನಿಧಿ ಮಂಡಳಿಯಲ್ಲಿದ್ದರು.

ಸರ್ವಪಕ್ಷ ನಿಯೋಗದ ಶಿಫಾರಸನ್ನು ಮೂಲೆಗೊತ್ತಿರುವುದು ದುರದೃಷ್ಟಕರ -ಯೂಸುಫ್ ತರಿಗಾಮಿ

ವಿಳಂಬವಾಗಿಯಾದರೂ ಸರ್ವಪಕ್ಷ ನಿಯೋಗ ಶ್ರೀನಗರಕ್ಕೆ ಭೇಟಿ ನೀಡಿರುವುದು ಒಂದು ಸವಾಗತಾರ್ಹ ಕ್ರಮವಾಗಿತ್ತು. ಆದರೆ ಕೇಂದ್ರ ಗೃಹಮಂತ್ರಿಗಳೊಮದಿಗೆ ನಡೆಸಿದ ಕಲಾಪ ಹಾಗೂ ಸಂಸದರ ಗುಂಪಿನ ಶಿಫಾರಸುಗಳ ಬಗ್ಗೆ ಏನೂ ಮಾಡಿಲ್ಲದಿರುವುದುರಿಮದ ರಾಜ್ಯದ ಜನಗಳಲ್ಲಿನ ಭ್ರಮನಿರಸನ ಮತ್ತು ಪರಕೀಯ ಭಾವ ಇನ್ನೂ ಹೆಚ್ಚುವಂತಾಗಿದೆ. ಕಾಶ್ಮೀರ ಪ್ರಶ್ನೆಯನ್ನು ಎದುರಿಸುವಲ್ಲಿ ಸರಕಾರದ ನಿಲುವು ಪ್ರಸ್ನಾರ್ಹವಾಗಿದೆ ಎಂದು ಸಿಪಿಐ(ಎಂ) ಶಾಸಕ ಮಹಮ್ಮದ್ ಯೂಸುಫ್ ತರಿಗಾಮಿ ಸಪ್ಟಂಬರ್ 28ರಂದು ಶ್ರೀನಗರದಲ್ಲಿ ಪತ್ರಿಕಾ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತ ಹೇಳಿದರು.

ಸಂಬಂಧಪಟ್ಟ ಎಲ್ಲರೊಂದಿಗೆ ಒಂದು ವಿಶ್ವಾಸಾರ್ಹ ಮತ್ತು ಸಮಗ್ರ ಸಮವಾದ ನಡೆಸುವಲ್ಲಿ ಸರಕಾರ ವಿಳಂಬ ತಂತ್ರ ಅನುಸರಿಸುತ್ತಿರುವಂತೆ ಕಾಣುತ್ತದೆ. ವಿಪರೀತ ಬಲಪ್ರಯೋಗಿಸಿ ಅಸಂತೋಷವನ್ನು ಶಮನಗೊಳಸಿಬಹುದೇ ತನ್ನ ಮುಂದಿರುವ ಆಯ್ಕೆ ಎಂದು ಸರಕಾರ ಬಗೆದಿದ್ದರೆ ಅದು ಈ ರಾಜ್ಯ-ಕ್ಕೆ ಮಾಡುವ ಅನ್ಯಾಯ ಎಂದಿರುವ ತರಿಗಾಮಿ ಇದರಿಂದ ಯಾರಿಗೂ ಒಳಿತಾಗುವುದಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಸಂವಾದ ನಡೆಸುವುದು ಬಿಟ್ಟು ಬೇರ ದಾರಿಯಿಲ್ಲ. ಸರಕಾರ ಎಲ್ಲ ರಾಜಕೀಯ ಛಾಯೆಗಳ ಸಂಸದರ ಒಂದು ಸಮಿತಿಯನ್ನು ರಚಿಸಬೇಕು, ಅದಕ್ಕೆ ಸಹಾಯ ನೀಡಲು ಪರಿಣತರನ್ನು ನೇಮಿಸಬೇಕು ಎಂದು



ಕಾಶ್ಮೀರವನ್ನು ಭಾರತ ಮತ್ತು ಪಾಕಿಸ್ತಾನದ ಪಗಡೆಯಾಟದ ದಾಳವಾಗಿ ಮಾಡಬಾರದು,

ಪರಿಗಾಮಿ ಆಗ್ರಹಿಸಿದ್ದಾರೆ. ಇಲ್ಲವಾದರೆ ಜನಗಳಲ್ಲಿನ ಭ್ರಮನಿರಸನ ಮತ್ತಷ್ಟು ಆಳಗೊಳ್ಳುತ್ತದೆಎ ಎಂದು ಎಚ್ಚರಿಸಿದ್ದಾರೆ.

ಸಾರ್ವಜನಿಕ ಸುರಕ್ಷತಾ ಕಾಯಿದೆಯನ್ನು ವಿವೇಚನೆ ಇಲ್ಲದೇ ಯುವಜನತೆಯ ಮೇಲೆ ಹೇರುವದನ್ನು ನಿಲ್ಲಿಸಬೇಕು. ಬಹುತೇಕ ಪ್ರಕರಣಗಳಲ್ಲಿ ಯಾವುದೇ ಮಾನ್ಯಮಾಡಬಹುದಾದ ಕಾರಣಗಳು ಆಗೂ ಪ್ರಮುಖ ಆಧಾರಗಳಿಲ್ಲದೇ ಯುವಕರ ಮೇಲೆ ಈ ಕಾನೂನನ್ನು ಹೇರಲಾಗುತ್ತದೆ, ಇದು ಈಗಾಗಲೇ ಆಳವಾಗಿ ಬೇರೂರಿರುವ ಕೋಪ ಮತ್ತು ಅಸಮಾಧನಗಳನ್ನು ಇನ್ನಷ್ಟು ಕೆರಳಿಸುತ್ತದೆ. ರಾಜ್ಯದಾದ್ಯಂತ ಗೊತ್ತುಗುರಿ ಇಲ್ಲದೇಯುವಕರನ್ನು ಬಂದಿಸಲಾಗುತ್ತಿದೆ ಇಂತಹ ಕೃತ್ಯಗಳಿಗೆ ತಕ್ಷಣವೇತಡೆ ಹಾಕಬೇಕು ಎಂದು ಅವರು ಆಗ್ರಹಿಸಿದರು.

ಪ್ರತಿಭಟನೆಗಳನ್ನು ಎದುರಿಸುವ ಹೆಸರಲ್ಲಿ ಭದ್ರತಾ ಪಡೆಗಳು ವಾಸದ ಮನೆಗಳಿಗೆ ದೊಡ್ಡ ಪ್ರಮಾಣದಲ್ಲಿ ಅನಗತ್ಯ ಹಾನಿಯುಂಟು ಮಾಡಿವೆ.ಜೀವ ಮತ್ತು ಆಸ್ತಿಪಾಸ್ತಿ ಹಾನಿಗಳನ್ನು ಅನುಭವಿಸಿರುವವರಿಗೆ ಸೂಕ್ತ ಪರಿಹಾರ, ಮರುವಸತಿ ನೀಡಬೇಕು, ತೀವ್ರವಾಗಿ ತಟ್ಟಿರುವ ತೋಟಗಾರಿಕೆ ಮತ್ತು ಸಾಗಾಣಿಕೆ ವಲಯದಲ್ಲಿ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾಮಾಡಿ ನೆರವು ನೀಡಬೇಕು ಎಂದು ಯೂಸುಫ್ ತರಿಗಮಿ ಆಗ್ರಹಿಸಿದ್ದಾರೆ.

ಸಶಸ್ತ್ರ ಪಡೆಗಳ ವಿಶೇಷ ಅಧಿಕಾರಗಳ ಕಾಯ್ದೆಯನ್ನು ಹಿಂತೆಗೆದುಕೊಳ್ಳುವುದೂ ಜನಗಳಲ್ಲಿ ವಿಶ್ವಾಸ ಮೂಡಿಸಲು ಅನಿವಾರ್ಯ.

ಸಂವಾದ ನಡೆಸುವುದಲ್ಲದೆ ಅನ್ಯ ಮಾರ್ಗವಿಲ್ಲ ಎಂದು ಪುನರುಚ್ಚರಿಸಿರುವ ತರಿಗಾಮಿ ಉರಿಯ ಘಟನೆಯನ್ನು ನೆವವಾಗಿ ಮಾಡಬಾರದು, ಕಾಶ್ಮೀರವನ್ನು ಭಾರತ ಮತ್ತು ಪಾಕಿಸ್ತಾನದ ಪಗಡೆಯಾಟದ ದಾಳವಾಗಿ ಮಾಡಬಾರದು, ಕಾಶ್ಮೀರ ಸಮಸ್ಯೆಗೆ ಒಂದು ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಯಾವುದೇ ಕಠಿಣ ನಿಲುವು ತಳೆಯಬಾರದು ಎಂದು ಈ ಸಿಪಿಐ(ಎಂ) ಮುಖಂಡರು ಸಲಹೆ ಮಾಡಿದ್ದಾರೆ.

ರಾಜ್ಯಗಳ ಸುತ್ತ

ಭಾರತಿ ಗಾಂವ್ಕರ್

ಚಂಡಿಘಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಭಗತ್ ಸಿಂಗ್ ಹೆಸರಿಡಲು ಸಿ.ಪಿ.ಐ (ಎಂ) ಆಗ್ರಹ

ಸಿ.ಪಿ.ಐ (ಎಂ) ಪಂಜಾಬ್ ರಾಜ್ಯ ಸಮಿತಿ ಚಂಡಿಘಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶಹೀದ್-ಎ-ಆಜ್ಹಮ್ ಸರದಾರ್ ಭಗತ್ ಸಿಂಗ್ ಎಂದು ಹೆಸರಿಡಬೇಕೆಂದು ಆಗ್ರಹಿಸಿದೆ. ಹುತಾತ್ಮ ಭಗತ್ ಸಿಂಗ್‌ನ 109ನೇ ಜನ್ಮದಿನವಾದ ಸೆಪ್ಟೆಂಬರ್ 28 ರಂದೇ ಅದನ್ನು ಘೋಷಿಸುವುದು ಸೂಕ್ತ ಎಂದು ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಚರಣ ಸಿಂಗ್ ವಿರ್ದಿ ಪತ್ರಿಕಾ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

ದೇಶದ ಯುವ ಮತ್ತು ವಿಧ್ಯಾರ್ಥಿ ಸಮುದಾಯಕ್ಕೆ ಆದರ್ಶಪ್ರಾಯರಾಗಿರುವ ಭಗತ್ ಸಿಂಗ್ ಒಬ್ಬ ಸ್ವಾತಂತ್ರ್ಯ ಹೋರಾಟಗಾರ, ಗೌರವಾನ್ವಿತ, ಹಾಗೂ ಜನಪ್ರೀತಿ ಪಾತ್ರ ಹುತಾತ್ಮ, ಹಾಗಾಗಿ ಅವರ ಹೆಸರೇ ಸೂಕ್ತ. ಮೂಲಭೂತ ವಾದಿಗಳು, ತೀವ್ರವಾದಿಗಳು ಮತ್ತು ಭಯೋಯ್ಪಾದಕ ಶಕ್ತಿಗಳು ದೇಶದ ಶಾಂತಿಯನ್ನು ಕದಡುತ್ತಿರುವ, ಕೋಮು ಸೌಹಾರ್ದತೆ, ಐಕ್ಯತೆ ಮತ್ತು ಸಮಗ್ರತೆಗೆ ಗಂಡಾಂತರಇರುವ ಈ ಸಂದರ್ಭದಲ್ಲಿ ದೇಶಭಕ್ತಿ ಮತ್ತು ಜಾತ್ಯಾತೀತ ಭಾವನೆಗಳನ್ನು ಯುವಜನ ಮತ್ತು ಎಲ್ಲ ನಾಗರಿಕರಲ್ಲಿ ಬಿತ್ತಿ ಸ್ಪೂರ್ತಿ ತುಂಬಲು ಇದರಿಂದ ಅನುಕುಲವಾಗುತ್ತದೆ ಎಂದು ಅವರು ಹೇಳಿದ್ದಾರೆ.

ಅಸ್ಸಾಂನ ಕಾಜಿರಂಗಾ ರೈತರ ಕೊಲೆ ದಿಲ್ಲಿಯಲ್ಲಿ ಆಸ್ಸಾಂ ಭವನದ ಎದುರು ಪ್ರತಿಭಟನೆ

ಸಪ್ಟೆಂಬರ್ 23ರಂದು ನವದೆಹಲಿಯ ಚಾಣಕ್ಯಪುರಿಯಲ್ಲಿರುವ ಆಸ್ಸಾಂ ಭವನದ ಮುಂದೆ ದೆಹಲಿ ಕ್ರಿಯಾ ಸಮಿತಿ ಬ್ಯಾನರ್ ಅಡಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಆಸ್ಸಾಂನಲ್ಲಿ ಪೋಲೀಸರು ನಡೆಸಿದ ಗುಂಡಿನ ದಾಳಿಯಲ್ಲಿ ಇಬ್ಬರು ರೈತರ ಕ್ರೂರ ಹತ್ಯೆಗೆ ಕಾರಣವಾದ ಆಸ್ಸಾಂ ನ ಬಿ.ಜೆ.ಪಿ ನೇತೃತ್ವದ ಸರಕಾರದ ದೌರ್ಜನ್ಯವನ್ನು ಖಂಡಿಸಲಾಯಿತು.

ಕಾಜಿರಂಗಾ ಹಳ್ಳಿಯಲ್ಲಿ ರೈತರು 1960 ರಿಂದ ವಾಸಿಸುತ್ತಿದ್ದು ಭೋಗ್ಯಕರಾರು, ಪಡಿತರ ಚೀಟಿ, ಮತದಾನ ಗುರುತಿನ ಚೀಟಿ ಎಲ್ಲವನ್ನೂ ಹೊಂದಿದ್ದಾರೆ ಉಚ್ಚ ನ್ಯಾಯಾಲಯ ಆದೇಶಿಸಿದಂತೆ ಅವರು ತಮ್ಮ ಭೂಮಿಯನ್ನು ಬಿಟ್ಟುಕೊಡಲು ತಯಾರಿದ್ದಾರೆ. ಆದರೆ ಅಧಿಕಾರಿಗಳು ಸರಿಯಾದ ಪುನರ್ವಸತಿ ಮತ್ತು ಪರಿಹಾರ ಒದಗಿಸಿದರೆ ಮಾತ್ರ. ಎಂದು ಕ್ರಿಯಾ ಸಮಿತಿ ಮುಖಂಡ ಬೆನಜೀತ್ ಹುಸ್ಸೈನ್ ಹೇಳಿದರು. ನಾಗರೀಕ ಹಕ್ಕುಗಳನ್ನು ಪರಿಗಣನೆಗೆ ತೆಗೆದು ಕೊಳ್ಳದೇ ಕೇವಲ ಮುಸ್ಲಿಂ ಎಂಬ ಕಾರಣಕ್ಕಾಗಿ ಕೋಮುವಾದೀ ಮನೋಭಾವ ಹೊಂದಿರುವ ಆಸ್ಸಾಂನ ಬಿ.ಜೆ.ಪಿ ಸರಕಾರ ಉದ್ದೇಶಪೂರ್ವಕವಾಗಿ ಆ ಕುಟುಂಬಗಳನ್ನು ಬಲವಂತವಾಗಿ ಖಾಲಿ ಮಾಡಿಸುತ್ತಿದೆ. 7 ಹಿಂದೂ ಕುಟುಂಬಗಳನ್ನು ಒಂದು ದಿನ ಮೊದಲೇ ಸ್ಥಳಾತರಿಸಿದ್ದಾರೆ ಮತ್ತು ಮುಗ್ಧ ರೈತರ ಮೇಲೆ ದೌರ್ಜನ್ಯ ದಾಳಿ ಎಸಗಿರುವದರ ಪರಿಣಾಮವಾಗಿ 2 ರೈತರ ಹತ್ಯೆ ಆಗಿದ್ದು 5ಜನ ಗಾಯಗೊಂಡಿರುವದನ್ನು ನೋಡಿದರೆ ಸರಕಾರದ ಕೋಮುವಾದೀ ಮನೋಭಾವ ಸ್ಪಷ್ಟವಾಗುತ್ತದೆ ಎಂದರು.


ಈ ಹೋರಾಟಕ್ಕೆ ಬೆಂಬಲ ನೀಡಿರುವ ಅಖಿಲ ಭಾರತ ಕಿಸಾನ್ ಸಭಾದ ಮುಖಂಡ ಪಿ.ಕೃಷ್ಣಪ್ರಸಾದ್ ಬಿಜೆಪಿ ರಾಜ್ಯಸರಕಾರ ಬಹಳ ಕಾಲದಿಂದ ನೆಲೆಗೊಂಡಿರುವ ರೈತರಿಂದ ಭೂಮಿಯನ್ನು ಮತ್ತೆ ವಶಕ್ಕೆ ಪಡೆದುಕೊಳ್ಳಲಾಗುತ್ತಿದೆ ಎನ್ನುತ್ತಲೇ ಬಾಬಾ ರಾಂದೇವ್‌ಗೆ 515 ಹೆಕ್ಟೇರ್ ಬುಡಕಟ್ಟು ಜಮೀನನ್ನು ಯಾವುದೇ ನಾಚಿಕೆಯಿಲ್ಲದೆ ದಾನ ಮಾಡಿದೆ ಎಂದು ಟೀಕಿಸಿದರು.

ಜಗದ ಸುತ್ತ

ಶರತ್ ಚಂದ್ರ

ಟ್ರಂಪ್ ಗೆದ್ದರೆ?!





ಟ್ರಂಪ್ ಗೆದ್ದರೆ ಏನಾದೀತು? ಡೊನಾಲ್ಡ್ ಟ್ರಂಪ್ ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ರಿಪಬ್ಲಿಕನ್ ಅಭ್ಯರ್ಥಿಯಾಗಿದ್ದರೂ, ಇಡೀ ಜಗತ್ತಿನ ಜನ ಈ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಅದಕ್ಕೆ ಅಮೆರಿಕದ ಅಧ್ಯಕ್ಷ (ಅದು ಯಾರೇ ಆಗಿರಲಿ) ಏನು ಮಾಡುತ್ತಾರೆ, ಏನು ಮಾಡುವುದಿಲ್ಲ ಎಂಬುದು ಇಡೀ ಜಗತ್ತಿನ ಜನರ ಬದುಕಿನ ಮೇಲೆ ಪರಿಣಾಮ ಬೀರುತ್ತದೆ ಎಂಬುದು ಒಂದು ಕಾರಣ. ಡೊನಾಲ್ಡ್ ಟ್ರಂಪ್ ಅವರ ಮುಸ್ಲಿಂ-ವಿರೋಧಿ, ಕರಿಯ-ವಿರೋಧಿ, ಉಗ್ರ ಬಲಪಂಥೀಯ ನಿಲುವುಗಳ ಪರಿಣಾಮ ತಮ್ಮ ಮೇಲೆ ಏನಾಗಬಹುದು ಎಂಬ ಆತಂಕ ಅದಕ್ಕಿಂತಲೂ ದೊಡ್ಡ ಕಾರಣ. ಹಲವು ಡೆಮೊಕ್ರಾಟಿಕ್-ರಿಪಬ್ಲಿಕನ್ ಉಭಯ-ಸಮ್ಮತ ನಿಲುವುಗಳನ್ನು ಅವರು ಪ್ರಶ್ನಿಸಿರುವುದು (ಉದಾ. ನಾಟೋ ಖರ್ಚು ಯುರೋಪು ಭರಿಸಬೇಕು, ಟಿಪಿಪಿ ಒಪ್ಪಂದ ತಪ್ಪು) ಅಮೆರಿಕದ ಸ್ಥಾಪಿತ ವ್ಯವಸ್ಥೆಯಲ್ಲೂ ನಡುಕ ತಂದಿದೆ. ಹಿಲೆರಿ ಕ್ಲಿಂಟನ್ ಅಥವಾ ಡೊನಾಲ್ಡ್ ಟ್ರಂಪ್ ಇವರಿಬ್ಬರೂ ನವ-ಉದಾರವಾದಿ ನೀತಿಯನ್ನು ಎತ್ತಿಹಿಡಿಯುವ ಅಮೆರಿಕದ ಆಳುವ ವರ್ಗಗಳ ಪ್ರತಿನಿಧಿಗಳು. ಅವರಲ್ಲಿ ಯಾರು ಗೆದ್ದರೂ ಅಮೆರಿಕದ ದುಡಿಯುವ ವರ್ಗದ ಪರ ಬದಲಾವಣೆಯಾಗಿ ಸ್ಥಿತಿ ಉತ್ತಮಗೊಳ್ಳುವುದಂತೂ ಆಗಲ್ಲ. ಆದರೆ ಟ್ರಂಪ್ ಗೆದ್ದರೆ ಅವರ ಸ್ಥಿತಿ, ಕ್ಲಿಂಟನ್ ಅವರು ಅಧ್ಯಕ್ಷತೆಯಲ್ಲಿ ಅವರ ಸ್ಥಿತಿಗಿಂತ ಕೆಟ್ಟದಾಗುವ ಸಾಧ್ಯತೆ ಹೆಚ್ಚು. ಅಮೆರಿಕ ಮತ್ತು ಜಗತ್ತಿನ ದುಡಿಯುವ ಜನರ ದೃಷ್ಟಿಕೋಣದಿಂದ ಅಧ್ಯಕ್ಷೀಯ ಚುನಾವಣೆಯ ಬಗ್ಗೆ **ಅಮೆರಿಕನ್ ಕಮ್ಯುನಿಸ್ಟ್ ಪಕ್ಷದ ನಾಯಕ ಜೋ ಸಿಮ್ಸ್** ಅವರ ಜತೆ, ಬ್ರೆಜಿಲ್ ಕಮ್ಯುನಿಸ್ಟ್ ಪಕ್ಷದ ಪತ್ರಕರ್ತ **ಲುಸಿವಾನಿಯಾ ನಸಿಮೆಂತೊ** ನಡೆಸಿದ ಸಂದರ್ಶನದ ಆಯ್ದ ಭಾಗಗಳು:

ನಸಿಮೆಂತೊ: ಹಿಲೆರಿ ಮತ್ತು ಟ್ರಂಪ್ ನಡುವಣ ಸ್ಪರ್ಧೆ ತೀಕ್ಷ್ಣವಾಗಿದೆ. ಇತ್ತೀಚಿನ ಸಮೀಕ್ಷೆಗಳ ಪ್ರಕಾರ ಕ್ಲಿಂಟನ್ ಮುನ್ನಡೆ ಶೇ. 2 (44-42) ಕ್ಕೆ ಕುಸಿದಿದೆ. ಟ್ರಂಪ್ ಗೆದ್ದರೆ ಲ್ಯಾಟಿನ್ ಅಮೆರಿಕದ ಮೇಲೆ ಏನು ಪರಿಣಾಮ ಬೀರಬಹುದು?

ಸಿಮ್ಸ್: ಟ್ರಂಪ್ ಬಹಳ ಅಪಾಯಕಾರಿ ಮತ್ತು ಬೊಗಳೆ ರಾಜಕಾರಣಿ. ಆತ ಅಮೆರಿಕ ಮತ್ತು ಮೆಕ್ಸಿಕೊ ನಡುವೆ ಗೋಡೆ ಕಟ್ಟಲು ಹಾಗೂ ಮೆಕ್ಸಿಕೊ ವಲಸೆಗಾರರನ್ನು ಓಡಿಸಲು ಹವಣಿಸುತ್ತಿದ್ದಾರೆ. ವಾಣಿಜ್ಯ ಮತ್ತು ವಲಸೆ ಎರಡು ಮುಖ್ಯ ವಿಷಯಗಳು. ತಾನು ನಾಫ್ಟಾ ಮತ್ತು ಇತರ ವಾಣಿಜ್ಯ ಒಪ್ಪಂದಗಳ ವಿರೋಧಿ ಎಂದು ಹೇಳುತ್ತಾರೆ. ಆದರೆ ಅದು ಚುನಾವಣೆಯ ನಂತರ ಎಷ್ಟರ ಮಟ್ಟಿಗೆ ಇರುತ್ತದೆ ಎಂಬುದು ಸಂಶಯಾಸ್ಪದ. ಏಕೆಂದರೆ ರಿಪಬ್ಲಿಕನ್ ಪಕ್ಷ ಈ ವಾಣಿಜ್ಯ ಒಪ್ಪಂದಗಳನ್ನು ಬೆಂಬಲಿಸುತ್ತದೆ. ವಿದೇಶ ನೀತಿಗೆ ಸಂಬಂಧಿಸಿದಂತೆ ಆತ ಆಕ್ರಾಮಕ ಸಮಾಜವಾದಿ/ಕಮ್ಯುನಿಸ್ಟ್-ವಿರೋಧಿ ನಿಲುವನ್ನು ಮುಂದುವರಿಸುತ್ತಾರೆ. ಬಹುಶಃ ಕ್ಯೂಬಾದ ಜತೆ ಸಂಬಂಧ ಸಾಮಾನ್ಯಗೊಳಿಸುವ ಪ್ರಕ್ರಿಯೆ ನಿಧಾನಗೊಂಡು ನಿಂತು ಹೋಗಬಹುದು. ವೆನೆಜುವೇಲಾ, ಬ್ರೆಜಿಲ್, ಬೊಲಿವಿಯಾ ಮತ್ತು ಇತರೆಡೆ ಬಲಪಂಥೀಯ ಪಕ್ಷಗಳಿಗೆ ಇನ್ನಷ್ಟು ಬೆಂಬಲ ಸಿಗಬಹುದು. ಟ್ರಂಪ್ ಫ್ಯಾಸಿಸ್ಟ್-ಥರದ ಅಪಾಯವನ್ನು ಪ್ರತಿನಿಧಿಸುತ್ತಾರೆ. ಈ ಥರದ ಟ್ರೆಂಡುಗಳನ್ನು ನಿಲ್ಲಿಸದೆ ಏನಾದೀತು ಎಂದು ಹೇಳುವುದು ಕಷ್ಟ.

ನಸಿಮೆಂತೊ: ಬರ್ನಿ ಸ್ಯಾಂಡರ್ಸ್ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿಯಾಗುವ ಹತ್ತಿತ ಹತ್ತಿರ ಬಂದಿದ್ದ. ಆತ ತನ್ನನ್ನು ಸೋಶಲಿಸ್ಟ್ ಎಂದು ಬಿಂಬಿಸಿಕೊಂಡರು. ಏಕ ಪಾವತಿದಾರ ಆರೋಗ್ಯ ಸೇವೆ, ಉಚಿತ ಉನ್ನತ ಶಿಕ್ಷಣ, ಮುಂತಾದ ಪ್ರಗತಿಪರ ನೀತಿಗಳನ್ನು ಹಾಗೂ ವಿದೇಶ ನೀತಿಯಲ್ಲಿ ಪ್ರಮುಖ ಬದಲಾವಣೆಗಳನ್ನು ಪ್ರತಿಪಾದಿಸಿದ. ಬರ್ನಿ ಸ್ಯಾಂಡರ್ಸ್ ಬಗ್ಗೆ ಅಮೆರಿನ್ ಕಮ್ಯುನಿಸ್ಟ್ ಪಕ್ಷದ ನಿಲುವು ಏನಾಗಿತ್ತು?

ಸಿಮ್ಸ್: ಸ್ಯಾಂಡರ್ಸ್ ಪ್ರಚಾರಾಭಿಯಾನ ಮತ್ತು ಆತ ಕರೆ ಕೊಟ್ಟ ರಾಜಕೀಯ ಕ್ರಾಂತಿ ಬಹಳ ಮುಖ್ಯವಾಗಿತ್ತು. ಹಲವು ದಶಕಗಳಲ್ಲೇ ಮೊದಲ ಬಾರಿಗೆ ಸಮಾಜವಾದದ ಪರಿಕಲ್ಪನೆಯನ್ನು ಅಮೆರಿಕನ್ ಜನತೆಯ ಮುಂದೆ ವ್ಯಾಪಕವಾಗಿ ಇಟ್ಟಿತು. ಬದಲಾವಣೆಯತ್ತ ಚುನಾವಣಾ ಪಥ ಸಹ ಕಾರ್ಯಸಾಧ್ಯ ಎಂದೂ ಸ್ಯಾಂಡರ್ಸ್ ಪ್ರಚಾರಾಭಿಯಾನ ತೋರಿಸಿಕೊಟಿದೆ. ಅದೂ ಮುಖ್ಯವಾದುದು. ಇವೆಲ್ಲಾ ಕಾರಣಗಳಿಂದಾಗಿ ಅಮೆರಿಕ ಹಲವು ರೀತಿಯಲ್ಲಿ ಮೊದಲಿನಂತೆ ಎಂದೂ ಇರಲಾರದು. ನಮ್ಮ ಸದಸ್ಯರು ಸ್ಥಳೀಯ ಮಟ್ಟದಲ್ಲಿ ಪ್ರಚಾರಾಭಿಯಾನದಲ್ಲಿ ಸಕ್ರಿಯರಾಗಿದ್ದರು. ಕೆಲವರು ಕ್ಲಿಂಟನ್ ಬೆಂಬಲಾರ್ಥವಾಗಿಯೂ ಕೆಲಸ ಮಾಡಿದರು. ಆದರೆ ಹೆಚ್ಚಿನವರು ಸ್ಯಾಂಡರ್ಸ್ ಪ್ರಚಾರಾಭಿಯಾನದಲ್ಲಿ ಕೆಲಸ ಮಾಡಿದರು.

ನಾವು ಸ್ಯಾಂಡರ್ಸ್ ಅವರ ಎಲ್ಲವನ್ನೇನೂ ಒಪ್ಪಿಕೊಂಡಿರಲಿಲ್ಲ. ಆತನ ಪ್ರಚಾರಾಭಿಯಾನದಲ್ಲೂ ಕೆಲವು ಸಮಸ್ಯೆಗಳಿದ್ದವು. ಸಮಾಜವಾದದ ಬಗೆಗ ನಮ್ಮ ಪರಿಕಲ್ಪನೆ ಸ್ಯಾಂಡರ್ಸ್ ಅವರದ್ದಕ್ಕಿಂತ ಭಿನ್ನವಾಗಿತ್ತು. ಅಮೆರಿಕದ ರಾಷ್ಟ್ರೀಯ ಪ್ರಶ್ನೆಯನ್ನು ಸ್ಯಾಂಡರ್ಸ್ ಪ್ರಚಾರಾಭಿಯಾನ ಪರಿಗಣಿಸಲಿಲ್ಲ. ವರ್ಣಭೇಧ ಮತ್ತು ಅದರ ಪರಿಣಾಮಗಳನ್ನು ಸ್ಯಾಂಡರ್ಸ್ ನಿರ್ಲಕ್ಷಿಸಿದರು. ಪ್ರಚಾರಾಭಿಯಾನ ಮುಂದುವರೆದಂತೆ ಕೆಲವು ಬದಲಾವಣೆಗಳನ್ನು ಮಾಡಿಕೊಂಡರು. ಆದರೆ ಆ ಪ್ರಚಾರಾಭಿಯಾನದ ಸಕಾರಾತ್ಮಕ ಅಂಶಗಳು ನಕಾರಾತ್ಮಕ ಅಂಶಗಳನ್ನು ಬಹುವಾಗಿ ಮೀರಿಸಿದ್ದವು. ಅದು ಚಾರಿತ್ರಿಕವಾಗಿತ್ತು, ಸ್ಫೂರ್ತಿದಾಯಕವಾಗಿತ್ತು, ಮುಂಬರುವ ವರ್ಷಗಳಲ್ಲಿ ಬಹಳ ಪ್ರಮುಖ ಬೆಳವಣಿಗೆಗಳ ಹರಿಕಾರನಾಗಿತ್ತು.

ನಸಿಮೆಂತೊ: ಅಮೆರಿಕ ಮತ್ತು ಯುರೋಪುಗಳ ನಡುವೆ ಶಕ್ತಿ ಸಮತೋಲನದ ಬಗ್ಗೆ ಅಮೆರಿಕನ್ ಕಮ್ಯುನಿಸ್ಟ್ ಪಕ್ಷದ ಅಂದಾಜು ಏನು? ಈ ಸಮತೋಲನವನ್ನು ಟ್ರಂಪ್ ಚುನಾವಣೆ ಬದಲಾಯಿಸುವುದೇ?

ಸಿಮ್ಸ್ : ಅಮೆರಿಕ ಮತ್ತು ಯುರೋಪುಗಳ ಆಳುವ ವರ್ಗಗಳು ಒಂದೇ ನಿಲುವು ಹೊಂದಿವೆ. ಬ್ರೆಕ್ಸಿಟ್ ಸ್ವಲ್ಪ ಮಟ್ಟಿಗೆ ಇದನ್ನು ಬದಲಾಯಿಸಿದೆ ಎಂಬುದು ನಿಜ. ನವ-ಉದಾರವಾದ ಅದರ ರಾಜಕೀಯ ಮಿತಿಗಳನ್ನು ಮುಟ್ಟಿದೆ ಎಂದು ಕೆಲವರ ಅಭಿಮತ. ಆದರೆ ಅದರ ಆರ್ಥಿಕ ಮಿತಿಯ ವಿಷಯವೇ ಬೇರೆ? ಸ್ಯಾಂಡರ್ಸ್ ಮತ್ತು ಟ್ರಂಪ್ ಇಬ್ಬರಿಗೂ ಸಿಕ್ಕಿದ ವ್ಯಾಪಕ ಬೆಂಬಲಕ್ಕೆ ಪ್ರಮುಖ ಕಾರಣ ಆರ್ಥಿಕ ಪರಿಸ್ಥಿತಿ ಬಗ್ಗೆ - ಸ್ಥಗಿತಗೊಂಡ ವೇತನಗಳು, ನಿರುದ್ಯೋಗ ಇತ್ಯಾದಿ - ದುಡಿಯುವ ವರ್ಗದ ಅತೃಪ್ತಿ. ಇಂತಹ ಪರಿಸ್ಥಿತಿಯಲ್ಲಿ ದುಡಿಯುವ ವರ್ಗದ ಹಿತಾಸಕ್ತಿಗಳನ್ನು ಎತ್ತಿ ಹಿಡಿಯುವುದು ಎಡ ಮತ್ತು ದುಡಿಯುವ ವರ್ಗದ ಚಳುವಳಿಯ ಮುಂದಿರುವ ಪ್ರಮುಖ ಸವಾಲು. ಟ್ರಂಪ್ ಗೆದ್ದರೆ ಯುರೋಪಿನ ಯಥಾಸ್ಥಿತಿಗೆ ಸವಾಲು ಹಾಕುತ್ತಾರೆ ಎಂಬುದರ ಬಗ್ಗೆ ಸಂಶಯವಿದೆ. ಅವರು ನಾಟೋ ವನ್ನು ಟೀಕಿಸಿದ್ದಾರೆ. ಅದರ ಪ್ರಯೋಜನಗಳ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ಆದ್ದರಿಂದ ಆತ ಅಧ್ಯಕ್ಷರಾಗಲು ನಾಲಾಯಕ್ಕು ಎಂದು ಅಮೆರಿಕದ ವಿದೇಶ ನೀತಿ ಸ್ಥಾಪಿತ ವ್ಯವಸ್ಥೆ (ಅವರಲ್ಲಿ ಹಲವರು ರಿಪಬ್ಲಿಕನರೂ ಇದ್ದಾರೆ) ಎಂದು ಸಾರಿದ್ದಾರೆ.

ನಸಿಮೆಂತೊ: ರಾಜಕೀಯ ಮತ್ತು ಸಾಮಾಜಿಕ ಹೋರಾಟಗಳ ನಿಮ್ಮ ದೃಷ್ಟಿಕೋಣದಿಂದ, ಅಮೆರಿಕ, ಯುರೋಪು, ಮತ್ತು ಲ್ಯಾಟಿನ್ ಅಮೆರಿಕಗಳಲ್ಲಿ ಉಗ್ರ ಬಲಪಂಥ ಉದಯಿಸಿದೆ ಎಂದು ನಿಮಗೆ ಅನಿಸುತ್ತದೆಯೇ? ಈ ಪ್ರವೃತ್ತಿ ಯಾವ ಟ್ರೆಂಡನ್ನು ಸೂಚಿಸುತ್ತದೆ?

ಸಿಮ್ಸ್ : ನಾನು ಲ್ಯಾಟಿನ್ ಅಮೆರಿಕ ಮತ್ತು ಯುರೋಪುಗಳ ಬಗೆಗಿನ ಪರಿಣತನೇನೂ ಅಲ್ಲ. ಅಮೆರಿಕದ ಬಗ್ಗೆ ಹೇಳುವುದಾದರೆ ಅದು ಆಳದಲ್ಲಿ ಒಡೆದಿದೆ. 2008ರಲ್ಲಿ ಆರ್ಥಿಕ ಬಿಕ್ಕಟ್ಟಿನ ಮಧ್ಯೆ ಒಬಾಮ ಚುನಾಯಿತರಾದ್ದು, ಬಲಪಂಥ-ಕ್ಕೆ ಹಿನ್ನಡೆ ಆಗಿತ್ತು ಎಂದು ನಾನು ನಂಬುತ್ತೇನೆ. ಆದರೆ ಅದೊಂದು ಅಸಮಗ್ರ ಅಪೂರ್ಣ ಹಿನ್ನಡೆ ಆಗಿತ್ತು. ಮತ್ತು ಅದರಿಂದ ಅದು ಬೇಗನೇ ಚೇತರಿಸಿಕೊಂಡಿತು. ಬಹುಸಂಖ್ಯಾತರ ಅಭಿಪ್ರಾಯಕ್ಕೆ ಸಂಬಂಧಿಸಿದಂತೆ ಜನ ಎಲ್ಲಿದ್ದಾರೆ ಎಂದು ಹೇಳುವುದಾದರೆ, ಇಲ್ಲಿ ಪ್ರಬಲ ಪ್ರಜಾಸತ್ತಾತ್ಮಕ ತೊರೆಗಳು ಇವೆ. ಅದೇ ಸಮಯದಲ್ಲಿ ಬಲಪಂಥವೂ ಪ್ರಬಲವಾಗಿದೆ. ಅದು ಅಮೆರಿಕದ ಸೆನೆಟ್, ಕಾಂಗ್ರೆಸ್ ಮತ್ತು ಬಹುಸಂಖ್ಯಾತ ಪ್ರಾಂತೀಯ ವಿಧಾನಸಭೆಗಳು ಹಾಗೂ ಗವರ್ನರುಗಳನ್ನು ನಿಯಂತ್ರಿಸುತ್ತದೆ.

ಆದರೆ ಸಮಸ್ಯೆಯೆಂದರೆ, ನಾನು ಈಗಾಗಲೇ ಹೇಳಿದ ಹಾಗೆ ಕಳೆದ 20-30 ವರ್ಷಗಳಷ್ಟು ದೀರ್ಘಕಾಲ ಜನರ ಬದುಕು ಉತ್ತಮಗೊಳಿಸಲು ಬಂಡವಾಳಶಾಹಿಗೆ ಸಾಧ್ಯವಾಗಿಲ್ಲ. ನಿಬಂಧನಾರಾಹಿತ್ಯ, ಖಾಸಗೀಕರಣ, 'ಮುಕ್ತ' ವಾಣಿಜ್ಯ ಒಪ್ಪಂದಗಳು ಮತ್ತು ಮಿತವ್ಯಯ ನೀತಿಗಳಿಂದ ಅಸಮಾನತೆಗಳು ಹೆಚ್ಚಿವೆ. ಬಲಪಂಥ ಇವನ್ನು ಬಳಸಿಕೊಂಡಿದೆ. ಬಲಪಂಥ ಪ್ರಬಲವಾಗಿದೆಯೋ ಇಲ್ಲವೋ ಎಂದು ನಾನು ಹೇಳಲಾರೆ. ಆದರೆ ಅದು ಹೆಚ್ಚೆಚ್ಚು ಆಕ್ರಾಮಕವಾಗುತ್ತಿದೆ. ಕಾನೂನಬಾಹಿರ ವಿಧಾನಗಳಿಂದಲೂ ಅಧಿಕಾರಕ್ಕೆ ಬರಲು ಹೇಸುವುದಿಲ್ಲ. ಇದಕ್ಕೆ ಒಳ್ಳೆಯ ಉದಾಹರಣೆ ಬ್ರೆಜಿಲಿನ ಬಲಪಂಥದ ಕ್ಷಿಪ್ರಕ್ರಾಂತಿ. ಇದು ಅದನ್ನು ಇನ್ನಷ್ಟು ಅಪಾಯಕಾರಿಯಾಗಿಸುವಂತಹುದು. ಅಮೆರಿಕದಲ್ಲೂ ಟ್ರಂಪ್ ಚುನಾವಣೆ ಕ್ರಮಬದ್ಧವಾಗಿರುತ್ತದೆಯೇ ಎಂದು ಈಗಲೇ ಕೇಳುತ್ತಿದ್ದಾರೆ. ಆಗದಿದ್ದರೆ, ಮುಂದೇನು? ಎನ್ನುವ ಪ್ರಶ್ನೆಯೇ ಪ್ರಚೋದನಕಾರಿ. ●



ಭಗತ್ ಸಿಂಗ್ ಜನ್ಮದಿನೋತ್ಸವ... ಪುಟ 16 ರಿಂದ

ಕಮರ್ಷಿಯಲ್ ಫ್ರಾಕ್ಟೀಸ್ ಪಾಲಿಟೆಕ್ನಿಕ್‌ನಲ್ಲಿ 'ಭಗತ್ ಸಿಂಗ್‌ರ ಕನಸಿನ ಭಾರತ' ಎಂಬ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿತ್ತು. ವಿಚಾರ ಸಂಕಿರಣವನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಜಂಟಿ ನಿರ್ದೇಶಕರಾದ ಹೆಚ್.ಎಸ್.ಜಯಕುಮಾರ್ ಉದ್ಘಾಟಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಎಂ.ಕಮಲಾಕ್ಷಿರವರು ವಹಿಸಿದ್ದರು. ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಚಿಕ್ಕರಾಜು ಎಸ್., ಜಿಲ್ಲಾ ಉಪಾಧ್ಯಕ್ಷರಾದ ವೇಗಾನಂದ ಎಸ್., ಸಹ ಕಾರ್ಯದರ್ಶಿ ಶ್ರುತಿ ನೆಲಮಾಕನಹಳ್ಳಿ ಮತ್ತಿತರರು ಉಪಸ್ಥಿತರಿದ್ದರು.

ರಾಯಚೂರು

ರಾಯಚೂರು ಜಿಲ್ಲೆಯ ಜಾಲಹಳ್ಳಿಯಲ್ಲಿ ಭಗತ್‌ಸಿಂಗ್‌ರವರ 109ನೇ ಜನ್ಮದಿನಾಚರಣೆ ಅಂಗವಾಗಿ ಭಗತ್‌ಸಿಂಗ್‌ರ ಕನಸಿನ ಭಾರತ ಕುರಿತು ವಿಚಾರ ಸಂಕಿರಣವನ್ನು ಸೆಪ್ಟಂಬರ್ 27ರಂದು ಎಸ್‌ಎಫ್‌ಐ ವತಿಯಿಂದ ಹಮ್ಮಿಕೊಳ್ಳಲಾಗಿತ್ತು. ಮುಖಂಡರಾದ ನರಸಣ್ಣ ನಾಯಕ, ಶಬ್ಬೀರ್, ಭೀಮಣ್ಣ ಗುಮೇದಾರ್, ರಂಗಣ್ಣ ಕೊಲ್ಕರ, ತಿಮ್ಮಣ್ಣ ನಾಯಕ, ದಿವಾಣ ಗುರುನಾಯಕ, ಬಸವರಾಜ ವಂದ್ಲಿ, ಶ್ರೀನಿವಾಸ್ ತಿಂಪೂರ, ಲಿಂಗಣ್ಣ ಮಕಾಸಿ ಮುಂತಾದವರು ಭಾಗವಹಿಸಿದ್ದರು.

ಬಳ್ಳಾರಿ

ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಕೆ.ಎಸ್.ಪಿ.ಎಲ್. ಕಾಲೇಜಿನಲ್ಲಿ ಭಗತ್‌ಸಿಂಗ್‌ರ ಕನಸಿನ ಭಾರತ ಎಂಬ ಬಗ್ಗೆ ವಿಚಾರ ಸಂಕಿರಣ ನಡೆಸಲಾಗಿದೆ. ತಾಲ್ಲುಕು ಕಾರ್ಯದರ್ಶಿ ವಸಂತ್ ಕಲಾಲ್ ವಿಷಯ ಮಂಡಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪಿಯುಸಿ ಪ್ರಾಂಶುಪಾಲರಾದ ಮಲ್ಲಿಕಾರ್ಜುನರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶಿಕ್ಷಕರಾದ ಫಯಾಜ್, ಎಸ್‌ಎಫ್‌ಐ ತಾಲ್ಲೂಕು ಸದಸ್ಯರಾದ ಶಿವಕುಮಾರ್, ಬಾಲಕೃಷ್ಣ ಅರ್ಜುನ್ ನಾಯ್ಕ್, ಇನ್ಸಾಫ್ ಹಾಗೂ ಮಹೇಶ್ ಮತ್ತಿತರರು ಭಾಗವಹಿಸಿದ್ದರು.

ಗದಗ

ಸೆಪ್ಟಂಬರ್ 27ರಂದು ಗದಗ ಜಿಲ್ಲೆಯ ಗಜೇಂದ್ರಗಡದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ದೇಶಪ್ರೇಮದೆಡೆಗೆ ನಮ್ಮ ನಡಿಗೆ ಎಂಬ ಕಾರ್ಯಕ್ರಮವನ್ನು ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು. ●

JANASHAKTHI KANNADA VARA PATRIKE OCTO 09, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026
RNI No. KARKAN /2006/17926 Posted on every Satuarday
Licensed to Post without prepayment License No. WPP-283









ಭಗತ್ ಸಿಂಗ್ ಜನ್ಮದಿನೋತ್ಸವ

ಭಗತ್ ಸಿಂಗ್ ಜನ್ಮದಿನೋತ್ಸವವನ್ನು ರಾಜ್ಯದ ಹಲವು ಕಡೆ ನಡೆದ ವರದಿಗಳು

ಹಾವೇರಿ

23ನೇ ವಯಸ್ಸಿಗೆ ನೇಣುಗಂಭವೇರಿ ಹುತಾತ್ಮರಾದ ಭಗತ್ ಸಿಂಗ್, ರಾಜಗುರು, ಸುಖದೇವ್ ಅವರ ನೆನಪ ಸದಾಕಾಲ ಚಿರಸ್ಥಾಯಿಯಾಗಿ ಉಳಿಯುತ್ತದೆ. ಕೊರಳಿಗೆ ಹಗ್ಗದ ಕುಣಿಕೆ ಬೀಳುವಾಗ 'ನನ್ನ ನಂಬಿಕೆಗಳನ್ನು ಎಂದೂ ಬಿಟ್ಟುಕೊಡಲ್ಲ, ಈ ಕ್ಷಣದಲ್ಲಿ ದೇಶಕ್ಕಾಗಿ ನನ್ನನ್ನು ಅರ್ಪಿಸಿಕೊಂಡಿದ್ದೇನೆ. ಇದು ನನಗೆ ಸಿಕ್ಕ ಪುರಸ್ಕಾರ' ಎಂದವರು ಭಗತ್, ಭಗತ್‌ಸಿಂಗ್ ಕೇವಲ ಕ್ರಾಂತಿಕಾರಿ ಹೋರಾಟಗಾರ ಅಲ್ಲದೆ ಅವರೊಬ್ಬ ಅಧ್ಯಯನಶೀಲರು ಆಗಿದ್ದರು, ವಿಶ್ವದ ವಿವಿಧ ಭಾಗಗಳಲ್ಲಿ ನಡೆಯುತ್ತಿದ್ದ ಕ್ರಾಂತಿಗಳನ್ನು ಅಧ್ಯಯನ ಮಾಡುತ್ತಿದ್ದರು, ಅವರ ಅಧ್ಯಯನ ವೈಚಾರಿಕತೆಯಿಂದ ಕೂಡಿತ್ತು, ನಾಸ್ತಿಕವಾದಿಯಾದವರು ಭಗತ್‌ಸಿಂಗ್. ದೇಶಕ್ಕಾಗಿ ಹೋರಾಡಿದ ಕ್ರಾಂತಿಕಾರಿ ಭಗತ್‌ಸಿಂಗ್‌ರವರ ತ್ಯಾಗ, ಅವರ ಹೋರಾಟ ಅವಿಸ್ಮರಣೀಯವಾದುದು, ಎಂದು ಸತೀಶ್ ಕುಲಕರ್ಣಿ ಸ್ಮರಿಸಿಕೊಂಡರು.

ಭಾರತ ವಿದ್ಯಾರ್ಥಿ ಫೆಡರೆಷನ್ (ಎಸ್‌ಎಫ್‌ಐ), ಹಾವೇರಿ ಜಿಲ್ಲಾ ಸಮಿತಿಯು ನಗರದ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದಲ್ಲಿ ಸೆಪ್ಟಂಬರ್ 28ರಂದು ಏರ್ಪಡಿಸಿದ್ದ ಭಗತ್‌ಸಿಂಗ್‌ರವರ 110ನೇ ಜನ್ಮ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ್ದ ಭಗತ್ ಸಿಂಗ್ ಸಿನಿಮಾ ಪ್ರದರ್ಶನ ಹಾಗೂ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು.

ಭಗತ್‌ಸಿಂಗ್, ರಾಜಗುರು, ಸುಖದೇವ್ ತರಹದ ತ್ರಿವಳಿ ಕ್ರಾಂತಿಕಾರಿಗಳು ಹಾವೇರಿ ಭಾಗದ ಮೈಲಾರ ಮಹದೇವಪ್ಪ, ತಿರುಕಪ್ಪ ಮಡಿವಾಳರ, ವೀರಯ್ಯ ಹಿರೇಮಠ ಕೂಡಾ ಆಗಿದ್ದರು ಎಂದರು.

ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಸುಭಾಸ ಎಂ ಮಾತನಾಡಿ "ಭಗತ್‌ಸಿಂಗ್ ಕಂಡ ಕನಸಿನ ಭಾರತವನ್ನು ನಿರ್ಮಾಣವಾಗಲಿ, ಸಮಸಮಾಜವನ್ನು ನಿರ್ಮಿಸುವ, ಶೋಷಣಾರಹಿತ ಸಮಾಜ, ಸಮಾಜವಾದಿ ಭಾರತದ ಕನಸನ್ನು ಕಂಡ ಅವರು ಹಿಂದೂಸ್ತಾನ ಸೋಷಿಯಲಿಸ್ಟ್ ರಿಪಬ್ಲಿಕ್ ಅಸೋಷಿಯೇಶನ್ ಕಟ್ಟಿದರು. ಸಂಪೂರ್ಣ ಸ್ವತಂತ್ರ ಭಾರತವನ್ನಾಗಿ ನಿರ್ಮಿಸುವ ಕನಸು ಕಂಡಿದ್ದರು ಎಂದರು.

ವಸತಿ ನಿಲಯದ ನಿಲಯ ಪಾಲಕರಾದ ಕೆ.ಬಿ.ಕಾಂಬ್ಳೆ, ಸದಾನಂದಮೂರ್ತಿ ವೇದಿಕೆ ಮೇಲಿದ್ದರು. ಎಸ್‌ಎಫ್‌ಐ ಮುಖಂಡರಾದ ಬಸನಗೌಡ ಭರಮಗೌಡ್ರ ಕಾರ್ಯಕ್ರಮವನ್ನು ನಿರ್ವಹಿಸಿದದರು.

ಹಾಸನ:

ಹಾಸನದಲ್ಲಿ ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ನೇತೃತ್ವದಲ್ಲಿ ವಿದ್ಯಾರ್ಥಿ–ಯುವಜನ ಸಂಘಟನೆಗಳೊಂದಾಗಿ ಶಹೀತ್ ಭಗತ್‌ಸಿಂಗ್‌ರವರ ಜನ್ಮದಿನಾಚರಣೆ ಅಂಗವಾಗಿ ಸೆಪ್ಟಂಬರ್ 27ರಂದು "ದೇಶಪ್ರೇಮದೆಡೆಗೆ ನಮ್ಮ ನಡಿಗೆ" ಎಂಬ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿತ್ತು. ಉಪನ್ಯಾಸಕರು, ಪ್ರಗತಿಪರ ಚಿಂತಕರೂ ಆದ ಡಾ.ಸಿ.ಚ.ಯತೀಶ್ವರ ರವರು ಹಾಸನದ ಹೇಮಾವತಿ ಪ್ರತಿಮೆ ಬಳಿ ಸೈಕಲ್ ಜಾಥಾವನ್ನು ಉದ್ಘಾಟಿಸಿ ಮಾತನಾಡಿದರು.

ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ಸೈಕಲ್ ಜಾಥಾದ ನೇತೃತ್ವವನ್ನು ಎಸ್‌ಎಫ್‌ಐ ಮಾಜಿ ರಾಜ್ಯ ಅಧ್ಯಕ್ಷರಾದ ಎಚ್.ಆರ್.ನವೀನ್‌ಕುಮಾರ್, ಮುಖಂಡರಾದ ಎಂ.ಜಿ.ಪೃಥ್ವಿ, ವಾಸುದೇವ್, ಪ್ರದೀಪ್, ಆಶಾ, ಮಹೇಶ್, ವಿನೋದ್, ರಕ್ಷಿತಾ, ರಕ್ಷಾ, ನಿತಿನ್, ಕಿರಣ್ ಮುಂತಾದ ಮುಖಂಡರು ವಹಿಸಿದ್ದರು.

ಇದೇ ಸಂದರ್ಭದಲ್ಲಿ ಹಾಸನ ಫಿಲಂ ಸೊಸೈಟಿ ಸಹಯೋಗದೊಂದಿಗೆ 'ದಿ ಲೆಜೆಂಡ್ ಆಫ್ ಭಗತ್ ಸಿಂಗ್' ಪ್ರದರ್ಶನವನ್ನು ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಆಯೋಜಿಸಲಾಗಿತ್ತು.

ಬೀದರ್:

ಸೆಪ್ಟಂಬರ್ 28ರಂದು ಬೀದರ್ ನಗರದ ಭಗತ್‌ಸಿಂಗ್ ವೃತ್ತದಲ್ಲಿ ಎಸ್‌ಎಫ್‌ಐ ವತಿಯಿಂದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ರಾಜ್ಯ ಉಪಾಧ್ಯಕ್ಷರಾದ ಮಹಮ್ಮದ್ ಶಬ್ಬೀರ್ ಮಾತನಾಡಿ "ಭಗತ್‌ಸಿಂಗ್ ಹಣೆಗೆ ಕೇಸರಿ ತಿಲಕ ಇಡುವತ್ತ ಸಂಘ ಪರಿವಾರ ಕಸರತ್ತು ನಡೆಸುತ್ತಿದೆ. ಭಾರತ ದೇಶಕ್ಕೆ ಕಮ್ಯೂನಿಸ್ಟ್ ಸಿದ್ಧಾಂತದ ಆಧಾರದಲ್ಲಿ ಸ್ವಾತಂತ್ರ್ಯ ದೊರೆಯಬೇಕೆಂದು ತನ್ನ ಸ್ನೇಹಿತರೊಂದಿಗೆ ರಷ್ಯನ್ ಕ್ರಾಂತಿಯ ಇತಿಹಾಸವನ್ನು ಅರಿತು ತ್ಯಾಗ, ಬಲಿದಾನಗಳಂತಹ ಮಾರ್ಗಗಳನ್ನು ತುಳಿದರು. ಅದಕ್ಕಾಗಿ ಭಗತ್‌ಸಿಂಗ್ ಅವರು ಕ್ರಾಂತಿಕಾರಿ ಹೋರಾಟಗಾರರಾಗಿ ಹೊರಹೊಮ್ಮಿದರು ಎಂದರು.

ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಅರುಣ ಕೋಡಗೆ, ಮಾಜಿ ಜಿಲ್ಲಾಧ್ಯಕ್ಷರಾದ ವಿಜಯಕುಮಾರ ಸೊನಾರೆ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಸಾಪ ತಾಲ್ಲೂಕು ಅಧ್ಯಕ್ಷ ಎಂ.ಎಸ್.ಮನೋಹರ, ಜಿಲ್ಲಾ ಗ್ರೂಪ್ ಡಿ ನೌಕರರ ಸಂಘದ ಅಧ್ಯಕ್ಷರಾದ ಬಿರು ಸಿಂಗ್, ಅವಿನಾಶ ಪಾಟೀಲ, ಗಣೇಶ ಉಪ್ಪೆ, ಆಕಾಶ ಸತಾರೆ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬೆಂಗಳೂರು

ಎಸ್‌ಎಫ್‌ಐ ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಸೆಪ್ಟಂಬರ್ 24ರಂದು ನಗರದದ ಸರ್ಕಾರಿ ಜಿ.ಆರ್. ಇನ್ಸಿಟಿಯೂಟ್ ಆಫ್

ಪುಟ 15 ಕ್ಕೆ



ಪುಣೆಯಿಂದ ಧಾರವಾಡವರೆಗೆ ಬೈಕ್ ಜಾಥಾ


ಪುಣೆಯಿಂದ ಧಾರವಾಡಕ್ಕೆ ಸೆಪ್ಟಂಬರ್ 25ರಂದು ಆಗಮಿಸಿದ 'ಫ್ಯಾಸಿಸಂ ಧಿಕ್ಕರಿಸಿ, ಪ್ರಜಾಪ್ರಭುತ್ವ ಉಳಿಸಿ' ಬೈಕ್ ಜಾಥಾವನ್ನು 'ಡಾ|. ಕಲಬುರ್ಗಿ, ಪನ್ಸಾರೆ, ಧಾಬೋಲ್ಕರ್ ಹತ್ಯಾ ವಿರೋಧಿ ಹೋರಾಟ ಸಮಿತಿ'ಯಿಂದ ಧಾರವಾಡದ ಬೈಪಾಸ್ ಹತ್ತಿರ ಸ್ವಾಗತಿಸಲಾಯಿತು.

ಧಾರವಾಡದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಟೌನ್‌ಹಾಲ್‌ನಲ್ಲಿ ಸಮಾರೋಪಗೊಳಿಸಲಾಯಿತು. ನಂತರ ನಡೆದ ಕಾರ್ಯಕ್ರಮದಲ್ಲಿ ಗದಗಿನ ತೋಂಟದಾರ್ಯ ಸ್ವಾಮಿಗಳು ಹಾಗೂ ಪುಣೆಯಿಂದ ಆಗಮಿಸಿದ ಪ್ರಗತಿಪರ ಸಂಘಟನೆಗಳ ಮುಖಂಡರು, ಧಾರವಾಡದ ಪ್ರಗತಿಪರ ಸಂಘಟನೆಗಳ ಮುಖಂಡರು ಮಾತನಾಡಿದರು.

ಬೈಕ್ ಜಾಥಾದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್‌ಐ), ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಮತ್ತಿತರ ಸಂಘಟನೆಗಳು ಸಹ ಭಾಗವಹಿಸಿದ್ದವು.



ಹೆಚ್.ಆರ್. ನವೀನ್‌ಕುಮಾರ್



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**